ಶುಕ್ರವಾರ, ಸೆಪ್ಟೆಂಬರ್ 15, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 257 | ಪುಟ 12
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಬೆಳ್ಳಿತೆರೆಗೆ ಮತ್ತೆ ಹೆಜ್ಜೆ ಇಟ್ಟಿರುವ ಮೇಘನಾ ರಾಜ್ ಮತ್ತಷ್ಟು ಸಿನಿಮಾಗಳನ್ನು ಮಾಡಲು ಉತ್ಸುಕರಾಗಿದ್ದಾರೆ

ಆಳ-ಅಗಲ ಬಾವಲಿಗಳು ಎಲ್ಲೆಡೆ ಇದ್ದರೂ ಕೇರಳದಲ್ಲಷ್ಟೇ ಏಕೆ ನಿಪಾ?
161 ತಾಲ್ಲೂಕುಗಳಲ್ಲಿ ತೀವ್ರ, 34ರಲ್ಲಿ ಸಾಧಾರಣ ಬರ 7
ದಾಭೋಲ್ಕರ್ ಹತ್ಯೆ ಪ್ರಕರಣ: ವಿಚಾರಣೆ ಪೂರ್ಣ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
67,519 ▲	20,103 ▲	₹60,550 (ಬೆಂಗಳೂರು)	₹72,600 (ಬೆಂಗಳೂರು) ▼	83.03 ▼

ವಾಣಿಜ್ಯ ತೆರಿಗೆ ಸಂಗ್ರಹ ಬೆಳವಣಿಗೆ ದರ ಶೇ 20ರಷ್ಟು: ಮುಖ್ಯಮಂತ್ರಿ ಮೆಚ್ಚುಗೆ

ತೆರಿಗೆ ಸಂಗ್ರಹ: ರಾಜ್ಯ ನಂ.1

ತೆರಿಗೆ ಸಂಗ್ರಹ (₹ ಕೋಟಿಗಳಲ್ಲಿ)

	ವಾಣಿಜ್ಯ	ಅಬಕಾರಿ	ನೋಂದಣಿ	ಸಾರಿಗೆ
ವಾರ್ಷಿಕ ಗುರಿ	1,01,000	36,000	25,000	11,500
ಆಗಸ್ಟ್ ಅಂತ್ಯದವರೆಗೆ (ಆವರಣದಲ್ಲಿ ಹಿಂದಿನ ವರ್ಷದ್ದು)	37,696 (32,571)*	15,123 (13,256)	7,386 (8,074)	4,500 (4,300)

*ಸರಕು ಮತ್ತು ಸೇವಾ ತೆರಿಗೆ ಸೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ವಾಣಿಜ್ಯ ತೆರಿಗೆ ಸಂಗ್ರಹದ ಬೆಳವಣಿಗೆ ದರ ಶೇ 19.2ರಷ್ಟಿದ್ದು, ಈ ಬೆಳವಣಿಗೆ ದರ ಇಡೀ ದೇಶದಲ್ಲಿಯೇ ಅತಿ ಹೆಚ್ಚು. ಆ ಮೂಲಕ, ಸರಕು ಮತ್ತು ಸೇವಾ ತೆರಿಗೆ ಮತ್ತು ಮಾರಾಟ ತೆರಿಗೆ ಸಂಗ್ರಹದ ಸಾಧನೆಯಲ್ಲಿ ಕರ್ನಾಟಕವು ದೇಶಕ್ಕೆ ನಂಬರ್ ಒನ್ ಎನಿಸಿಕೊಂಡಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿ, ರಾಜ್ಯದ ಸಾಧನೆಗೆ ಗುರುವಾರ ಮೆಚ್ಚುಗೆ ವ್ಯಕ್ತಪಡಿಸಿದರು.

‘ದೇಶದ ಒಟ್ಟಾರೆ ತೆರಿಗೆ ಸಂಗ್ರಹದಲ್ಲಿ ರಾಜ್ಯದ ಪಾಲು ಶೇ 9.4ರಷ್ಟಿದೆ. ಕಳೆದ ಬಾರಿಗಿಂತ ಈ ಬಾರಿ ರಾಜ್ಯದ ಪಾಲು ಹೆಚ್ಚಾಗಿದೆ’ ಎಂದು ಅಧಿಕಾರಿಗಳು ವಿವರಿಸಿದರು.

7ನೇ ಪುಟ ನೋಡಿ

ಕಳ್ಳಬಟ್ಟಿಗೆ ಕಡಿವಾಣ ಅಗತ್ಯ: ಸಿ.ಎಂ

‘ಕಳ್ಳಬಟ್ಟಿಗೆ ಕಡಿವಾಣ ಹಾಕಿ, ಅಕ್ರಮ ಮದ್ಯ ನುಸುಳುವಿಕೆ ತಪ್ಪಿಸಿ, ಬಾಕಿ ತೆರಿಗೆ ವಸೂಲಿ ಮಾಡಿ ತೆರಿಗೆ ಸಂಗ್ರಹದಲ್ಲಿ ನಿಗದಿತ ಗುರಿ ಸಾಧಿಸಬೇಕು’ ಎಂದು ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದರು.

ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿ, ‘ಪ್ರಸಕ್ತ ವರ್ಷದ ರಾಜಸ್ವ ಸಂಗ್ರಹ ಗುರಿ ₹36 ಸಾವಿರ ಕೋಟಿ. ತೆರಿಗೆ ಸಂಗ್ರಹದ ಬೆಳವಣಿಗೆ ದರ ಶೇ 5.31ರಷ್ಟಿದೆ. ನಿಗದಿತ ಗುರಿ ಸಾಧನೆಗೆ ಎಲ್ಲರೂ ಶ್ರಮಿಸಬೇಕು’ ಎಂದರು.

‘ಗಡಿ ಭಾಗಗಳಲ್ಲಿ, ವಿಶೇಷವಾಗಿ ಗೋವಾ ರಾಜ್ಯದಿಂದ ಅಕ್ರಮ ಮದ್ಯ ಸಾಗಣೆ ಕುರಿತು ಜಾರಿ ದಳ ನಿಗಾ ವಹಿಸಬೇಕು. ಕಳ್ಳಬಟ್ಟಿ ಮದ್ಯ ತಯಾರಿಕೆ ಮತ್ತು ಮಾರಾಟವನ್ನು ಮಟ್ಟಹಾಕಬೇಕು. ಎಲ್ಲ ಕಡೆ ಕಟ್ಟೆಚ್ಚರ ವಹಿಸಬೇಕು. ಎಲ್ಲ ಉಪ ಆಯುಕ್ತರು ರಾಜಸ್ವ ಸಂಗ್ರಹ ಹೆಚ್ಚಳಕ್ಕೆ ಆದ್ಯತೆ ನೀಡಬೇಕು’ ಎಂದೂ ಆದೇಶಿಸಿದರು.

‘ತೆರಿಗೆ ವಂಚನೆ ತಡೆಯಬೇಕು’

‘ತೆರಿಗೆ ವಂಚನೆ, ತೆರಿಗೆ ಸೋರಿಕೆ, ತೆರಿಗೆ ಕಳ್ಳತನ ಪ್ರಕರಣಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಿ ಕ್ರಮ ಕೈಗೊಳ್ಳಬೇಕು’ ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದರು.

‘ಕಟ್ಟುನಿಟ್ಟಿನ ಕ್ರಮಗಳನ್ನು ಇನ್ನಷ್ಟು ತೀವ್ರವಾಗಿ ಜಾರಿಗೊಳಿಸುವ ಮೂಲಕ ತೆರಿಗೆ ವಂಚನೆ ತಡೆಗಟ್ಟುವ ಕಡೆಗೆ ಹೆಚ್ಚು ಆಸಕ್ತಿ ಕೊಡಬೇಕು. ತೆರಿಗೆ ವಂಚನೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದರು.

‘ತೆರಿಗೆ ಕಳ್ಳತನ ತಡೆಯುವುದಕ್ಕಾಗಿ ಈಗಾಗಲೇ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ. ನಿಮ್ಮ ಪ್ರಯತ್ನದಿಂದ ರಾಜ್ಯಕ್ಕೆ ಹೆಚ್ಚು ತೆರಿಗೆ ಬರಲು ಸಾಧ್ಯ. ಅನೇಕ ಭಾಗಗಳಲ್ಲಿ ಅನೇಕ ಉತ್ಪನ್ನಗಳಲ್ಲಿ ತೆರಿಗೆ ವಂಚನೆ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಹೆಚ್ಚಿನ ಗಮನಹರಿಸಿ ತೆರಿಗೆ ಸಂಗ್ರಹಿಸಬೇಕು. ಹೆಚ್ಚು ತೆರಿಗೆ ಸಂಗ್ರಹ ಮಾಡಿದರೆ ಅಭಿವೃದ್ಧಿ ಕೆಲಸ ಮಾಡಲು ಹೆಚ್ಚು ಅನುಕೂಲವಾಗುತ್ತದೆ. ಸಾಮೂಹಿಕ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡಬೇಕು’ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ನದಿ ದಿಕ್ಕು ಬದಲಿಸಿದ ಒತ್ತುವರಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಜಿಲ್ಲೆಯಲ್ಲಿ ಹರಿಯುವ ಮಲಪ್ರಭಾ, ಘಟಪ್ರಭಾ ನದಿಗಳ ಪಾತ್ರ ಒತ್ತುವರಿ ಆಗಿದ್ದು, ಒತ್ತುವರಿಯ ಪರಿಣಾಮ ನದಿಗಳು ಹರಿಯುವ ಮಾರ್ಗವನ್ನೇ ಬದಲಿಸಿಕೊಂಡು ಹೊಲಗಳಿಗೆ ನುಗ್ಗಿರುವುದು ಸರ್ವೆಯಿಂದ ಗೊತ್ತಾಗಿದೆ.

ಮಲಪ್ರಭಾ ನದಿ ಹರಿಯುವ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಭೂ ದಾಖಲೆಗಳ ಇಲಾಖೆಯು ಸರ್ವೆ ಮಾಡಿದ್ದು, 424 ಎಕರೆ ಒತ್ತುವರಿಯಾಗಿದೆ. ಘಟಪ್ರಭಾ ನದಿಪಾತ್ರದ ಎರಡು ತಾಲ್ಲೂಕುಗಳಲ್ಲಿ ಸರ್ವೆ ನಡೆದಿದ್ದು, 62 ಎಕರೆ ನದಿ ಪ್ರದೇಶ ಒತ್ತುವರಿಯಾಗಿದೆ.

ಮಲಪ್ರಭಾ ನದಿಯು ಮಳೆಗಾಲದಲ್ಲೇ ತುಂಬಿ ಹರಿಯುವುದು ಅಪರೂಪ. ಆದ್ದರಿಂದ ನದಿ ದಂಡೆಯನ್ನು ರೈತರು ಒತ್ತುವರಿ ಮಾಡಿಕೊಂಡು ಸಾಗುವಳಿ ಮಾಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಪ್ರವಾಹದಿಂದ ನೀರು ಹೆಚ್ಚಾದಾಗ ನದಿ ತನ್ನ ಹರಿಯುವ ಮಾರ್ಗವನ್ನು ಬದಲಿಸಿಕೊಂಡು ಹೊಲಗಳಿಗೆ ನುಗ್ಗಿದೆ.

ಗ್ರಾಮಗಳಲ್ಲಿ ಪ್ರವಾಹ, ಹಾನಿ: ನದಿಪಾತ್ರದ ಒತ್ತುವರಿಯಿಂದ ಆಗಾಗ ನದಿಗಳು ಉಕ್ಕಿ ಹರಿದು, ಗ್ರಾಮಗಳಿಗೆ ನುಗ್ಗಲಾರಂಭಿಸಿವೆ. ಕಳೆದ ವರ್ಷ ವಾಡಿಕೆಗಿಂತ ಮಳೆ ಹೆಚ್ಚಾದಾಗ ಹಲವಾರು ಗ್ರಾಮಗಳಿಗೆ ನೀರು ನುಗ್ಗಿತ್ತು. 2009 ಮತ್ತು 2019ರಲ್ಲಿ ಪ್ರವಾಹ ಉಂಟಾದಾಗ ಮಲಪ್ರಭಾ ನದಿ ನೀರು 71 ಗ್ರಾಮಗಳಿಗೆ, ಹಾಗೆಯೇ ಘಟಪ್ರಭಾ ನದಿ ನೀರು 70 ಗ್ರಾಮಗಳಿಗೆ ನುಗ್ಗಿ ಅಪಾರ ಪ್ರಮಾಣದಲ್ಲಿ ಹಾನಿಯನ್ನುಂಟು ಮಾಡಿದ್ದವು.

‘ಪ್ರವಾಹ ಬಂದಾಗ ಒತ್ತುವರಿ ತೆರವುಗೊಳಿಸುವ ಮಾತುಗಳು ಕೇಳಿ ಬರುತ್ತವೆ. ನಂತರ ಯಾರೂ ಗಮನಿಸುವುದಿಲ್ಲ. ಭೂ ದಾಖಲೆಗಳ ಇಲಾಖೆಯು ಸರ್ವೆ ಮಾಡಿ 2022ರ ಮಾರ್ಚ್‌ನಲ್ಲಿಯೇ ಬೆಳಗಾವಿ ಪ್ರಾದೇಶಿಕ ಆಯುಕ್ತರ ಕಚೇರಿಗೆ ವರದಿ ಸಲ್ಲಿಸಿದೆ. ಆದರೆ, ಇದುವರೆಗೂ ಯಾವುದೇ ಕ್ರಮವನ್ನು ಕೈಗೊಳ್ಳಲಾಗಿಲ್ಲ’ ಎಂದು ಗ್ರಾಮಸ್ಥರು ಹೇಳುತ್ತಾರೆ.

ಮಲಪ್ರಭಾ ನದಿಯಲ್ಲಿ ಪ್ರವಾಹ ಉಂಟಾದಾಗ ಹುನಗುಂದ ತಾಲ್ಲೂಕಿನ ಕಜಗಲ್ ಗ್ರಾಮ ಜಲಾವೃತವಾಗಿತ್ತು

ಒತ್ತುವರಿಯ ಈ ಪರಿ...

ಹರಿಯುವ ಮಾರ್ಗ ಬದಲಾಗಿರುವ ಕಾರಣ ಮಲಪ್ರಭಾ ನದಿಯು 551 ಎಕರೆ ಮತ್ತು ಘಟಪ್ರಭಾ ನದಿ 114 ಎಕರೆ ಜಮೀನಿನಲ್ಲಿ ಹರಿಯುತ್ತವೆ. ಮಲಪ್ರಭಾ ನದಿಪಾತ್ರದಲ್ಲಿ ಬಾದಾಮಿ ತಾಲ್ಲೂಕಿನ 31 ಗ್ರಾಮಗಳ 680 ಹೊಲಗಳ ಸರ್ವೆ ನಡೆದಿದೆ. 103 ಹೊಲಗಳ ಮಾಲೀಕರು 157 ಎಕರೆ ಒತ್ತುವರಿ ಮಾಡಿದ್ದಾರೆ. ಹುನಗುಂದ ತಾಲ್ಲೂಕಿನ 37 ಗ್ರಾಮಗಳ 485 ಸಂಖ್ಯೆಗಳ ಸರ್ವೆಯಲ್ಲಿ 128 ಹೊಲಗಳ ಮಾಲೀಕರು 267 ಎಕರೆ, ಇಳಕಲ್ ತಾಲ್ಲೂಕಿನಲ್ಲಿ 31 ಗುಂಟೆ ಒತ್ತುವರಿ ಮಾಡಿರುವುದು 2022ರಲ್ಲಿ ಮಾಡಿದ ಸರ್ವೆಯಲ್ಲಿ ಬಯಲಾಗಿದೆ.

ಘಟಪ್ರಭಾ ನದಿ ಒತ್ತುವರಿ ಕಂಡು ಬಂದಂತಹ ಮುಧೋಳ ತಾಲ್ಲೂಕಿನ 34 ಗ್ರಾಮಗಳ 464 ಸಂಖ್ಯೆಗಳಲ್ಲಿ ಸರ್ವೆ ನಡೆದಿದೆ. ಇಲ್ಲಿ, 88 ಹೊಲಗಳ ಮಾಲೀಕರು 62 ಎಕರೆ ಒತ್ತುವರಿ ಮಾಡಿದ್ದಾರೆ. ರಬಕವಿ ಬನಹಟ್ಟಿ ತಾಲ್ಲೂಕಿನಲ್ಲಿ 12 ಗುಂಟೆ ಭೂಮಿ ಒತ್ತುವರಿಯಾಗಿದೆ.

ಮಲಪ್ರಭಾ, ಘಟಪ್ರಭಾ ನದಿಗಳ ಪಾತ್ರದಲ್ಲಿ ಸರ್ವೆ ಮಾಡಿ ಬೆಳಗಾವಿ ಪ್ರಾದೇಶಿಕ ಆಯುಕ್ತರ ಕಚೇರಿಗೆ ವರದಿ ಸಲ್ಲಿಸಲಾಗಿದೆ
ನಜ್ಮಾ ಪೀರಜಾದೆ, ಜಂಟಿ ನಿರ್ದೇಶಕಿ, ಭೂದಾಖಲೆಗಳ ಇಲಾಖೆ, ಬೆಳಗಾವಿ

ಮಲಪ್ರಭಾ ನದಿಯಲ್ಲಿ ಪ್ರವಾಹ ಬಂದಾಗ ನಮ್ಮ ಗ್ರಾಮಗಳಿಗೆಲ್ಲ ನೀರು ನುಗ್ಗಿ ಅಪಾರ ಪ್ರಮಾಣದಲ್ಲಿ ಹಾನಿ ಸಂಭವಿಸಲಿದೆ
ಮಹಾಂತೇಶ ಕೊಪ್ಪದ
ಕಜಗಲ್ ಗ್ರಾಮ

₹ 5 ಕೋಟಿ ವಂಚನೆ: ಮತ್ತೊಬ್ಬ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ₹ 5 ಕೋಟಿ ಪಡೆದು ವಂಚಿಸಿದ್ದ ಪ್ರಕರಣದ ತನಿಖೆಯನ್ನು ಸಿಸಿಬಿ ಪೊಲೀಸರು ಚುರುಕುಗೊಳಿಸಿದ್ದು, ಬಂಧಿತ ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿ ಮಾಹಿತಿ ಕಲೆಹಾಕುತ್ತಿದ್ದಾರೆ.

ಚನ್ನ ನಾಯ್ಕ

ಪ್ರಕರಣದ ಪ್ರಮುಖ ಆರೋಪಿ ಚೈತ್ರಾ ಕುಂದಾಪುರ ಹಾಗೂ ಇತರರನ್ನು ಬಂಧಿಸಿ ಕಸ್ಟಡಿಗೆ ಪಡೆದಿರುವ ಸಿಸಿಬಿ ಪೊಲೀಸರು, ಕೃತ್ಯದಲ್ಲಿ ಭಾಗಿಯಾಗಿರುವ ಮತ್ತಷ್ಟು ಮಂದಿಯ ಹೆಸರುಗಳನ್ನು ಅವರಿಂದ ಪಡೆದಿದ್ದಾರೆ. ಆರೋಪಿಗಳು ನೀಡಿದ್ದ ಮಾಹಿತಿ ಆಧಾರದಲ್ಲಿ ಪ್ರಕರಣದ ಮತ್ತೊಬ್ಬ ಆರೋಪಿ ಬಿ.ಎಲ್. ಚನ್ನ ನಾಯ್ಕ ಅವರನ್ನು ಗುರುವಾರ ಬಂಧಿಸಲಾಗಿದೆ.

ಇನ್ನೊಬ್ಬ ಆರೋಪಿ ಪ್ರಸಾದ್ ಬೈಂದೂರು ಅವರನ್ನೂ ಸಿಸಿಬಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಪುನಃ ವಿಚಾರಣೆಗೆ ಬರುವಂತೆ ನೋಟಿಸ್ ನೀಡಿ ಕಳುಹಿಸಿದ್ದಾರೆ. ದೂರುದಾರ ಗೋವಿಂದ ಬಾಬು ಪೂಜಾರಿ ಅವರನ್ನು ಗುರುವಾರ ಕಚೇರಿಗೆ ಕರೆಸಿದ್ದ ಸಿಸಿಬಿ ಪೊಲೀಸರು, ಪ್ರಕರಣ ಸಂಬಂಧ ಮತ್ತಷ್ಟು ದಾಖಲೆಗಳನ್ನು ಪಡೆದುಕೊಂಡಿದ್ದಾರೆ.

ಪ್ರಕರಣದ ಮತ್ತೊಬ್ಬ ಆರೋಪಿಯಾಗಿರುವ ವಿಜಯನಗರ ಜಿಲ್ಲೆಯ ಹಿರೇಹಡಗಲಿಯ ಹಾಲಶ್ರೀ ಮಠದ ಅಭಿನವ ಹಾಲವೀರಪ್ಪ ಸ್ವಾಮೀಜಿ ಬಂಧನಕ್ಕೆ ಸಿಸಿಬಿ ಪೊಲೀಸರು ವಿಶೇಷ ತಂಡ ರಚಿಸಿದ್ದಾರೆ.

ಚುನಾವಣಾ ಸಮಿತಿ ಸದಸ್ಯನಾಗಿ ನಟನೆ: ‘ದೂರುದಾರರಿಂದ ಹಣ ಪಡೆಯಲು ಚೈತ್ರಾ ಹಾಗೂ ಇತರರು ಸೃಷ್ಟಿಸಿದ್ದ ದೆಹಲಿ ಚುನಾವಣಾ ಸಮಿತಿ ಸದಸ್ಯನ ಪಾತ್ರದಲ್ಲಿ ಚನ್ನ ನಾಯ್ಕ ನಟಿಸಿದ್ದ. ಕುಮಾರಕೃಪಾ ಅತಿಥಿ ಗೃಹದಲ್ಲಿ ಉಳಿದುಕೊಂಡಿದ್ದ ಈತ, ಹಿಂದಿಯಲ್ಲಿ ಮಾತನಾಡಿ ದೂರುದಾರರನ್ನು ನಂಬಿಸಿದ್ದ. ಟಿಕೆಟ್ ನೀಡಲು ಶಿಫಾರಸು ಮಾಡುವುದಾಗಿ ಹೇಳಿದ್ದ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಹೇಳಿದರು.

‘ರಮೇಶ್ ಅಲಿಯಾಸ್ ವಿಶ್ವನಾಥ್ ಜೀ ಜೊತೆಗೆ ಚನ್ನ ನಾಯ್ಕ ಒಡನಾಟವಿಟ್ಟುಕೊಂಡಿದ್ದ. ‘ಆರ್‌ಎಸ್‌ಎಸ್‌ನ ವಿಶ್ವನಾಥ್‌ಜೀ’ ವೇಷ ಧರಿಸಿದ್ದ ರಮೇಶ್‌ಗೆ ಆರೋಪಿ ಚನ್ನ ನಾಯ್ಕ ಸಹಾಯ ಮಾಡಿದ್ದ. ಕೃತ್ಯದಿಂದ ಬಂದಿದ್ದ ಹಣದಲ್ಲಿ ಚನ್ನ ನಾಯ್ಕ ಸಹ ಪಾಲು ಪಡೆದಿದ್ದ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

ನ್ಯಾಯಾಧೀಶರ ಹೆಸರಿನಲ್ಲೂ ಬೆದರಿಕೆ: ‘ಚೈತ್ರಾ ಹಾಗೂ ಇತರರು, ದೂರುದಾರರಿಂದ ₹ 3.50 ಕೋಟಿ ಪಡೆದಿದ್ದರು. ಹಣವನ್ನು ವಾಪಸು ನೀಡುವಂತೆ ಗೋವಿಂದ ಬಾಬು ಒತ್ತಾಯಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

7ನೇ ಪುಟ ನೋಡಿ

ಭಾರತದ ಭಾಷಾ ವೈವಿಧ್ಯ ಒಗ್ಗೂಡಿಸುವ ಹಿಂದಿ: ಶಾ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಭಾರತವು ವೈವಿಧ್ಯಮಯ ಭಾಷೆಗಳ ದೇಶ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯುಳ್ಳ ಈ ದೇಶದಲ್ಲಿ ಭಾಷೆಗಳ ವೈವಿಧ್ಯವನ್ನು ಹಿಂದಿ ಭಾಷೆಯು ಒಂದುಗೂಡಿಸುತ್ತದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರತಿಪಾದಿಸಿದರು.

‘ಹಿಂದಿ ದಿವಸ್’ ಸಂದರ್ಭದಲ್ಲಿ ದೇಶವಾಸಿಗಳಿಗೆ ಶುಭ ಕೋರಿರುವ ಅವರು, ‘ಹಿಂದಿಯು ಭಾರತದ ಬೇರೆ ಯಾವುದೇ ಭಾಷೆಯೊಂದಿಗೆ ಸ್ಪರ್ಧಿಸಿಲ್ಲ ಮತ್ತು ಎಂದಿಗೂ ಸ್ಪರ್ಧಿಸುವುದಿಲ್ಲ’ ಎಂದೂ ಹೇಳಿದರು.

ಹಿಂದಿಯು ವಿವಿಧ ಭಾರತೀಯ ಭಾಷೆಗಳು, ಉಪಭಾಷೆಗಳು ಮತ್ತು ಅನೇಕ ಜಾಗತಿಕ ಭಾಷೆಗಳನ್ನು ಗೌರವಿಸಿದೆ. ಅವುಗಳ ಶಬ್ದಕೋಶಗಳು, ವಾಕ್ಯಗಳು ಮತ್ತು ವ್ಯಾಕರಣ ನಿಯಮಗಳನ್ನು ಅಳವಡಿಸಿಕೊಂಡಿದೆ. ಹಿಂದಿ ಎಲ್ಲ ಸ್ಥಳೀಯ ಭಾಷೆಗಳನ್ನು ಸಬಲೀಕರಣಗೊಳಿಸುವ ಮಾಧ್ಯಮವಾಗಲಿದೆ ಎಂಬ ಖಾತರಿ ನನಗಿದೆ ಎಂದು ಅವರು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ, ಭಾರತೀಯ ಭಾಷೆಗಳಿಗೆ ರಾಷ್ಟ್ರೀಯ ಮತ್ತು ಜಾಗತಿಕ ವೇದಿಕೆಗಳಲ್ಲಿ ಸೂಕ್ತ ಮಾನ್ಯತೆ ಹಾಗೂ ಗೌರವ ದೊರೆತಿದೆ ಎಂದು ಅವರು ಅಭಿಪ್ರಾಯಪಟ್ಟರು.

11ನೇ ಪುಟ ನೋಡಿ

‘ದೇಶವನ್ನು ಮತ್ತೆ ದಾಸ್ಯಕ್ಕೆ ತಳ್ಳಲು ‘ಇಂಡಿಯಾ’ ಯತ್ನ’

ಪ್ರಜಾವಾಣಿ ವಾರ್ತೆ/ಪಿಟಿಐ

ಸನಾತನ ಧರ್ಮ ನಾಶವೇ ವಿಪಕ್ಷಗಳ ರಹಸ್ಯ ಕಾರ್ಯಸೂಚಿ. ದೇಶದೆಲ್ಲೆಡೆ ಇರುವ ಸನಾತನ ಧರ್ಮ ಪಾಲಿಸುವ ವ್ಯಕ್ತಿಗಳು ಈ ಬಗ್ಗೆ ಜಾಗೃತರಾಗಿರಬೇಕು
ನರೇಂದ್ರ ಮೋದಿ, ಪ್ರಧಾನಿ

ಬೀನಾ (ಮಧ್ಯಪ್ರದೇಶ): ವಿಪಕ್ಷಗಳ ಮೈತ್ರಿಕೂಟವನ್ನು ‘ಘಮಂಡಿಯಾ’ ಕೂಟ ಎಂದು ಮತ್ತೊಮ್ಮೆ ಜರಿದಿರುವ ಪ್ರಧಾನಿ ನರೇಂದ್ರ ಮೋದಿ, ‘ಸನಾತನ ಧರ್ಮವನ್ನು ನಾಶ ಮಾಡಿ, ದೇಶವನ್ನು ಸಾವಿರಾರು ವರ್ಷಗಳ ಗುಲಾಮಗಿರಿಗೆ ನೂಕಲು ‘ಇಂಡಿಯಾ’ ಹವಣಿಸುತ್ತಿದೆ’ ಎಂದು ಗುರುವಾರ ವಾಗ್ದಾಳಿ ನಡೆಸಿದ್ದಾರೆ.

ಮಹಾತ್ಮ ಗಾಂಧಿ, ಸ್ವಾಮಿ ವಿವೇಕಾನಂದ, ಲೋಕಮಾನ್ಯ ತಿಲಕ, ಅಹಲ್ಯಾಬಾಯಿ ಹೋಳ್ಕರ್, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಅವರ ಹೆಸರು ಪ್ರಸ್ತಾಪಿಸಿದ ಮೋದಿ, ‘ಈ ಎಲ್ಲ ಮಹಾನ್ ವ್ಯಕ್ತಿಗಳು ಕೂಡ ಸನಾತನ ಧರ್ಮದಿಂದ ಪ್ರೇರಣೆ ಪಡೆದಿದ್ದರು’ ಎಂದು ಹೇಳಿದ್ದಾರೆ.

‘ಮುಂಬೈನಲ್ಲಿ ಸಭೆ ಸೇರಿದ್ದ ‘ಇಂಡಿಯಾ’ ಮೈತ್ರಿಕೂಟಕ್ಕೆ ಯಾವುದೇ ನೀತಿಗಳು, ವಿಷಯಗಳು ಅಥವಾ ನಾಯಕ ಇರಲಿಲ್ಲ. ಸನಾತನ ಧರ್ಮದ ಮೇಲೆ ದಾಳಿ ನಡೆಸಿ, ಅದನ್ನು ನಾಶ ಮಾಡುವುದೇ ಅದರ ರಹಸ್ಯ ಕಾರ್ಯಸೂಚಿಯಾಗಿದೆ’ ಎಂದು ಹೇಳಿದ್ದಾರೆ.

ಸಾಗರ್ ಜಿಲ್ಲೆಯ ಬೀನಾದಲ್ಲಿರುವ ರಿಫೈನರಿಯಲ್ಲಿ ಪೆಟ್ರೊಕೆಮಿಕಲ್ಸ್ ಸಂಕೀರ್ಣ ಹಾಗೂ ಇತರ ಹತ್ತು ಉದ್ಯಮಗಳು ಸೇರಿದಂತೆ ₹ 49 ಸಾವಿರ ಕೋಟಿ ವೆಚ್ಚದ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿ, ನಂತರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

11ನೇ ಪುಟ ನೋಡಿ

ಟಿಡಿಪಿ ಜೊತೆ ಮೈತ್ರಿ ಘೋಷಿಸಿದ ಪವನ್‌ಕಲ್ಯಾಣ್ 4

ಚಿನಕುರಳಿ

ಪ್ರಕಾಶ್ ಶೆಟ್ಟಿ

FCB INTERFACE/0550/SEP 2023/KANNAD

23, 24ಕ್ಕೆ ಬ್ರಾಹ್ಮಣ ವಧು-ವರರ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಾಹ್ಮಣ ಸಮುದಾಯದ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಸಪ್ತಪದಿ ಫೌಂಡೇಷನ್ ಟ್ರಸ್ಟ್ ಇದೇ 23 ಹಾಗೂ 24ರಂದು 50ನೇ ಬ್ರಾಹ್ಮಣ ವಧು-ವರರ ಸಮಾವೇಶ ಹಮ್ಮಿಕೊಂಡಿದೆ.

ಚಾಮರಾಜಪೇಟೆಯ ರಾಮೇಶ್ವರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ವಧು-ವರರ ಸಮಾವೇಶ ನಡೆಯಲಿದೆ. ಎಲ್ಲಾ ತ್ರಿಮತಸ್ಥ ಬ್ರಾಹ್ಮಣ ವಧು-ವರರು ಭಾಗವಹಿಸಬಹುದು ಎಂದು ಫೌಂಡೇಷನ್‌ನ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ಎಸ್. ಭಾರದ್ವಾಜ್ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9449425536 ಅಥವಾ 8217876335

ಅರಣ್ಯ ಇಲಾಖೆ ಆರೋಪ ಸುಳ್ಳು: ಬಿಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂಲಿಕೆರೆಯಲ್ಲಿ ಅರಣ್ಯ ಪ್ರದೇಶ ಒತ್ತುವರಿ ಮಾಡಿಕೊಂಡು ಬಡಾವಣೆ ನಿರ್ಮಾಣ ಮಾಡಿದೆ ಎಂಬ ಅರಣ್ಯ ಇಲಾಖೆಯ ಆರೋಪ ಸುಳ್ಳು ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹೇಳಿದೆ.

'ಸೂಲಿಕೆರೆ ಮೀಸಲು ಅರಣ್ಯದಲ್ಲಿ 1 ಎಕರೆ 38 ಗುಂಟೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಬಿಡಿಎ ಕೆಂಪೇಗೌಡ ಬಡಾವಣೆ ನಿರ್ಮಿಸಿತ್ತು. ಈ ಒತ್ತುವರಿಯನ್ನು ಅರಣ್ಯ ಇಲಾಖೆ ತಿಳಿಸಿತ್ತು. ಆದರೆ, ಅರಣ್ಯ ಇಲಾಖೆ ಸಿಬ್ಬಂದಿ ತನ್ನದೇ ಕಾಂಪೌಂಡ್‌ನೊಳಗಿರುವ ಜಾಗದಲ್ಲಿ ಸಸಿ ನೆಟ್ಟು ಅದನ್ನು ಬಿಡಿಎ ಒತ್ತುವರಿ ಮಾಡಿಕೊಂಡಿರುವ ಜಾಗ ಎಂದು ತೋರಿಸಿದೆ' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಸಿ.ಎನ್. ಅಶೋಕ ತಿಳಿಸಿದ್ದಾರೆ.

'ಸೆ.14ರಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಪ್ರಾಧಿಕಾರದ ಮೋಜಿಣಿದಾರರು ಅರಣ್ಯ ಇಲಾಖೆಯ ಸಿಬ್ಬಂದಿಯೊಂದಿಗೇ ಜಂಟಿ ಸ್ಥಳ ಪರಿವೀಕ್ಷಣೆ ನಡೆಸಿದರು. ಸೂಲಿಕೆರೆ ಗ್ರಾಮದ ಸರ್ವೆ ನಂ.19ರ 1 ಎಕರೆ 38 ಗುಂಟೆಯಲ್ಲಿ ಅರಣ್ಯ ಭೂಮಿಯನ್ನು ಬಿಡಿಎ ಒತ್ತುವರಿ ಮಾಡಿಕೊಂಡಿಲ್ಲ ಎಂಬುದು ಅರಿವಾಗಿದೆ. ಭೂಸ್ವಾಧೀನವಾಗಿರುವ ಪ್ರದೇಶದಲ್ಲಿ ಮಾತ್ರ ಬಿಡಿಎ ಬಡಾವಣೆ ರಚಿಸಿರುವ ಕಾರ್ಯ ಕೈಗೊಂಡಿದೆ. ಡಿಸಿಎಫ್ ಆರೋಪಿಸಿರುವಂತೆ ಅರಣ್ಯ ಭೂಮಿ ಒತ್ತುವರಿಯಾಗಿಲ್ಲ' ಎಂದು ಅಶೋಕ ವಿವರ ನೀಡಿದ್ದಾರೆ.

ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ, ಅವರೇ ಗೋಡೆ ಕಟ್ಟಿಕೊಂಡಿರುವ ಜಾಗದಲ್ಲಿ ಟ್ರಂಚ್ ಮಾಡಿ ಸಸಿ ನೆಟ್ಟಿದ್ದಾರೆ ಎಂದು ಅವರು ಹೇಳಿದ್ದಾರೆ.

'ಆರೋಗ್ಯಕರ ಬೆಂಗಳೂರು' ವಿಷಯ ವಿಚಾರ ಸಂಕಿರಣ

ಆರೋಗ್ಯ: ವಿಶೇಷ ಯೋಜನೆ ಜಾರಿ

ಪ್ರಜಾವಾಣಿ ವಾರ್ತೆ

ವಿಚಾರ ಸಂಕಿರಣದಲ್ಲಿ ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ಕೆ.ವಿ. ತ್ರಿಲೋಕ್ ಚಂದ್ರ ಮಾತನಾಡಿದರು

ಆರೋಗ್ಯ ಬೆಂಗಳೂರಿನ ಪ್ರಮುಖ ಧ್ಯೇಯ

- ಆರೋಗ್ಯ ಸೇವೆಯಲ್ಲಿ ಹೂಡಿಕೆ ಹೆಚ್ಚಿಸುವುದು
- ತುರ್ತು ಆರೋಗ್ಯ ಸೇವೆಗಳ ವ್ಯವಸ್ಥೆ
- ಸಿಎಸ್‌ಆರ್ ಪಾಲುದಾರರೊಂದಿಗೆ ಸಹಯೋಗ
- ಬೆಂಗಳೂರು ಆರೋಗ್ಯ ವ್ಯವಸ್ಥೆ ಜಾರಿ
- ಒಂದು ಆರೋಗ್ಯ ವಿಧಾನ ಅನುಷ್ಠಾನ
- ವಾರ್ ರೂಮ್ ಮತ್ತು ಕಣ್ಗಾವಲು ವ್ಯವಸ್ಥೆ
- ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಯೋಗಾಲಯ ಸೇವೆ ಹೆಚ್ಚಳ
- ಬೆಂಗಳೂರಿನಲ್ಲಿ ಆಂಟಿ ಮೈಕ್ರೊಬಿಯಲ್ ನೀತಿ ಜಾರಿ
- ಹವಾಮಾನಕ್ಕನುಗುಣವಾಗಿ ಆರೋಗ್ಯ ವ್ಯವಸ್ಥೆ
- ಬೆಂಗಳೂರಿನಲ್ಲಿ ಪಶುವೈದ್ಯಕೀಯ ಆರೈಕೆ ವ್ಯವಸ್ಥೆ
- ಮಾಹಿತಿ ತಂತ್ರಜ್ಞಾನದ ಮೂಲಕ ನಾಗರಿಕರ ಮನೆಯಲ್ಲೇ ಚಿಕಿತ್ಸೆ ಸಮಾಲೋಚನೆ ವ್ಯವಸ್ಥೆ

ಬೆಂಗಳೂರು: ನಾಗರಿಕರಿಗೆ ಅತ್ಯುತ್ತಮ ಆರೋಗ್ಯ ಸೇವೆ ಕಲ್ಪಿಸುವ ನಿಟ್ಟಿನಲ್ಲಿ ಸೂಕ್ತ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕು ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ಕೆ.ವಿ ತ್ರಿಲೋಕ್ ಚಂದ್ರ ಹೇಳಿದರು.

ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ 'ಆರೋಗ್ಯಕರ ಬೆಂಗಳೂರು' ವಿಷಯಕ್ಕೆ ಸಂಬಂಧಿಸಿದಂತೆ ವಿಕ್ಟೋರಿಯಾ ಆಸ್ಪತ್ರೆಯ ಪಿಎಂಎಸ್ಎಸ್‌ವೈ (ಪ್ರಧಾನ ಮಂತ್ರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ) ಆಡಿಟೋರಿಯಂನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಬೆಂಗಳೂರಿನಲ್ಲಿ ನಾಗರಿಕರಿಗೆ ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆ ಸಿಗಬೇಕು. ಹೆಚ್ಚು ಸುರಕ್ಷಿತ ಮತ್ತು ಆರೋಗ್ಯಕರ ನಗರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕಿದೆ. ನಾಗರಿಕರಿಗೆ ಸುಲಭ ರೀತಿಯಲ್ಲಿ ಆರೋಗ್ಯ ಸೇವೆ ಸಿಗುವಂತೆ ಮಾಡಬೇಕೆಂದು ಹೇಳಿದರು.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಹೆರಿಗೆ ಆಸ್ಪತ್ರೆಗಳಲ್ಲಿ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಬೇಕು. 232 ನಮ್ಮ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಅದನ್ನು ಮತ್ತಷ್ಟು ಬಲಪಡಿಸಬೇಕು. ಕೆಲವು ಕ್ಲಿನಿಕ್‌ಗಳು ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೂ ಕಾರ್ಯನಿರ್ವಹಿಸುತ್ತಿವೆ. ಮುಂದಿನ ದಿನಗಳಲ್ಲಿ ಎಲ್ಲ ಕ್ಲಿನಿಕ್‌ಗಳಿಗೂ ಈ ಸಮಯವನ್ನು ವಿಸ್ತರಿಸಲಾಗುವುದು ಎಂದರು.

'ಆರೋಗ್ಯಕರ ಬೆಂಗಳೂರು' ವಿಷಯದ ನೋಡಲ್ ಅಧಿಕಾರಿಯೂ ಆದ ತ್ರಿಲೋಕ್ ಚಂದ್ರ, 'ಭಾರತೀಯ ವಿಜ್ಞಾನ ಸಂಸ್ಥೆಯ ಆರ್ಟ್ ಪಾರ್ಕ್ ಪಾಲುದಾರಿಕೆಯಲ್ಲಿ ಆರೋಗ್ಯಕರ ಬೆಂಗಳೂರಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಬಂದ ಸುಮಾರು 10,478 ಸಲಹೆಗಳನ್ನು ಅಧ್ಯಯನ ನಡೆಸಲಾಗಿದೆ. ಒಂದೇ ರೀತಿಯ ಸಲಹೆಗಳನ್ನು ಒಟ್ಟುಗೂಡಿಸಿದ ಮೇಲೆ, ಒಟ್ಟಾರೆ 8,059 ಸಲಹೆ-ಅಭಿಪ್ರಾಯಗಳನ್ನು ಬೇರೆ ಬೇರೆ ವರ್ಗಗಳಾಗಿ ವಿಂಗಡಿಸಿ ವರದಿಯನ್ನು ಸಿದ್ದಪಡಿಸಲಾಗಿದೆ. ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ತಿಳಿಸಿದರು.

ಪ್ರಾಣಿಗಳ ಆರೋಗ್ಯವೂ ಮುಖ್ಯ: ಜನರ ಆರೋಗ್ಯದ ಜೊತೆಗೆ ಪ್ರಾಣಿಗಳ ಆರೋಗ್ಯವೂ ಮುಖ್ಯವಾಗಿದೆ. ಹೀಗಾಗಿ ಆ ಕ್ಷೇತ್ರದ ವೈದ್ಯಕೀಯ ವ್ಯವಸ್ಥೆಯನ್ನು ಬಲಪಡಿಸಬೇಕು. ಸಾರ್ವಜನಿಕ ಆರೋಗ್ಯದ ವಿಚಾರವಾಗಿ ಕೋವಿಡ್‌ನಂತಹ ತುರ್ತು ರೋಗಗಳನ್ನು ಎದುರಿಸುವ ನಿಟ್ಟಿನಲ್ಲಿ ಆರೋಗ್ಯ ಸೇವೆ ಬಲಗೊಳ್ಳಬೇಕು ಎಂದು ತ್ರಿಲೋಕ್ ಚಂದ್ರ ಹೇಳಿದರು.

ಮುಖ್ಯ ಆರೋಗ್ಯಾಧಿಕಾರಿಗಳಾದ ಡಾ.ಬಾಲಸುಂದರ್, ಡಾ.ನಿರ್ಮಲಾ ಬುಗ್ಗಿ, ಭಾರತೀಯ ವಿಜ್ಞಾನ ಸಂಸ್ಥೆಯ ಆರ್ಟ್ ಪಾರ್ಕ್ ಆರೋಗ್ಯ ನಿರ್ದೇಶಕ ಡಾ.ಭಾಸ್ಕರ್ ರಾಜ್‌ಕುಮಾರ್ ಇದ್ದರು.

ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣಾ ಪ್ರಾಧಿಕಾರ
(ಭಾರತ ಸರ್ಕಾರದ ಒಂದು ಶಾಸನಬದ್ಧ ಅಂಗ)
ಎಇಆರ್‌ಎ ಬಿಲ್ಡಿಂಗ್, ಆಡಳಿತ ಸಮುಚ್ಚಯ,
ಸಫ್ದರಜಂಗ್ ಏರ್‌ಪೋರ್ಟ್, ನವದೆಹಲಿ – 110003
ಫೋನ್: 24695044–47, ಫ್ಯಾಕ್ಸ್: 24695048, ವೆಬ್‌ಸೈಟ್: http://aera.gov.in

ಖಾಲಿ ಹುದ್ದೆಗಳ ಭರ್ತಿ ಪ್ರಕಟಣೆ

ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣ ಪ್ರಾಧಿಕಾರ ಇವರು, ನವದೆಹಲಿಯಲ್ಲಿ **ಅಂಡರ್ ಸೆಕ್ರೆಟರಿ (ಪಾಲಿಸಿ & ಸ್ಟಾಟಿಸ್ಟಿಕ್ಸ್) – ವೇತನ ಶ್ರೇಣಿ 11 (03 ಸಂ.), ಅಂಡರ್ ಸೆಕ್ರೆಟರಿ (ಐಟಿ) – ವೇತನ ಶ್ರೇಣಿ 11 (01 ಸಂ.)** ಹುದ್ದೆಗಳನ್ನು **ಡೆಪ್ಯುಟೇಶನ್ ಆಧಾರದಲ್ಲಿ** ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದಾರೆ. ವಿವರಗಳು ಎಇಆರ್‌ಎ ಸಂಸ್ಥೆಯ http://aera.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಸೂಕ್ತ ವಿಧಾನದಲ್ಲಿ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ 14.10.2023 ರಂದು ಸಂಜೆ 5:30 ಗಂಟೆ.** ಯಾವುದೇ ತಿದ್ದುಪಡಿ/ಮಾರ್ಪಾಡು ಉಂಟಾದಲ್ಲಿ, ಅಂತಹವುಗಳನ್ನು ಎಇಆರ್‌ಎ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸೂಚನೆ:– ಯಾವುದೇ ಪೂರ್ವ ಸೂಚನೆ ಇಲ್ಲದೆಯೆ ಖಾಲಿಹುದ್ದೆಗಳ ಸಂಖ್ಯೆ ಬದಲಾಗಬಹುದಾಗಿರುತ್ತದೆ.

ಸಹಿ/–
CBC 03112/12/0017/2324 ಡೆಪ್ಯೂಟಿ ಚೀಫ್, ಎಇಆರ್‌ಎ

ವಂಶಿ ಕೃಷ್ಣ ಬೆಂಗಳೂರು ಲೋಕಾಯುಕ್ತ ಎಸ್‌ಪಿ

ಬೆಂಗಳೂರು: ಕೆ.ವಿ.ಅಶೋಕ್ ಕುಮಾರ್ ಅವರ ವರ್ಗಾವಣೆಯಿಂದ ತೆರವಾಗಿದ್ದ ಕರ್ನಾಟಕ ಲೋಕಾಯುಕ್ತ ಕೇಂದ್ರ ಸ್ಥಾನದ ಎಸ್‌ಪಿ ಹುದ್ದೆಗೆ ಕೋನ ವಂಶಿ ಕೃಷ್ಣ ಅವರನ್ನು ವರ್ಗಾವಣೆ ಮಾಡಲಾಗಿದೆ.

ವಾರದ ಹಿಂದಷ್ಟೇ ಅಶೋಕ್ ಅವರನ್ನು ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿತ್ತು. ವಂಶಿ ಕೃಷ್ಣ ಅವರು ಬೆಂಗಳೂರು ಕೆಎಸ್‌ಆರ್‌ಪಿ ಕಮಾಂಡೆಂಟ್‌ನ ಒಂದನೇ ಬೆಟಾಲಿಯನ್‌ನಲ್ಲಿ ಡಿಸಿಪಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು.

'ಸಂವಿಧಾನ ಪೀಠಿಕೆ ಓದು' ಇಂದು

ಬೆಂಗಳೂರು: ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಬೆಂಗಳೂರು ವಿ.ವಿ ರಾಜ್ಯ ಸರ್ಕಾರ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ 'ಸಂವಿಧಾನ ಪೀಠಿಕೆ ಓದು' ಕಾರ್ಯಕ್ರಮವನ್ನು ಜ್ಞಾನಭಾರತಿ ಆವರಣದ ಆಡಳಿತ ಕಚೇರಿ ಮುಂಭಾಗದಲ್ಲಿ ಸೆ.15ರಂದು ಬೆಳಿಗ್ಗೆ 11.30ಕ್ಕೆ ಆಯೋಜಿಸಿದೆ.

ಕಾರ್ಯಕ್ರಮದಲ್ಲಿ ಪ್ರೀತಿ ಫೆಡ್ರಿಕ್, ರವಿ ಪಂಚನಾದನ್ ಅವರು 'ಮಣಿಪಾಲ್ ಮೆಡೆಸ್' ಆ್ಯಪ್ ಲೋಕಾರ್ಪಣೆ ಮಾಡಿದರು – ಪ್ರಜಾವಾಣಿ ಚಿತ್ರ

'ಮಣಿಪಾಲ್ ಮೆಡೆಸ್' ಆ್ಯಪ್ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಕಲಿಕೆಗೆ ನೆರವಾಗಲು ಮಣಿಪಾಲ್ ಗ್ಲೋಬಲ್ ಎಜುಕೇಶನ್ ಸರ್ವಿಸಸ್ 'ಮಣಿಪಾಲ್ ಮೆಡೆಸ್' ಆ್ಯಪ್ ಅಭಿವೃದ್ಧಿಪಡಿಸಿದೆ.

ನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮಣಿಪಾಲ್ ಗ್ಲೋಬಲ್ ಎಜುಕೇಶನ್ ಸರ್ವಿಸಸ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವಿ ಪಂಚನಾದನ್ ಅವರು ಆ್ಯಪ್ ಲೋಕಾರ್ಪಣೆ ಮಾಡಿ, ಮಾತನಾಡಿದರು. 'ಈ ಆ್ಯಪ್ ಎಂಬಿಬಿಎಸ್ ಅಭ್ಯರ್ಥಿಗಳಿಗೆ, ಈ ಕೋರ್ಸ್ ಮಾಡಬೇಕೆಂದುಕೊಂಡವರಿಗೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವವರಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ನೆರವಾಗಲಿದೆ. ಸಿಬಿಎಂಇ ಪಠ್ಯಕ್ರಮ ಅನುಸರಿಸಲಾಗಿದ್ದು, ಸ್ವಯಂ ಅಧ್ಯಯನಕ್ಕೆ ಉತ್ತಮ ಆಯ್ಕೆಯಾಗಲಿದೆ. ತಜ್ಞ ವೈದ್ಯರು ಸಿದ್ಧಪಡಿಸಿದ ನೋಟ್ಸ್, ಪ್ರಾಯೋಗಿಕ ವಿಡಿಯೊಗಳು ಇರಲಿದ್ದು, ಪರೀಕ್ಷೆಗಳನ್ನು ಕೂಡ ಆ್ಯಪ್ ಮೂಲಕ ತೆಗೆದುಕೊಳ್ಳುವ ಅವಕಾಶವಿದೆ' ಎಂದು ಹೇಳಿದರು.

'ಪಠ್ಯಗಳನ್ನು ಡೌನ್‌ಲೋಡ್ ಮಾಡಿಕೊಂಡು ಆಫ್‌ಲೈನ್‌ನಲ್ಲಿ ಕೂಡ ಓದಬಹುದಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಅನುಗುಣವಾಗಿ ಪಠ್ಯಗಳನ್ನು ಆಗಾಗ ಸೇರ್ಪಡೆ ಮಾಡಲಾಗುತ್ತದೆ. ಲೈವ್ ಟ್ಯುಟೋರಿಯಲ್, 3ಡಿ ಸಂವಾದನಾತ್ಮಕ ಕಲಿಕೆ, ಬಹು ಆಯ್ಕೆ ಪ್ರಶ್ನೆ ಪತ್ರಿಕೆ ಸೇರಿ ಹಲವು ವೈಶಿಷ್ಟ್ಯತೆ ಹೊಂದಿದೆ. ಈ ಆ್ಯಪ್ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ('Manipal MedAce') ಲಭ್ಯವಿದ್ದು, ಕೈಗೆಟಕುವ ದರವನ್ನು ನಿಗದಿ ಪಡಿಸಲಾಗಿದೆ' ಎಂದು ತಿಳಿಸಿದರು.

'ಮಣಿಪಾಲ್ ಮೆಡೆಸ್' ಆ್ಯಪ್‌ನ ಮಾರುಕಟ್ಟೆ ವಿಭಾಗದ ಮುಖ್ಯಸ್ಥೆ ಪ್ರೀತಿ ಫೆಡ್ರಿಕ್, 'ನಿರಂತರ ಸಂಶೋಧನೆ, ಶೈಕ್ಷಣಿಕ ಅನುಭವದಿಂದ ಪಠ್ಯ ಸಿದ್ಧಪಡಿಸಲಾಗಿದೆ. ಎಂಬಿಬಿಎಸ್ ಜತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ಇದು ಸಹ ಕಾರಿಯಾಗಲಿದೆ. ಇದರಿಂದ ಶೈಕ್ಷಣಿಕ ಒತ್ತಡ ನಿವಾರಣೆಯಾಗುವ ಜತೆಗೆ ಕಲಿಕಾ ಸಮಯ ಕೂಡ ಉಳಿತಾಯ ಆಗುತ್ತದೆ. ಪಠ್ಯಕ್ಕೆ ಅನುಗುಣವಾಗಿ ವಿಡಿಯೊ ತುಣುಕುಗಳು, ಬಹು ಆಯ್ಕೆ ಪ್ರಶ್ನೆಗಳು ಹಾಗೂ ನೋಟ್ಸ್‌ಗಳನ್ನು ಒದಗಿಸಲಾಗಿದೆ. ಕಲಿಕಾ ಸಾಧನೆ ಗುರುತಿಸುವ ಅವಕಾಶ ಸಹ ಇಲ್ಲಿವೆ' ಎಂದು ಹೇಳಿದರು.

ಗೃಹೋಪಯೋಗಿ ವಸ್ತುಗಳ ಪ್ರದರ್ಶನ, ಮಾರಾಟ ಇಂದು

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾದಿಂದ ಸೆ.15ರಂದು ಬನಶಂಕರಿ 2ನೇ ಘಟ್ಟದ ಮಹಾಸಭಾ ಕಚೇರಿ ಗಾಯತ್ರಿ ಭವನದಲ್ಲಿ ಮಹಿಳೆಯರೇ ತಯಾರಿಸಿದ ಗೃಹೋಪಯೋಗಿ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ.

ಮಧ್ಯಾಹ್ನ 3ರಿಂದ ರಾತ್ರಿ 8ರ ವರೆಗೆ ಈ ಮಾರಾಟ ಮೇಳ ನಡೆಯಲಿದೆ. ಸಂಜೆ 4.30ರಿಂದ ಸಮಾಜದ ಮಹಿಳೆಯರಿಂದ ವರ ಮಹಾಲಕ್ಷ್ಮಿ ಪೂಜೆ ನಡೆಯಲಿದೆ. ಮಾರಾಟ ಮೇಳದಲ್ಲಿ ವಿವಿಧ ಗೃಹೋಪಯೋಗಿ ಉತ್ಪನ್ನಗಳ ಮಾರಾಟಕ್ಕೆ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಮಹಿಳಾ ಘಟಕದ ರಾಜ್ಯ ಸಂಚಾಲಕಿ ಶುಭ ಮಂಗಳಾ ಸುನಿಲ್ ತಿಳಿಸಿದ್ದಾರೆ.

ಈ ಮೇಳದಲ್ಲಿ ಭಾಗವಹಿಸಲಿಚ್ಛಿಸುವ ಮಹಿಳಾ ಉದ್ಯಮಿಗಳು ₹ 500 ಶುಲ್ಕ ಪಾವತಿಸಿ ಸ್ಟಾಲ್‌ಗಳನ್ನು ನೋಂದಾಯಿಸಿಕೊಳ್ಳಬಹುದು. ವಿವರಗಳಿಗೆ ಶ್ವೇತಾ (7829272585) ಅವರನ್ನು ಸಂಪರ್ಕಿಸಬಹುದು.

BEFORE THE PRESIDING OFFICER INDUSTRIAL TRIBUNAL AT BANGALORE
SLA No. 316 / 2020
IN
I.D. No. 121 / 2013

APPLICANT : The Management of M/s. Metro Cash And Carry (India) Pvt. Ltd., Sy. No.26/3, 'A' Block, Ward No.9, Industrial Suburbs, Subramanya Nagar, Bengaluru - 560 055.

- vs -

OPPOSITE PARTY : Smt. Pushpalatha No.29, 15th Cross, A Block, Mariyappanapalya, Magadi Road, Bangalore-560 023.

SUMMONS / NOTICE TO THE OPPOSITE PARTY

Smt. Pushpalatha, No.29, 15th Cross, A Block, Mariyappanapalya, Magadi Road, Bangalore-560 023.

WHEREAS, the Applicant Management has filed the above serial Application under section 33(2) (b) of I.D. Act against you for approval of dismissal order dated 20.10.2020, you are hereby summoned to appear in this Tribunal in person or by a pleader **on the 9th day of October 2023 at 11.00 am** to answer the same, failing which suit / application will be disposed off ex-parte.

Given under my hand and the seal of the court on this 4th day of September 2023.

By order of the Court, Sheristedar, Industrial Tribunal, Bengaluru.

Advocate for Applicant
B.C. PRABHAKAR
BHOOPALAM LAW ASSOCIATES
No. 54, 2nd Floor, 'Nama Aurore' Complex
Nagasandra Circle, Smt Parvathamma
Rajkumar Road (South End Road)
Basavanagudi, Bengaluru - 560 004.

PUBLIC NOTICE

Publics are hereby inform you that my client **M/s DS-Max Properties Pvt. Ltd.**, rep; by its Authorized Signatory, **Mr. Shivashankar Chikkeri** having its office at # 1854, 17th Main, 30th 'B' Cross, HBR Layout, 1st stage, 5th Block, Bangalore- 560 043 have intend to enter into ***Joint Development Agreement*** with Owner **Sri. Lingamneni Kishore Babu** S/o. Late Gopala Krishnayya.

Whereas converted land property bearing **Sy. No. 50**, which measuring **25 Guntas**, situated at **Haragadde Village**, Jigani Hobli, Anekal Taluk, Bangalore District, in vide; Conversion Order dated **20/11/2014**, in vide; Order No. **ALN:(AJ):SR:86/2014-15**, for residential use, issued by Deputy Commissioner, Bangalore District of **Item No. I.**

Whereas converted land property bearing **Sy. No. 50**, which measuring **25 Guntas**, situated at **Haragadde Village**, Jigani Hobli, Anekal Taluk, Bangalore District, in vide; Conversion Order dated **20/11/2014**, in vide; Order No. **ALN:(AJ):SR:86/2014-15**, for residential use, issued by Deputy Commissioner, Bangalore District of **Item No. II.**

Whereas converted land property bearing **Sy. No. 50**, which measuring **25 Guntas**, situated at **Haragadde Village**, Jigani Hobli, Anekal Taluk, Bangalore District, in vide; Conversion Order dated **20/11/2014**, in vide; Order No. **ALN:(AJ):SR:86/2014-15**, for residential use, issued by Deputy Commissioner, Bangalore District of **Item No. III.**

Whereas converted land property bearing **Sy. No. 50**, which measuring **25 Guntas**, situated at **Haragadde Village**, Jigani Hobli, Anekal Taluk, Bangalore District, in vide; Conversion Order dated **20/11/2014**, in vide; Order No. **ALN:(AJ):SR:86/2014-15**, for residential use, issued by Deputy Commissioner, Bangalore District of **Item No. IV.**

Whereas converted land property bearing **Sy. No. 50**, which measuring **20 Guntas**, situated at **Haragadde Village**, Jigani Hobli, Anekal Taluk, Bangalore District, in vide; Conversion Order dated **20/11/2014**, in vide; Order No. **ALN:(AJ):SR:86/2014-15**, for residential use, issued by Deputy Commissioner, Bangalore District of **Item No. V.**

Whereas converted land property bearing **Sy. No. 50**, which measuring **20 Guntas**, situated at **Haragadde Village**, Jigani Hobli, Anekal Taluk, Bangalore District, in vide; Conversion Order dated **20/11/2014**, in vide; Order No. **ALN:(AJ):SR:86/2014-15**, for residential use, issued by Deputy Commissioner, Bangalore District of **Item No. VI.**

which total measuring of **Item No. I to VI = 25 Guntas + 25 Guntas + 25 Guntas + 25 Guntas + 20 Guntas + 20 Guntas = 3 Acre 20 Guntas**, which is subject matter of property and referred to as **"composite schedule property"** and commonly bounded on **East by:** Portion of land bearing Sy. No. 51 & Sy. No. 50, **West by:** Portion of land bearing Sy. No. 50 owned by Smt. Muniveeramma and her successors, **North by:** Land bearing Sy. No. 49 and **South by:** Layout Road and Land bearing Sy. No. 58, 59, 60.

Any person or Any Authority or Any Agreement Holder or Any Promoters having any asserting right, title, interest and claims to oppose for Joint Development of the composite schedule property and further having any manner of right, title, claims etc., and may lodge their objections, claims over the property along with relevant papers in support of their claims to the below address within **15** days from the date of this notice, if any objections fails to comply for any claims, my client shall take further steps and shall be entering into Joint Development Agreement of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂರವಾಣಿ/ಫ್ಯಾಕ್ಸ್: 080–27934470/27935412 E-mail: hosakote.pa@gmail.com URL: www.hoskote-tpa.gov.in

ಸಂಖ್ಯೆ: ಹೊಯೋಪ್ರಾ/ಭೂ.ಪ.ಅ/ಆನ್‌ಲೈನ್/ಎಂ.ಪಿ/235, 236, 237, 238/2023–24 ಮತ್ತು ಹೊಯೋಪ್ರಾ/ಭೂ.ಪ.ಅ/06/2023–24 ದಿನಾಂಕ: 13–09–2023

ಪ್ರಕಟಣೆ

ವಿಷಯ : ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಪುರ ಗ್ರಾಮದ ಸ.ನಂ. 56/2ಎ2 ರಲ್ಲಿನ 14 ಗುಂಟೆ, ಸ.ನಂ. 56/4 ರಲ್ಲಿನ 03 1/2 ಗುಂಟೆ, ಸ.ನಂ. 56/6 ರಲ್ಲಿನ 31 1/4 ಗುಂಟೆ, ಸ.ನಂ. 56/2ಸಿ2 ರಲ್ಲಿನ 18 3/4 ಗುಂಟೆ ಮತ್ತು ಸ.ನಂ. 56/2ಬಿ ರಲ್ಲಿನ 18 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ [ಎಜುಕೇಷನಲ್ ಇನ್ಸ್ಟಿಟ್ಯೂಷನ್ (ಶಾಲೆ / ಕಾಲೇಜು)] ಉದ್ದೇಶಕ್ಕೆ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ : 1) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಆನ್‌ಲೈನ್ ಎಂ.ಪಿ ಬೇಸ್ಡ್ ಅಫಿಡವಿಟ್ ನಂ. 722855, 722854, 722916, 722857, ರಿಕ್ವೆಸ್ಟ್ ಸಂ: 535742, 535744, 535745, 535748. ದಿನಾಂಕ: 07.09.2023. (ಶ್ರೀ ಎಂ.ವಿ. ಮಂಜುನಾಥ ಬಿನ್ ಟಿ. ವೆಂಕಟರಮಣರೆಡ್ಡಿ ಮತ್ತು ಶ್ರೀಮತಿ ಕೆ.ಸಿ. ಪ್ರತಿಮಾ ಕೋಂ ಮೋಹನ್ ಬಾಬು ಎಂ.ವಿ.)

2) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಕಛೇರಿ ಪತ್ರ ಸಂಖ್ಯೆ: ಎ.ಎಲ್.ಎನ್.(ಹೊಅ) ಸಿಆರ್:92/2023–24, ದಿನಾಂಕ: 05.09.2023 (ಶ್ರೀಮತಿ ಕೆ.ಸಿ. ಪ್ರತಿಮಾ ಕೋಂ ಮೋಹನ್ ಬಾಬು ಎಂ.ವಿ.)

3) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 237 ಬೆಮಪ್ರಾ 2009, ದಿನಾಂಕ: 19.09.2009.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಪುರ ಗ್ರಾಮದ ಸ.ನಂ. 56/2ಎ2 ರಲ್ಲಿನ 14 ಗುಂಟೆ, ಸ.ನಂ. 56/4 ರಲ್ಲಿನ 03 1/2 ಗುಂಟೆ, ಸ.ನಂ. 56/6 ರಲ್ಲಿನ 31 1/4 ಗುಂಟೆ, ಸ.ನಂ. 56/2ಸಿ2 ರಲ್ಲಿನ 18 3/4 ಗುಂಟೆ ಮತ್ತು ಸ.ನಂ. 56/2ಬಿ ರಲ್ಲಿನ 18 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ [ಎಜುಕೇಷನಲ್ ಇನ್ಸ್ಟಿಟ್ಯೂಷನ್ (ಶಾಲೆ / ಕಾಲೇಜು)] ಉದ್ದೇಶಕ್ಕೆ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಉಲ್ಲೇಖ (1) ಮತ್ತು (2) ರ ಪತ್ರಗಳಲ್ಲಿ ಕೋರಲಾಗಿರುತ್ತದೆ.

ಪ್ರಸ್ತಾಪಿತ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಂತೆ **ವಸತಿ ವಲಯದಲ್ಲಿ ಹಾಗೂ ಹಾಲಿ ರಸ್ತೆಯನ್ನು 18 ಮೀ. ಅಗಲಕ್ಕೆ ಅಗಲೀಕರಿಸಲು ಕಾಯ್ದಿರಿಸಲಾಗಿದ್ದು,** ಅನುಮೋದಿತ ಮಹಾಯೋಜನೆಯ ವಲಯ ನಿಯಮಾವಳಿಯಂತೆ ವಸತಿ ವಲಯದಲ್ಲಿ ನರ್ಸರಿ, ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಯವರೆಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅನುಮತಿಸಲು ಅವಕಾಶ ಕಲ್ಪಿಸಲಾಗಿದೆ.

ಹಾಗಾಗಿ, ಪ್ರಸ್ತಾಪಿತ ಜಮೀನುಗಳಲ್ಲಿ ಶೈಕ್ಷಣಿಕ ಕಟ್ಟಡವನ್ನು ಕಟ್ಟಿದಲ್ಲಿ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

ವಾಸಾಸಂಇ/ವಾ.ಪ್ರ/1289/2023–24

ಕನಕಪುರ ಯೋಜನಾ ಪ್ರಾಧಿಕಾರ
ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ,
ಕನಕಪುರ ತಾ॥, ರಾಮನಗರ ಜಿಲ್ಲೆ. ದೂ. : 080–29762005, 29762006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./ಭೂ.ಉ.ಬ./03, 06 & 08/2023–24 ದಿನಾಂಕ : 14–09–2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14 (ಎ) ಪ್ರಕಾರ, ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ, **ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.** ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಶ್ರೀ. ಜಯರಾಮ ಬಿನ್ ಮುನಿಸ್ವಾಮಪ್ಪ	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ನೆಟ್ಟಿಗೆರೆ	201	1–13	ವ್ಯವಸಾಯ	ವಾಣಿಜ್ಯ (ವಾಣಿಜ್ಯ ಸಂಕೀರ್ಣ)
					ಒಟ್ಟು	1–13		
02	ಶ್ರೀ. ಕರಣ್ ಅಗರವಾಲ್ ಮತ್ತು ಇತರರು M/s Agrawal Assetz ಪಾಲುದಾರರು	ಹಾರೋಹಳ್ಳಿ	ಹಾರೋಹಳ್ಳಿ	ಕಗ್ಗಲಹಳ್ಳಿ	83/4	0–38	ವ್ಯವಸಾಯ	ಕೈಗಾರಿಕಾ
					83/5	0–13		
						(01 ಗುಂ 'ಎ'ಖರಾಬು ಸೇರಿ)		
					84/5	1–39		
					ಒಟ್ಟು	3–10		
03	ಶ್ರೀ. ಅಶೋಕ್ ಸೂತ ನಿರ್ದೇಶಕರು ಮೆ॥ ಗೋಕುಲ್‌ದಾಸ್ ಎಕ್ಸ್‌ಪರ್ಟ್ಸ್ ಅಪೇರಲ್ ಟೆಕ್ಸ್‌ಟೈಲ್ ಪಾರ್ಕ್ ಪ್ರೈ.ಲಿ.	ಹಾರೋಹಳ್ಳಿ	ಹಾರೋಹಳ್ಳಿ	ಗಬ್ಬಾಡಿ	6/1ಎ	1–30 ಪೈಕಿ 1–22	ವಸತಿ ಹಾಗೂ ಭಾಗಶಃ ವಾಣಿಜ್ಯ	ವಾಣಿಜ್ಯ (Diagnostic and Research Centre)
					6/1ಬಿ	1–02 ಪೈಕಿ 0–39		
					7/1	2–08 ಪೈಕಿ 2–01.08		
					ಒಟ್ಟು	4–22.08		
					ಒಟ್ಟಾರೆ	9–05.08		

ಷರಾ : – ಕ್ರ. ಸಂ. (1) ರ ಅರ್ಜಿದಾರರು ವಾಣಿಜ್ಯ (ವಾಣಿಜ್ಯ ಸಂಕೀರ್ಣ) ಅಭಿವೃದ್ಧಿಪಡಿಸುವುದರಿಂದ ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ಅಂಗಡಿಗಳು ಬಾಡಿಗೆಗೆ ದೊರಕುವುದಲ್ಲದೆ ಉದ್ಯೋಗವಕಾಶಗಳು ಸೃಷ್ಟಿಯಾಗುತ್ತದೆ ಹಾಗೂ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುವುದಾಗಿ, ಕ್ರ. ಸಂ. (2) ರಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ಕೈಗಾರಿಕಾ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸ್ಥಳೀಯರಿಗೆ ಉದ್ಯೋಗ ದೊರಕುವುದಾಗಿ ಮತ್ತು ಸುತ್ತ–ಮುತ್ತಲಿನ ಪ್ರದೇಶ ಅಭಿವೃದ್ಧಿಯಾಗುವುದಾಗಿ ಮತ್ತು ಕ್ರ. ಸಂ. (3) ರ ಅರ್ಜಿದಾರರು ವಾಣಿಜ್ಯ (Diagnostic and Research Centre) ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸ್ಥಳೀಯರಿಗೆ ಉದ್ಯೋಗ ದೊರಕುವುದಾಗಿ ಮತ್ತು ಸುತ್ತ–ಮುತ್ತಲಿನ ಪ್ರದೇಶ ಅಭಿವೃದ್ಧಿಯಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ವ್ಯಕ್ತಪಡಿಸಿರುವುದರಿಂದ ಸದರಿ ಜಮೀನುಗಳನ್ನು ಕ್ರಮವಾಗಿ ವ್ಯವಸಾಯ ವಲಯದಿಂದ ವಾಣಿಜ್ಯ (ವಾಣಿಜ್ಯ ಸಂಕೀರ್ಣ) ವಲಯಕ್ಕಾಗಿ, ವ್ಯವಸಾಯ ವಲಯದಿಂದ ಕೈಗಾರಿಕಾ ವಲಯಕ್ಕಾಗಿ, ವಸತಿ ಹಾಗೂ ಭಾಗಶಃ ವಾಣಿಜ್ಯ ವಲಯದಿಂದ ವಾಣಿಜ್ಯ (Diagnostic and Research Centre) ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/174/ಮಣಿಪಾಲ್/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಯೋಜನಾ ವಿಭಾಗ, ಯಲಹಂಕ ವಲಯ, ಬೆಂಗಳೂರು – 560092.

ಸಂಖ್ಯೆ: ಬಿಬಿಎಂಪಿ/ವೈಎನ್‌ಕೆ/ಕಾಅ(ಯೋ)/ಟೆಂಡರ್/01/2023–24 ದಿನಾಂಕ: 14–09–2023

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ)
ಆಸಕ್ತಿ ವ್ಯಕ್ತಪಡಿಸುವಿಕೆ

ಕಾರ್ಯಪಾಲಕ ಅಭಿಯಂತರರು (ಯೋಜನಾ ವಿಭಾಗ), ಯಲಹಂಕ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗೆ ವ್ಯಕ್ತಿ, ಮಾಲೀಕರು, ಪಾಲುದಾರಿಕೆ ಸಂಸ್ಥೆ, ಸಾರ್ವಜನಿಕ ಅಥವಾ ಖಾಸಗಿ ನಿಯಮಿತ ಕಂಪನಿಯಿಂದ ಆಸಕ್ತಿ ವ್ಯಕ್ತಪಡಿಸುವಿಕೆಗೆ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು	ಇ.ಎಂ.ಡಿ
1	ಬಿಬಿಎಂಪಿಯ ಯಲಹಂಕ ವಲಯದಲ್ಲಿ ಅನಧಿಕೃತ / ಕಾನೂನುಬಾಹಿರ ಜಾಹೀರಾತುಗಳನ್ನು ತೆಗೆದುಹಾಕುವ ಸೇವೆಗಳನ್ನು ಒದಗಿಸುವಿಕೆ.	ರೂ. 1.00 ಲಕ್ಷ

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **25–09–2023 ರಂದು ಸಂಜೆ 4.00 ಗಂಟೆವರೆಗೆ.** 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **26–09–2023 ರಂದು ಸಂಜೆ 4.30 ಗಂಟೆಗೆ.** 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **27–09–2023 ರಂದು ಸಂಜೆ 4.00 ಗಂಟೆಗೆ (ಸಾಧ್ಯವಾದಲ್ಲಿ).** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಯೋಜನಾ ವಿಭಾಗ, ಯಲಹಂಕ ವಲಯ, ಬಿಬಿಎಂಪಿ.

ಐ.ಟಿ.ಐ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೂರವಾಣಿ ನಗರ, ಬೆಂಗಳೂರು-560 016

ಉಲ್ಲೇಖ: ಐ.ಟಿ.ಐ.ಇ.ಹೆಚ್.ಎಸ್./ಜಿ.ಬಿ.ಎಂ./2023-24 ದಿನಾಂಕ: 02.09.2023

ಸಂಘದ ವಾರ್ಷಿಕ ಮಹಾಸಭೆಯ ತಿಳುವಳಿಕೆ

ನಮ್ಮ ಸಹಕಾರ ಸಂಘದ 2022-2023 ನೇ ಸಾಲಿನ 51 ನೇ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ: 23.09.2023 ನೇ ಶನಿವಾರ ಬೆಳಗ್ಗೆ 11.00 ಘಂಟೆಗೆ ವಿದ್ಯಾಮಂದಿರದ ಬಯಲು ಮಂದಿರ (ಓಪನ್ ಏರ್ ಥಿಯೇಟರ್), ದೂರವಾಣಿ ನಗರ, ಬೆಂಗಳೂರು-560016 ಇಲ್ಲಿ ನಡೆಸಲು ತೀರ್ಮಾನಿಸಿ, ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ ನಿರ್ಣಯ ಕೈಗೊಳ್ಳಲು ಸಂಘದ ಅಧ್ಯಕ್ಷರಾದ **ಶ್ರೀ ಜಿ.ಎಸ್. ರಾಮಸ್ವಾಮಯ್ಯ**ನವರ ಅಧ್ಯಕ್ಷತೆಯಲ್ಲಿ ಸಭೆ ನೆರವೇರಿಸಲಾಗುವುದು.

ಕಾರ್ಯಕ್ರಮಗಳು

1. ಪ್ರಾರ್ಥನೆ
2. ಅಧ್ಯಕ್ಷರಿಂದ ಸ್ವಾಗತ ಭಾಷಣ
3. ದಿನಾಂಕ: 25.09.2022 ರಂದು ನಡೆದ 50 ನೇ ಸರ್ವ ಸದಸ್ಯರ ಮಹಾಸಭೆಯ ನಡವಳಿಕೆಗಳ ದೃಢೀಕರಣ
4. 2022-23 ನೇ ಸಾಲಿನ ಆಡಳಿತ ವರದಿ
5. 2022-23 ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಅಂಗೀಕಾರ
6. 2023-24 ಸಾಲಿನ ಮುಂಗಡ ಪತ್ರದ ಅಂಗೀಕಾರ
7. ಇತರೆ ವಿಷಯಗಳು ಸಭಾಧ್ಯಕ್ಷರ ಅಪ್ಪಣೆ ಮೇರೆಗೆ
8. ವಂದನಾರ್ಪಣೆ

ವಂದನೆಗಳೊಂದಿಗೆ
ದಿನಾಂಕ: 02.09.2023
ಸ್ಥಳ: ಬೆಂಗಳೂರು

ಕಾರ್ಯಕಾರಿ ಸಮಿತಿಯ ಆಜ್ಞಾನುಸಾರ
ಸಹಿ/-
(ಸುಧಾಮಣಿ. ಎಸ್.)
ಮುಖ್ಯಕಾರ್ಯ ನಿರ್ವಾಹಕರು

ಆಕ್ಸಿಸ್ ಬ್ಯಾಂಕ್ ಹರಾಜಿಗೆ ಸಾರ್ವಜನಿಕ ಸೂಚನೆ
ಸಾರ್ವಜನಿಕ ಸೂಚನೆ – ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟಿಸ್

ಈ ಮೂಲಕ ಸಾಲಗಾರರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**‌ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ–ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 25.09.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರು ಮತ್ತು ಬಾಕಿ ಮೊತ್ತಗಳ ವಿವರಗಳು

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ ಮೊತ್ತ	ಡಿಮ್ಯಾಂಡ್ ನೋಟೀಸ್ ದಿನಾಂಕ :	ಒಟ್ಟು ತೂಕ	ನಿವ್ವಳ ತೂಕ
ಬಸವೇಶ್ವರನಗರ, ಬೆಂಗಳೂರು	XXXXXXXXXXX6006	ಎಸ್. ಶ್ರೀಕಾಂತ್	273087	30-May-23	87.260	86.000
ಬಸವೇಶ್ವರನಗರ, ಬೆಂಗಳೂರು	XXXXXXXXXXX5974	ಎಸ್. ಶ್ರೀಕಾಂತ್	142713	18-Jul-23	48.200	46.700
ಬಂಗಾರಪೇಟೆ [ಕ]	XXXXXXXXXXX0862	ಸೀಮಾ ಅಜಂ	60762	30-May-23	19.200	18.700
ಚಾಮರಾಜಪೇಟೆ, ಬೆಂಗಳೂರು [ಕ]	XXXXXXXXXXX3674	ಫೈಜುದ್ದೀನ್.ಪಿ.ಕೆ.	305582	30-May-23	192.200	174.000
ಚಾಮರಾಜಪೇಟೆ, ಬೆಂಗಳೂರು [ಕ]	XXXXXXXXXXX5219	ಫೈಜುದ್ದೀನ್.ಪಿ.ಕೆ.	191663	30-May-23	101.400	100.800
ಚಿಂತಾಮಣಿ [ಕ]	XXXXXXXXXXX0654	ತೇಜಸ್.ಎನ್	123249.7	30-May-23	41.600	38.600
ಗೋವಿಂದರಾಜನಗರ, ಬೆಂಗಳೂರು [ಕ]	XXXXXXXXXXX4579	ತಿಮ್ಮಪ್ಪ.ಎಲ್	171276	30-May-23	94.600	94.600
ಗೋವಿಂದರಾಜನಗರ, ಬೆಂಗಳೂರು [ಕ]	XXXXXXXXXXX6700	ತಿಮ್ಮಪ್ಪ.ಎಲ್	35219	18-Jul-23	33.000	21.000
ಹೊಸಕೋಟೆ, ಬೆಂಗಳೂರು [ಕ]	XXXXXXXXXXX5772	ಆರಿಫ್ ಮೊಲ್ಲ	280198	30-May-23	155.200	152.000
ಹೊಸಕೋಟೆ, ಬೆಂಗಳೂರು [ಕ]	XXXXXXXXXXX3180	ಡಿ.ಸುರೇಂದ್ರ	66000	18-Jul-23	21.200	20.000
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು [ಕ]	XXXXXXXXXXX3800	ಮದನ್ ಎಂ.	48891	30-May-23	32.800	29.000
ಕಲ್ಯಾಣ ನಗರ, ಬೆಂಗಳೂರು [ಕ]	XXXXXXXXXXX4488	ಬಲ್ಲಿಕುರವ ವೆಂಕಟರಾವ್	99682	28-Jul-23	34.600	33.800
ಕಸ್ತೂರಿನಗರ, ಬೆಂಗಳೂರು	XXXXXXXXXXX7535	ಬಿ.ಕೆ. ಲೋಕೇಶ್	305040	28-Jul-23	79.700	79.000
ಕನಕಪುರ (ಕ}	XXXXXXXXXXX4278	ಗಂಗಮ್ಮ	41738	30-May-23	13.000	11.140
ಮಲ್ಲೇಶ್ವರಂ, ಬೆಂಗಳೂರು [ಕ]	XXXXXXXXXXX9703	ಅನಂತ್ ಕುಮಾರ್.ಎಂ.	28991	18-Jul-23	9.700	8.400
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX8034	ಮಾಯಾಂಕ್ ಸರಸ್ವತ್	77736	18-Jul-23	25.200	24.700
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX5127	ಮೊಹಮ್ಮದ್ ಇಮ್ರಾನ್	41632	28-Jul-23	12.900	12.600
ಮಾರತಹಳ್ಳಿ, ಬೆಂಗಳೂರು [ಕ]	XXXXXXXXXXX2719	ಪ್ರಣವ್ ಪಿ. ಪ್ರಕಾಶ್	126654	18-Jul-23	73.800	69.200
ನೆಲಮಂಗಲ, ಬೆಂಗಳೂರು [ಕ]	XXXXXXXXXXX1374	ಆರ್.ರಾಧಾ	242859.36	30-May-23	83.100	81.600
ಸರ್ಜಾಪುರ ರಸ್ತೆ, ಬೆಂಗಳೂರು [ಕ]	XXXXXXXXXXX0199	ಅಭಿಲಾಷ್ .ಜಿ	49953	30-May-23	14.200	13.200
ವಿದ್ಯಾರಣ್ಯಪುರ ಬೆಂಗಳೂರು	XXXXXXXXXXX1050	ಅಭಿಜಿತ್.ಪಿ.	124702	30-May-23	34.890	33.890
ವಿದ್ಯಾರಣ್ಯಪುರ ಬೆಂಗಳೂರು	XXXXXXXXXXX2343	ಅಭಿಜಿತ್.ಪಿ.	45618	18-Jul-23	13.630	13.530
ಯಲಹಂಕ, ಬೆಂಗಳೂರು [ಕ]	XXXXXXXXXXX1961	ಪುರುಷೋತ್ತಮ .ಕೆ	46026	18-Jul-23	13.300	13.000
ಯಲಹಂಕ, ಬೆಂಗಳೂರು [ಕ]	XXXXXXXXXXX1762	ಸಿದ್ಧಲಿಂಗ್	91824	30-May-23	30.600	27.900

ಆಕ್ಸಿಸ್ ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ.
ಹರಾಜು ಆನ್‌ಲೈನ್ **https://gold.samil.in** ನಲ್ಲಿ **ದಿನಾಂಕ : 25.09.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30** ವರೆಗೆ ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ **https://gold.samil.in** ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು ಸಹಿ/– ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್

ಐದು ತಿಂಗಳಾದರೂ ಹಣ ಪಾವತಿಸದ ಸಂಸ್ಕೃತಿ ಇಲಾಖೆ • ಕನ್ನಡ ಭವನಕ್ಕೆ ಅಲೆದಾಡುತ್ತಿರುವ ಕಲಾವಿದರು

ಕಲಾವಿದರಿಗಿಲ್ಲ ‘ಬೆಂಗಳೂರು ಹಬ್ಬ’ ಸಂಭ್ರಮ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ‘ನಮ್ಮ ಬೆಂಗಳೂರು ಹಬ್ಬ’ ನಡೆದು ಐದು ತಿಂಗಳು ಕಳೆದರೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಾವಿದರಿಗೆ ಹಣ ಪಾವತಿಸಿಲ್ಲ. ಇದರಿಂದ ಕಂಗಾಲಾಗಿರುವ ಕಲಾವಿದರು ಕನ್ನಡ ಭವನಕ್ಕೆ ಅಲೆದಾಟ ನಡೆಸುತ್ತಿದ್ದಾರೆ.

ಬೆಂಗಳೂರಿನ ಸಂಸ್ಕೃತಿ, ಕಲೆ ಹಾಗೂ ಪರಂಪರೆಯನ್ನು ಇಲ್ಲಿ ನೆಲೆಸಿರುವವರಿಗೆ ಪರಿಚಯಿಸುವ ಉದ್ದೇಶದಿಂದ ಬೆಂಗಳೂರು ಹಬ್ಬ ನಡೆಸಲಾಗಿತ್ತು. ಬಿಜೆಪಿ ನೇತೃತ್ವದ ಕಳೆದ ರಾಜ್ಯ ಸರ್ಕಾರ 2023ರ ಮಾರ್ಚ್ 25 ಮತ್ತು 26ರಂದು ಕಬ್ಬನ್ ಉದ್ಯಾನ ಹಾಗೂ ವಿಧಾನಸೌಧದ ಆವರಣದಲ್ಲಿ ಹಮ್ಮಿಕೊಂಡಿತ್ತು. ವಿವಿಧ ಜಾನಪದ ಕಲಾ ತಂಡಗಳು, ಚಲನಚಿತ್ರ ಗಾಯಕರ ಬ್ಯಾಂಡ್‌ಗಳು, ರಿಯಾಲಿಟಿ ಶೋಗಳ ಗಾಯಕರು ಪ್ರದರ್ಶನ ನೀಡಿದ್ದರು. ಈ ಉತ್ಸವದಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪಗಳು ಕೇಳಿ ಬಂದಿದ್ದರಿಂದ ಕಲಾವಿದರಿಗೆ ಈವರೆಗೂ ಹಣ ಪಾವತಿಸಿಲ್ಲ.

ಎರಡು ದಿನಗಳ ಉತ್ಸವದ ನಿರ್ವಹಣೆಯನ್ನು ಇಲಾಖೆಯು ‘ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್’ ಸಂಸ್ಥೆಗೆ ನೀಡಿತ್ತು. ಸಂಸ್ಥೆಯು ಈ ಉತ್ಸವಕ್ಕೆ ಒಟ್ಟು ₹ 5.59 ಕೋಟಿ ಹಣ ವೆಚ್ಚವಾಗಿರುವುದಾಗಿ ದರಪಟ್ಟಿಯನ್ನು ಇಲಾಖೆಗೆ ಸಲ್ಲಿಸಿತ್ತು. ಕುರ್ಚಿ, ಟೇಬಲ್ ಸೇರಿ ಹಬ್ಬಕ್ಕೆ ಬೇಕಾದ ವಸ್ತುಗಳಿಗೆ ದುಪ್ಪಟ್ಟು ಹಣ ನಿಗದಿಪಡಿಸಲಾಗಿದೆ ಎಂದು ಕಲಾ ಸಂಘಟನೆಗಳು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದವು. ಇದರಿಂದಾಗಿ ಹಣ ಪಾವತಿಗೆ ಕಾಂಗ್ರೆಸ್ ಸರ್ಕಾರ ತಡೆ ಹಿಡಿದಿತ್ತು.

ಹಿಂದಿನ ಸರ್ಕಾರ ನಡೆಸಿದ ಬೆಂಗಳೂರು ಹಬ್ಬದಲ್ಲಿ ಅವ್ಯವಹಾರ ನಡೆದಿದೆಯೆಂದು ದೂರುಗಳು ಬಂದಿದ್ದವು. ಆದ್ದರಿಂದ ಈ ಬಗ್ಗೆ ಪರಿಶೀಲನೆ ನಡೆಸಿ, ದರ ಪಟ್ಟಿ ಪರಿಷ್ಕರಿಸಲಾಗುತ್ತಿದೆ

ಶಿವರಾಜ್ ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಸಚಿವ

ಕಲಾವಿದರ ಅಸಮಾಧಾನ: ಇಲಾಖೆಯು ಟೆಂಡರ್ ಕರೆಯದೆ ಸಂಸ್ಥೆಯೊಂದಕ್ಕೆ ಕಾರ್ಯಕ್ರಮ ನಿರ್ವಹಣೆಯ ಅವಕಾಶ ನೀಡಿರುವುದು ಸಹ ಕಲಾವಿದರ ಅಸಮಾಧಾನಕ್ಕೆ ಕಾರಣವಾಗಿತ್ತು. ದರಪಟ್ಟಿ ಪರಿಶೀಲಿಸದೆಯೇ ಇಲಾಖೆ ಅನುಮತಿ ನೀಡಿದೆ ಎಂದು ಕಲಾ ಸಂಘಟನೆಗಳು ದೂರಿದ್ದವು. ಹೀಗಾಗಿ, ಸರ್ಕಾರವು ಈಗ ತನಿಖೆಗೆ ಕ್ರಮವಹಿಸಿದೆ. ಇದರಿಂದಾಗಿ ಕಲಾವಿದರಿಗೆ ಹಣ ಪಾವತಿ ಇನ್ನಷ್ಟು ವಿಳಂಬವಾಗುವ ಸಾಧ್ಯತೆಯಿದೆ.

‘ಇತ್ತೀಚಿನ ವರ್ಷಗಳಲ್ಲಿ ಕಲಾವಿದರಿಗೆ ಕಾರ್ಯಕ್ರಮಗಳು ಸಿಗುವುದೇ ಅಪರೂಪ. ಸಿಕ್ಕ ಅವಕಾಶಗಳಿಗೂ ಹಣ ಪಾವತಿಸದಿದ್ದರೆ ಕಲಾವಿದರು ಜೀವನ ನಿರ್ವಹಣೆಗೆ ಏನು ಮಾಡಬೇಕು? ಕನ್ನಡ ಭವನಕ್ಕೆ ತೆರಳಿ ಈ ಬಗ್ಗೆ ವಿಚಾರಿಸಿದರೆ ಸೂಕ್ತ ಸ್ಪಂದನೆಯೂ ದೊರೆಯುತ್ತಿಲ್ಲ’ ಎಂದು ಬೆಂಗಳೂರು ಹಬ್ಬದಲ್ಲಿ ಪ್ರದರ್ಶನ ನೀಡಿದ ಕಲಾ ಸಂಘಟನೆಯ ಮುಖ್ಯಸ್ಥರೊಬ್ಬರು ತಿಳಿಸಿದರು.

‘ಈ ಉತ್ಸವಕ್ಕೆ ಸಂಬಂಧಿಸಿದಂತೆ ಸರ್ಕಾರವು ಅಧಿಕಾರಿಗಳನ್ನು ಶಿಕ್ಷಿಸುವ ಬದಲು ಕಲಾವಿದರಿಗೆ ಶಿಕ್ಷೆ ನೀಡುತ್ತಿದೆ. ಈಗಾಗಲೇ ಕಲಾ ಪ್ರಪಂಚ ಸಂಕಷ್ಟದಲ್ಲಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಆದಷ್ಟು ಬೇಗ ಸೂಕ್ತ ತನಿಖೆ ನಡೆಸಿ, ಕಲಾವಿದರಿಗೆ ಹಣ ಪಾವತಿಸಬೇಕು’ ಎಂದು ಕಲಾವಿದ ಜಯಸಿಂಹ ಎಸ್. ಆಗ್ರಹಿಸಿದರು.

ಯಾರಿಗೆ ಎಷ್ಟು ಹಣ?

ಬೆಂಗಳೂರು ಹಬ್ಬದಲ್ಲಿ ಹಲವು ಜಾನಪದ ಕಲಾ ತಂಡಗಳು ಪ್ರದರ್ಶನ ನೀಡಿದ್ದವು. ಸಂಸ್ಕೃತಿ ಇಲಾಖೆಯಡಿ ಪ್ರದರ್ಶನ ನೀಡಿದ ಕಲಾವಿದರು ಹಾಗೂ ತಂಡಗಳಿಗೆ ಒಟ್ಟು ₹ 25 ಲಕ್ಷ, ಗಾಯಕಿ ಅನನ್ಯಾ ಭಟ್ ಮತ್ತು ತಂಡಕ್ಕೆ ₹ 9.50 ಲಕ್ಷ, ನವೀನ್ ಸಜ್ಜು ಮತ್ತು ತಂಡಕ್ಕೆ ₹ 4.50 ಲಕ್ಷ, ಜನಾರ್ದನ್ ಮತ್ತು ತಂಡಕ್ಕೆ ₹ 12.50 ಲಕ್ಷ, ಸರಿಗಮಪ ರಿಯಾಲಿಟಿ ಶೋ ಗಾಯಕರಿಗೆ ₹ 15.50 ಲಕ್ಷ ಹಾಗೂ ಪ್ರಭಾತ್ ಕಲಾವಿದರಿಗೆ ₹ 2.75 ಲಕ್ಷ ಪಾವತಿಸಬೇಕೆಂದು ‘ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್’ ದರಪಟ್ಟಿ ನೀಡಿತ್ತು. ಕಲಾವಿದರಿಗೆ ನೀಡುವ ಧನದ ಬಗ್ಗೆಯೂ ಈಗ ಪರಿಶೀಲನೆ ನಡೆಸಲಾಗುತ್ತಿದೆ.

ಮೆಟ್ರೊ: ಸೆ.20ರ ಬಳಿಕ ಸಿಎಂಆರ್‌ಎಸ್ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ನೇರಳೆ ಮಾರ್ಗದಲ್ಲಿ ವಿಸ್ತರಿತ ನಿಲ್ದಾಣಗಳ ನಡುವೆ ವಿವಿಧ ಪರೀಕ್ಷೆಗಳು ಮುಗಿದಿದ್ದು, ಸೆ.20ರ ಬಳಿಕ ಮೆಟ್ರೊ ರೈಲು ಸುರಕ್ಷತಾ ಆಯುಕ್ತರು (ಸಿಎಂಆರ್‌ಎಸ್) ಪರಿಶೀಲನೆ ನಡೆಸಲಿದ್ದಾರೆ.

ನೇರಳೆ ಮಾರ್ಗದಲ್ಲಿನ ವಿಸ್ತರಿತ ಕಾಮಗಾರಿ ಇದಾಗಿದ್ದು, ಬೈಯಪ್ಪನಹಳ್ಳಿ–ಕೆ.ಆರ್. ಪುರ ನಡುವೆ 2.5 ಕಿಲೋಮೀಟರ್ ಹಾಗೂ ಕೆಂಗೇರಿ–ಚಲ್ಲಘಟ್ಟದ ನಡುವೆ 1.9 ಕಿ.ಮೀ ಕಾಮಗಾರಿಗಳು ಬಾಕಿ ಉಳಿದಿದ್ದವು. ಜುಲೈನಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿತ್ತು. ಜುಲೈ 27ರಿಂದ ಆಗಸ್ಟ್ ಅಂತ್ಯದವರೆಗೆ ವಿವಿಧ ಪರೀಕ್ಷೆಗಳನ್ನು ನಡೆಸಲಾಗಿತ್ತು. ತಾಂತ್ರಿಕ ತಂಡದೊಂದಿಗೆ ಮೆಟ್ರೊ ರೈಲು ಓಡಿಸಲಾಗಿತ್ತು. ಸಿಗ್ನಲಿಂಗ್ ಪರೀಕ್ಷೆ, ಓಪನ್ ವೆಬ್ ಗಿರ್ಡರ್‌ನ ಲೋಡ್ ಪರೀಕ್ಷೆ ಮಾಡಲಾಗಿತ್ತು. ತಾಂತ್ರಿಕ ತೊಂದರೆಗಳನ್ನು ಪರಿಶೀಲಿಸಿ ಸರಿಪಡಿಸಲಾಗಿತ್ತು.

30 ಕೆ.ಜಿ. ಭಾರದ 2,827 ಮರಳು ಚೀಲಗಳನ್ನು ರೈಲಿನಲ್ಲಿ ಐದು ದಿನ ಒಯ್ದು ಸಾಮರ್ಥ್ಯ ಪರೀಕ್ಷೆ ಮಾಡಲಾಗಿತ್ತು. ಸೆ.15ರ ಒಳಗೆ ಸುರಕ್ಷತಾ ಆಯುಕ್ತರು ಬಂದು ಪರಿಶೀಲನೆ ನಡೆಸಲಿದ್ದಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಪರಿಶೀಲನೆಗೆ ದಿನ ನಿಗದಿಯಾಗಿರಲಿಲ್ಲ.

ಸಿಎಂಆರ್‌ಎಸ್ ಸೆ.20ರ ಬಳಿಕ ಬರಲಿದ್ದಾರೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಸ್ಪಷ್ಟಪಡಿಸಿದ್ದಾರೆ.

ಸಿಎಂಆರ್‌ಎಸ್ ಪರಿಶೀಲಿಸಿ ವರದಿ ನೀಡಿದ ಬಳಿಕ ಉದ್ಘಾಟನೆಗೆ ದಿನ ನಿಗದಿಯಾಗಲಿದೆ. ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ ನಿತ್ಯ 6.2 ಲಕ್ಷದಷ್ಟು ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ನೇರಳೆ ಮಾರ್ಗದ ಎರಡು ತುದಿಗಳಲ್ಲಿ ಇರುವ ಈ ವಿಸ್ತರಿತ ಮಾರ್ಗ ಸಂಚಾರಕ್ಕೆ ತೆರೆದುಕೊಂಡರೆ ಮೆಟ್ರೊ ರೈಲಿನಲ್ಲಿ ನಿತ್ಯ ಸಂಚರಿಸುವವರ ಪ್ರಮಾಣ 7 ಲಕ್ಷ ದಾಟಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಕೆಂಗೇರಿ ಉಪನಗರ ಬಸ್ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಶಾಸಕ ಎಸ್‌.ಟಿ.ಸೋಮಶೇಖರ್ ಇದ್ದಾರೆ

‘ಅಭಿವೃದ್ಧಿಗೆ ಪಕ್ಷಾತೀತ ಸಹಕಾರ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಪಕ್ಷಾತೀತವಾಗಿ ಅಭಿವೃದ್ಧಿಗೆ ಸಹಕಾರ ನೀಡಲಾಗುತ್ತಿದೆ. ಯಾರನ್ನೂ ಪಕ್ಷಕ್ಕೆ ಸೆಳೆಯಲು ಅಲ್ಲ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಯಶವಂತಪುರ ಶಾಸಕ ಎಸ್. ಟಿ.ಸೋಮಶೇಖರ್ ಅವರೊಂದಿಗೆ ಕೆಂಗೇರಿ ಉಪನಗರ ಬಸ್ ನಿಲ್ದಾಣ ಪರಿಶೀಲಿಸಿ ಮಾತನಾಡಿದ ಅವರು, ‘ಸೋಮಶೇಖರ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಉದ್ದೇಶದಿಂದ ಯಶವಂತಪುರ ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿಲ್ಲ. ಎಲ್ಲ ಕ್ಷೇತ್ರದ ಬೆಳವಣಿಗೆ ಸರ್ಕಾರದ ಗುರಿಯಾಗಿದೆ’ ಎಂದರು.

‘ಜನವರಿ ಅಂತ್ಯದ ಒಳಗೆ ಕೆಂಗೇರಿ ಉಪನಗರ ಬಸ್ ನಿಲ್ದಾಣವನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸಲಾಗುವುದು. ಕಟ್ಟಡದ ಶುಚಿತ್ವ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಕೋವಿಡ್ ಕಾರಣಕ್ಕೆ ಬಸ್ ನಿಲ್ದಾಣದ ಅಭಿವೃದ್ಧಿಗೆ ಹಿನ್ನಡೆಯಾಗಿತ್ತು. ಇನ್ನು ಮೂರು ತಿಂಗಳ ಒಳಗೆ ಬಸ್ ನಿಲ್ದಾಣದ ಸಂಕೀರ್ಣದಲ್ಲಿರುವ ವಾಣಿಜ್ಯ ಕಟ್ಟಡಗಳನ್ನು ಬಾಡಿಗೆಗೆ ನೀಡಲಾಗುವುದು. ಬಸ್ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಲು ಪೂರಕವಾದ ಎಲ್ಲಾ ಅಗತ್ಯಗಳನ್ನು ಪೂರೈಸಿ ಜನವರಿ ಹೊತ್ತಿಗೆ ಬಸ್ ನಿಲ್ದಾಣವನ್ನು ಅಧಿಕೃತವಾಗಿ ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಗುವುದು’ ಎಂದು ಹೇಳಿದರು.

’ನಗರದ ಅಭಿವೃದ್ಧಿ ಹಾಗೂ ಸಾರ್ವಜನಿಕ ಕುಂದು ಕೊರತೆ ಬಗೆಹರಿಸುವ ನಿಟ್ಟಿನಲ್ಲಿ ಕೆಂಗೇರಿಗೆ ಭೇಟಿ ನೀಡಿದ್ದೇನೆ. ರಾಜಕೀಯ ಉದ್ದೇಶದಿಂದಲ್ಲ’ ಎಂದು ಸ್ಪಷ್ಟ ಪಡಿಸಿದರು.

ಶಾಸಕ ಎಸ್‌.ಟಿ.ಸೋಮಶೇಖರ್ ಮಾತನಾಡಿ, ’ಹಲವಾರು ವರ್ಷಗಳ ಪ್ರಯತ್ನದ ಫಲವಾಗಿ ಕೆಂಗೇರಿ ಬಸ್ ನಿಲ್ದಾಣ ನಿರ್ಮಾಣವಾಗಿದೆ. ಸಚಿವರ ಸಹಕಾರದೊಂದಿಗೆ ನಿಲ್ದಾಣದಲ್ಲಿನ ಸಮಸ್ಯೆಗಳನ್ನು ಬಗೆಹರಿಸಿ ಶೀಘ್ರ ಉದ್ಘಾಟಿಸಲಾಗುವುದು’ ಎಂದು ಹೇಳಿದರು .

’ಈಗಲೂ ನಾನು ಬಿಜೆಪಿಯಲ್ಲಿದ್ದೇನೆ. ಪ್ರವಾಸದ ಕಾರಣ ಬಿಜೆಪಿ ಆಯೋಜಿಸಿದ್ದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿಲ್ಲ. ಬಿಜೆಪಿ ಬಿಡುವ ಪ್ರಶ್ನೆಯೇ ಇಲ್ಲ’ ಎಂದು ತಿಳಿಸಿದರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ಆಗ್ರಹ

‘ಶಾಲೆ ದತ್ತು ಸ್ವೀಕಾರ ಮುಂದುವರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಶಾಲೆಗಳನ್ನು ಶಾಸಕರು ದತ್ತು ಪಡೆದು, ಅಭಿವೃದ್ಧಿಪಡಿಸುವ ಯೋಜನೆಯನ್ನು ರಾಜ್ಯ ಸರ್ಕಾರ ಮುಂದುವರಿಸಬೇಕು’ ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ಆಗ್ರಹಿಸಿದರು.

ಶ್ರೀ ಕೃಷ್ಣ ವಿದ್ಯಾ ಸಮೂಹ ಸಂಸ್ಥೆ ನಗರದಲ್ಲಿ ಗುರುವಾರ ಹಮ್ಮಿಕೊಂಡ ದತ್ತು ಸ್ವೀಕೃತ ಐದು ಸರ್ಕಾರಿ ಶಾಲೆಗಳ ಹಸ್ತಾಂತರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ 1,500 ಪುಸ್ತಕ ಮತ್ತು ಬ್ಯಾಗ್ ವಿತರಿಸಿ, ಮಾತನಾಡಿದರು.

‘ಸರ್ಕಾರಿ ಶಾಲೆಗಳನ್ನು ದತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಈಗಾಗಲೇ ಚರ್ಚಿಸಿದ್ದು, ಹಿಂದಿನ ಸರ್ಕಾರದ ದತ್ತು ಯೋಜನೆಯನ್ನು ಮುಂದುವರಿಸುವ ಬಗ್ಗೆ ಸಕಾರಾತ್ಮಕ ಸ್ಪಂದನೆ ದೊರೆತಿದೆ. ರಾಜ್ಯದಲ್ಲಿ 42 ಸಾವಿರ ಸರ್ಕಾರಿ ಶಾಲೆಗಳಿದ್ದು, 50 ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. 30 ಸಾವಿರ ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ಮೂಲಸೌಕರ್ಯದ ಸಮಸ್ಯೆಗಳಿವೆ. ಹೀಗಾಗಿ, ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ನೆರವು ಪಡೆಯುವ ಸಂಬಂಧ ಸಮಿತಿ ರಚಿಸಬೇಕು. ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ನಡೆಸಿ, ಡಿಜಿಟಲ್ ಆರೋಗ್ಯ ಕಾರ್ಡ್ ವಿತರಿಸಲು ವ್ಯವಸ್ಥೆ ಕಲ್ಪಿಸಬೇಕು’ ಎಂದು ಹೇಳಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ, ‘ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಒತ್ತು ನೀಡುತ್ತಿದ್ದು, ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಹೆಚ್ಚಿನ ಹಣ ಒದಗಿಸುತ್ತಿದ್ದೇನೆ. ಉತ್ತರ ಹಳ್ಳಿಯ ಶಾಲೆಗೆ ಲಿಫ್ಟ್ ವ್ಯವಸ್ಥೆ ಕಲ್ಪಿಸಿದ್ದು, ಸರ್ಕಾರಿ ಶಾಲೆಯಲ್ಲಿಇಂತಹಸೌಲಭ್ಯಅತ್ಯಂತವಿರಳ.ಜನ್ಮ ದಿನ, ವಿಶೇಷ ಶುಭ ಸಮಾರಂಭ, ವ್ಯಾಪಾರ ವಹಿವಾಟಿನಲ್ಲಿ ಲಾಭ ಸೇರಿ ವಿವಿಧ ಸಂದರ್ಭದಲ್ಲಿ ಸ್ವಲ್ಪ ಮೊತ್ತವನ್ನು ಶಾಲೆಗಳ ಅಭಿವೃದ್ಧಿಗೆ ನೀಡುವಂತೆ ಪ್ರೋತ್ಸಾಹಿಸಲಾಗುತ್ತಿದೆ’ ಎಂದರು.

ಶ್ರೀ ಕೃಷ್ಣ ಸಮೂಹ ವಿದ್ಯಾ ಸಂಸ್ಥೆಯ ಸಂಸ್ಥಾಪನಾಧ್ಯಕ್ಷ ಎಂ. ರುಕ್ಮಾಂಗದ ನಾಯ್ಡು, ‘ಶಾಲೆಯ ಅಭಿವೃದ್ಧಿ ಶಿಕ್ಷಕರ ಮೇಲೆ ನಿಂತಿರುತ್ತದೆ. ಶಿಕ್ಷಕರಿಂದಲೇ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿ ಸಾಧ್ಯ’ ಎಂದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಬ್ಯಾಗ್‌ಗಳನ್ನು ವಿತರಿಸಲಾಯಿತು. ಎಂ.ಆರ್. ದೊರೆಸ್ವಾಮಿ, ಎಂ. ಕೃಷ್ಣಪ್ಪ, ಎಂ. ರುಕ್ಮಾಂಗದ ನಾಯ್ಡು, ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕ ಎಂ.ಎಸ್. ಪ್ರಸನ್ನ ಕುಮಾರ್ ಹಾಗೂ ಶಿಕ್ಷಕರು ಇದ್ದಾರೆ

ಮೈತ್ರಿ ವಿಷಯ ಚರ್ಚೆಗೆ ಬರಲಿಲ್ಲ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜತೆ ಮೈತ್ರಿಯ ಕುರಿತು ಸಂಸದೀಯ ಮಂಡಳಿ ಸಭೆಯಲ್ಲಿ ಚರ್ಚೆ ನಡೆದಿಲ್ಲ. ವರಿಷ್ಠರು ಈ ಸಂಬಂಧ ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೋ ಅದನ್ನು ಒಪ್ಪಿಕೊಳ್ಳುತ್ತೇವೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ದೆಹಲಿಯಿಂದ ವಾಪಸಾದ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ, ‘ಬುಧವಾರದ ಸಭೆಯಲ್ಲಿ ಜಿ20 ಶೃಂಗಸಭೆಯ ಯಶಸ್ಸಿನ ಬಗ್ಗೆಯಷ್ಟೇ ಚರ್ಚೆ ನಡೆಯಿತು. ರಾಜ್ಯದ ರಾಜಕೀಯ ಮತ್ತು ಜೆಡಿಎಸ್ ಜತೆಗಿನ ವಿಚಾರ ಪ್ರಸ್ತಾಪವಾಗಲಿಲ್ಲ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಈ ವಿಷಯಗಳನ್ನು ಪ್ರಸ್ತಾಪಿಸಲಿಲ್ಲ. ಅವರ ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ. ಅವರು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾವು ಬದ್ಧರಾಗಿರುತ್ತವೆ. ನಾವು ವೈಯಕ್ತಿಕ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ’ ಎಂದು ಹೇಳಿದರು.

ಬಿಜೆಪಿ ನಿರ್ದೇಶನದಂತೆ ಕೇಂದ್ರದ ಸಂಸ್ಥೆಗಳು ಕೆಲಸ: ಕಾಂಗ್ರೆಸ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರಿಗೆ ತಮಿಳುನಾಡಿನ ಬಿಜೆಪಿ ಅಧ್ಯಕ್ಷ ಬರೆದರೆ ಅದು ಕೂಡಲೇ ಕಾವೇರಿ ನೀರು ನಿಯಂತ್ರಣ ಪ್ರಾಧಿಕಾರಕ್ಕೆ ಮತ್ತು ಕಾವೇರಿ ನೀರು ನಿರ್ವಹಣಾ ಆಯೋಗಕ್ಕೆ ತಲುಪುತ್ತದೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರೆದ ಪತ್ರ ಎಲ್ಲಿಗೂ ಹೋಗುವುದಿಲ್ಲ. ಕೇಂದ್ರದ ಸಂಸ್ಥೆಗಳು ಬಿಜೆಪಿ ನಿರ್ದೇಶನದಂತೆ ಕೆಲಸ ಮಾಡುತ್ತಿವೆ’ ಎಂದು ಕೆಪಿಸಿಸಿ ವಕ್ತಾರ ಸಿ.ಲಕ್ಷ್ಮಣ್ ಮತ್ತು ಕೆಪಿಸಿಸಿ ಸಂವಹನ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾವೇರಿ ನೀರಿನ ವಿಚಾರವಾಗಿ ಕೇಂದ್ರ ಬಿಜೆಪಿ ಸರ್ಕಾರ ಕರ್ನಾಟಕಕ್ಕೆ ಮಾಡುತ್ತಿರುವ ಮೋಸ ಹಾಗೂ ಕರ್ನಾಟಕ ಬಿಜೆಪಿ ನಾಯಕರ ಹೇಡಿತನದಿಂದ ಕರ್ನಾಟಕಕ್ಕೆ ಹಿನ್ನಡೆ ಆಗುತ್ತಿದೆ’ ಎಂದರು.

‘ಕಾವೇರಿ ನೀರಿನ ವಿಚಾರವನ್ನು ಮುಂಬರುವ ಲೋಕಸಭಾ ಚುನಾವಣೆಗೆ ರಾಜಕೀಯವಾಗಿ ಬಳಸಿಕೊಳ್ಳಲು ಮುಂದಾಗಿರುವ ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು. ಸಿದ್ದರಾಮಯ್ಯ ಅವರು ಕೇಂದ್ರ ನೀರಾವರಿ ಸಚಿವರು, ನಿಯಂತ್ರಣ ಸಮಿತಿಗೆ ಪತ್ರ ಬರೆದು ತಮಿಳುನಾಡಿನ ಮೋಸವನ್ನು ಬಯಲಿಗೆ ಎಳೆದಿದ್ದಾರೆ. ಇದುವರೆಗೆ ತಮಿಳುನಾಡು 99.01 ಟಿಎಂಸಿ ಅಡಿ ನೀರು ಬಳಕೆ ಮಾಡಿಕೊಂಡಿದೆ. ಕರ್ನಾಟಕ ಬಳಕೆ ಮಾಡಿಕೊಂಡಿರುವುದು 24 ಟಿಎಂಸಿ ಅಡಿ ಮಾತ್ರ’ ಎಂದು ಹೇಳಿದರು.

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ನಗರದಲ್ಲಿ ಇಂದು

ಅನಂತ ನಾಗ್ ಉತ್ಸವ ಸಮಾರೋಪ: ಅಧ್ಯಕ್ಷತೆ: ಭಾ.ಮ. ಹರೀಶ್, ಮುಖ್ಯ ಅತಿಥಿ: ರವೀಂದ್ರ ಭಟ್ಟ, ಸನ್ಮಾನಿತರು: ಅನಂತ ನಾಗ್, ಸನ್ಮಾನಿಸುವವರು: ಚಿರಂಜೀವಿ ಸಿಂಘ್, ಅಭಿನಂದನೆ: ಎನ್‌.ಎಸ್. ಶ್ರೀಧರಮೂರ್ತಿ, ಆಯೋಜನೆ: ಭಾರತೀಯ ವಿದ್ಯಾಭವನ, ಸುಚಿತ್ರ ಫಿಲಂ ಸೊಸೈಟಿ, ಸ್ಥಳ: ಇಎಸ್‌ವಿ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಸಂಜೆ 5



ಅನಂತ ನಾಗ್

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ–ಭಾರತ ಸಂವಿಧಾನ ಪೀಠಿಕೆಯ ಜಾಗತಿಕ ವಾಚನ: ಚಾಲನೆ: ಸಿದ್ದರಾಮಯ್ಯ, ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಸ್ಥಳ: ವಿಧಾನಸೌಧದ ಮುಂಭಾಗ, ಬೆಳಿಗ್ಗೆ 9.30

ಎಂಜಿನಿಯರ್ ದಿನಾಚರಣೆ: ಉದ್ಘಾಟನೆ: ಬಿ. ಶ್ರೀನಿವಾಸ ರೆಡ್ಡಿ, ಉಪನ್ಯಾಸ: ಎಚ್. ಆರ್. ಗಿರೀಶ್, ಅಧ್ಯಕ್ಷತೆ: ಬಿ.ಜಿ. ಪ್ರಸಾದ್, ಆಯೋಜನೆ ಹಾಗೂ ಸ್ಥಳ: ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 10

ಪ್ರಜಾಪ್ರಭುತ್ವ ದಿನದ ಅಂಗವಾಗಿ ಸಂವಿಧಾನದ ಪೀಠಿಕೆ ಓದು: ಆಯೋಜನೆ: ಬಹುತ್ವ ಕರ್ನಾಟಕ, ತಮಟೆ ಕರ್ನಾಟಕ, ಸ್ಥಳ ಹಲಸೂರು ಮೆಟ್ರೊ ನಿಲ್ದಾಣ ಹಾಗೂ ಜಯನಗರ ಮೆಟ್ರೊ ನಿಲ್ದಾಣದ ಹೊರಗೆ–ಬೆಳಿಗ್ಗೆ 10.30, ಜೆ.ಜೆ.ಆರ್. ನಗರ ಪೊಲೀಸ್ ಠಾಣೆ ಹೊರಗೆ–ಬೆಳಿಗ್ಗೆ 11, ರಿಚರ್ಡ್ಸ್ ಪಾರ್ಕ್ ಹತ್ತಿರ –ಮಧ್ಯಾಹ್ನ 3.30, ಟೌನ್‌ಹಾಲ್ ಮೆಟ್ಟಿಲುಗಳ ಮೇಲೆ–ಸಂಜೆ 5.30

ಸರ್.ಎಂ. ವಿಶ್ವೇಶ್ವರಯ್ಯ ಜನ್ಮದಿನಾಚರಣೆ: ಮುಖ್ಯ ಅತಿಥಿಗಳು: ಮೋಕ್ಷಗುಂಡಂ ಶೇಷಾದ್ರಿ, ಎನ್. ರಾಣಪ್ರತಾಪ್ ರೆಡ್ಡಿ, ಜಿ. ಶಶಿಕುಮಾರ್, ಆಯೋಜನೆ ಹಾಗೂ ಸ್ಥಳ: ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ, ಆರ್.ಆರ್. ನಗರ, ಬೆಳಿಗ್ಗೆ 11

ಸಂವಾದ ಸಂಭ್ರಮ: ಸಂವಾದದ 30ರ ನೆನಪುಗಳು, ಯುವಾಧಿವೇಶನ: ‘ಯುವಜನ ಹಕ್ಕುಗಳು’, ಚಾಲನೆ: ಸಬೀಹಾ ಭೂಮಿಗೌಡ, ಸ್ಪಂದನೆ: ಬಿ. ನಾಗೇಂದ್ರ, ಸಿ.ಎಸ್. ದ್ವಾರಕನಾಥ್, ಬೆಜವಾಡ ವಿಲ್ಸನ್, ಯುವಾಧಿವೇಶನ: ‘ಘನತೆಯ ಜೀವನೋಪಾಯ ದಾರಿಗಳು’, ಚಾಲನೆ: ಅಂಬಣ್ಣ ಅರೋಲಿಕರ್, ಸ್ಪಂದನೆ: ಉಮಾ ಮಹಾದೇವನ್, ಶಾರದಾ ಗೋಪಾಲ್, ಆಯೋಜನೆ: ಸಂವಾದ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10

‘ಭಾರತ ಸಂವಿಧಾನದಲ್ಲಿನ ಪ್ರಜಾಪ್ರಭುತ್ವ ತತ್ವಗಳು ಮತ್ತು ಅವುಗಳ ಅನುಷ್ಠಾನದ ಸವಾಲುಗಳು’ ಬಗ್ಗೆ ಸಂವಾದ ಕಾರ್ಯಕ್ರಮ: ಸಾನ್ನಿಧ್ಯ: ಬಸವನಾಗಿದೇವ ಸ್ವಾಮೀಜಿ, ಉದ್ಘಾಟನೆ: ಎಂ. ವೆಂಕಟ ಸ್ವಾಮಿ, ಮುಖ್ಯ ಭಾಷಣ: ಬಿ.ಟಿ. ಲಲಿತಾ ನಾಯಕ್, ಸಣ್ಣಾ ನಾಯಕ್, ಉಮಾಶಂಕರ್, ಆಶಯ ಭಾಷಣ: ಜಿ. ಗೋವಿಂದಯ್ಯ, ಆಯೋಜನೆ: ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಮಧ್ಯಾಹ್ನ 12.30

ಎಂಎಸ್‌ಎಂಇ ಕ್ಯಾಂಪ್: ಉಪಸ್ಥಿತಿ: ಎಸ್. ವಿ. ಬಿಜು, ಆಯೋಜನೆ: ಯೂನಿಯನ್ ಬ್ಯಾಂಕ್, ಸ್ಥಳ: ಪೀಣ್ಯ ಕೈಗಾರಿಕಾ ಒಕ್ಕೂಟದ ಸಮ್ಮೇಳನ ಸಭಾಂಗಣ, ಪೀಣ್ಯ ಟ್ರೇಡ್ ಸೆಂಟರ್, ಪೀಣ್ಯ 1ನೇ ಹಂತ, ಸಂಜೆ 4

47ನೇ ವಾರ್ಷಿಕೋತ್ಸವ: ಉದ್ಘಾಟನೆ: ಫಾಲಚಂದ್ರ ಶಾಸ್ತ್ರಿ, ಮುಖ್ಯ ಅತಿಥಿಗಳು: ಮಹೇಶ ಜೋಶಿ, ಪಿ.ಜಿ. ದಿವಾಕರ್, ಸನ್ಮಾನಿತ ಅತಿಥಿ: ಕೆ.ಕುಮಾರ್, ಆಯೋಜನೆ: ಲೀಲಾ ನಾಟ್ಯ ಕಲಾವೃಂದ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 4.30

56ನೇ ಎಂಜಿನಿಯರ್‌ಗಳ ದಿನಾಚರಣೆ: ಮುಖ್ಯ ಅತಿಥಿ: ಸಿದ್ದರಾಮಯ್ಯ, ಗೌರವ ಅತಿಥಿಗಳು: ಡಾ.ಎಂ.ಸಿ. ಸುಧಾಕರ್, ರಿಜ್ವಾನ್ ಅರ್ಷದ್, ಅಧ್ಯಕ್ಷತೆ: ಎಂ. ಲಕ್ಷ್ಮಣ, ಆಯೋಜನೆ ಹಾಗೂ ಸ್ಥಳ: ದಿ ಇನ್ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಸಂಜೆ 4.30

ವಚನ ಶ್ರಾವಣ ಸಮಾರೋಪ: ಆಶಯ ನುಡಿ: ಎಸ್. ಪಿನಾಕಪಾಣಿ, ಸಮಾರೋಪ ನುಡಿ: ಜಯಲಕ್ಷ್ಮಿ ಆನಂದ್, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಮುಖ್ಯ ಅತಿಥಿಗಳು: ಮಹೇಶ ಬೆಲ್ಲದ, ಗುರುಪ್ರಸಾದ ಕುಚ್ಚಂಗಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಡಾ.ಎಂ. ಚಿದಾನಂದಮೂರ್ತಿ ಸಭಾಂಗಣ, ಪಾಲಿಕೆ ಸೌಧ, 4ನೇ ಮಹಡಿ, ವಿಜಯನಗರ, ಸಂಜೆ 5

ಸಂಸ್ಥಾಪಕರ ದಿನಾಚರಣೆ ಹಾಗೂ ಸರ್.ಎಂ.ವಿ. ಸ್ಮಾರಕ ಪ್ರಶಸ್ತಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಥಾವರಚಂದ್ ಗೆಹಲೋತ್, ಗೌರವ ಅತಿಥಿ: ಬಸವರಾಜ ಬೊಮ್ಮಾಯಿ, ಪ್ರಶಸ್ತಿ ಪುರಸ್ಕೃತರು: ಕಮಲ್ ಬಾಲಿ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಕೆ.ಜಿ. ರಸ್ತೆ, ಸಂಜೆ 5

ಸರ್.ಎಂ. ವಿಶ್ವೇಶ್ವರಯ್ಯ ಜನ್ಮದಿನಾಚರಣೆ ಹಾಗೂ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಸದಾಶಿವಮೂರ್ತಿ ಟಿ.ಎಸ್., ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಕೆ. ದುರ್ಗಪ್ಪ, ಮುಖ್ಯ ಅತಿಥಿ: ಮನು ಬಳಿಗಾರ್, ಉಪನ್ಯಾಸ: ಶ್ರೀಪತಿ ಮಂಜನಬೈಲು, ಪ್ರಶಸ್ತಿ ಪುರಸ್ಕೃತರು: ಸಂಧ್ಯಾ ದೀಪ ಟ್ರಸ್ಟ್, ಬಸವರಾಜ ಸಾದರ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಚೈತನ್ಯ ಸಂಜೆ 877, ನುಲಿಯ ಚಂದಯ್ಯ ಜಯಂತಿ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ರವಿಶಂಕರ್, ಉಪನ್ಯಾಸ: ಶೋಭಾ ಮಹೇಶ್, ಉಪಸ್ಥಿತಿ: ದಿಬ್ಬೂರು ವಿ. ಗಿರೀಶ್, ಪ್ರಮೀಳಾ ಗರಡಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜು ಸಭಾಂಗಣ, 1ನೇ ಮುಖ್ಯರಸ್ತೆ, ಜಯನಗರ 8ನೇ ವಿಭಾಗ, ಸಂಜೆ 5.30

ತಿಂಗಳ ಕಾರ್ಯಕ್ರಮ: ಇನ್ ಫಾರ್ಮ್ ಥಿಯೇಟರ್ ಅಭಿನಯಿಸುವ ಸಾವಿತ್ರಿಬಾಯಿ ಫುಲೆ–ಅಕ್ಷರಯಾನ, ‘ಸರಸತಿಯಾಗಲೊಲ್ಲೆ’ ನಾಟಕ ಪ್ರದರ್ಶನ, ಮುಖ್ಯ ಅತಿಥಿ: ಆರ್.ಪಿ. ಮೋಹನ್, ಅಧ್ಯಕ್ಷತೆ: ನರಸಿಂಹ ನಾಯ್ಕ್, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ ಲಲಿತ ಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಅಹರ್ನಿಶಿ ಶಾಸ್ತ್ರೀಯ ನೃತ್ಯೋತ್ಸವ: ಮುಖ್ಯ ಅತಿಥಿಗಳು: ಬಿ.ಎಸ್. ಸುನಂದಾ ದೇವಿ, ಶೇಷಾದ್ರಿ ಅಯ್ಯಂಗಾರ್, ಆಯೋಜನೆ: ಅನನ್ಯಾ ಕಲಾನಿಕೇತನ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6

‘ಪ್ರೋಷ್ಠಪದಿ ಭಾಗವತ’ ವಿಶೇಷ ಉಪನ್ಯಾಸ: ವಿನಾಯಕಾಚಾರ್ಯ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಚುಂಚಘಟ್ಟ, ಕೋಣನಕುಂಟೆ, ಸಂಜೆ 6

67ನೇ ಮಾಸಿಕ ಶರಣ ಸಂಜೆ ಕಾರ್ಯಕ್ರಮ: ಮುಖ್ಯ ಅತಿಥಿ: ಅಡಿವೆಪ್ಪ ಹಾಲಗಿ, ವಿಷಯ: ‘ಪ್ರಸಕ್ತ ಸಮಾಜಕ್ಕೆ ವಚನ ಸಾಹಿತ್ಯದ ಪ್ರಸ್ತುತತೆ’, ಆಯೋಜನೆ: ವೀರಶೈವ ಲಿಂಗಾಯತ ಸಂಗಮ, ಸ್ಥಳ: ಸೋಮೇಶ್ವರ ಸಭಾ ಭವನ, ಮೈತ್ರಾದೇವಿ ಯಡಿಯೂರಪ್ಪ ಕನ್ವೆನ್ಷನ್ ಹಾಲ್, ಆರ್‌ಬಿಐ ಬಡಾವಣೆ, ಜೆ.ಪಿ. ನಗರ 7ನೇ ಹಂತ, ಸಂಜೆ 6

ಹರಿದಾಸ ಮಂಜರಿ: ಗಾಯನ: ಪ್ರಣೀತಾ ಟಿ. ಮಣೂರ್, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, 6ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ, ಸಂಜೆ 6.30

ಎಂ.ಡಿ. ಪಲ್ಲವಿ

61ನೇ ಬೆಂಗಳೂರು ಗಣೇಶ ಉತ್ಸವ: ಗಾಯನ: ಎಂ.ಡಿ. ಪಲ್ಲವಿ ಮತ್ತು ತಂಡ, ಸ್ಥಳ: ಶಶಾಂಕ ಫೌಂಡೇಶನ್, ಕನಕಪುರ ರಸ್ತೆ, ಸಂಜೆ 6.30

23ನೇ ವರ್ಷದ ಪ್ರವಚನ ವಾಹಿನಿ: ‘ಭಗವದ್ಗೀತೆ’, ಉಪನ್ಯಾಸಕರು: ಸುಗುಣೇಂದ್ರ ತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

‘ಪ್ರೋಷ್ಠಪದಿ ಭಾಗವತ’ ಪ್ರವಚನ: ಕಲ್ಲಾಪುರ ಪವಮಾನಾಚಾರ್, ಆಯೋಜನೆ: ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ಸ್ಥಳ: ಉತ್ತರಾದಿ ಮಠ, ಬಸವನಗುಡಿ, ಸಂಜೆ 6.30

FARNAZ



ಸಂಕ್ಷಿಪ್ತ ಸುದ್ದಿ

ವೆಂಕಟಗಿರಿಗೌಡ ಜನ್ಮ ಶತಮಾನೋತ್ಸವ 17ಕ್ಕೆ

ಬೆಂಗಳೂರು: ಶಿಕ್ಷಣ ತಜ್ಞ ಹಾಗೂ ಮಾಜಿ ಸಂಸದ ಕೆ.ವೆಂಕಟಗಿರಿ ಗೌಡ ಅವರ ಜನ್ಮ ಶತಮಾನೋತ್ಸವ ವನ್ನು ಸೆ.17ರಂದು ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಡಾ.ಕೆ. ವೆಂಕಟಗಿರಿ ಗೌಡ ಜನ್ಮ ಶತಮಾನೋತ್ಸವ ಸಮಿತಿ ಅಧ್ಯಕ್ಷ ಕೆ. ರಂಗ ತಿಳಿಸಿದರು.

ವೆಂಕಟಗಿರಿ ಗೌಡ ಸಮಾಜ ಸೇವೆ ಮೂಲಕ ತಮ್ಮನ್ನು ಗುರುತಿಸಿಕೊಂಡ ನಿಸ್ವಾರ್ಥ ರಾಜಕಾರಣಿ. ಅರ್ಥಶಾಸ್ತ್ರದ ಕುರಿತು ಆಳವಾಗಿ ಅಧ್ಯಯನ ಮಾಡಿ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತಂದವರು ಎಂದು ಅವರು ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

ಆದಿಚುಂಚನಗಿರಿ ಸಂಸ್ಥಾನದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಸಾನಿಧ್ಯ ವಹಿಸುವರು. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಧ್ಯಕ್ಷತೆ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ವೆಂಕಟಗಿರಿ ಗೌಡ ಅವರ ಸ್ಮರಣಾರ್ಥ ರಾಷ್ಟ್ರೀಯ ಪ್ರಶಸ್ತಿಯನ್ನು ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಪಂಜಾಬ್ ಸಿಂಧ್ ಬ್ಯಾಂಕಿನ ಅಧ್ಯಕ್ಷ ಚರಣ್ ಸಿಂಗ್, ಸ್ಟೇಟ್ ಇನ್‌ಸ್ಟಿಟ್ಯೂಟ್ ಫಾರ್ ದಿ ಟ್ರಾನ್ಸ್‌ಫಾರ್ಮೇಷನ್ ಆಫ್ ಕರ್ನಾಟಕದ ಉಪಾಧ್ಯಕ್ಷ ಎಂ.ವಿ. ರಾಜೀವ ಗೌಡ, ಆರ್ಥಿಕ ತಜ್ಞ ಅಬ್ದುಲ್ ಅಜೀಜ್, ನಿವೃತ್ತ ಪ್ರಾಂಶುಪಾಲ ಕೆ.ಸಿ. ಬಸಪ್ಪ, ಒಕ್ಕಲಿಗ ಸಂಘದ ಮಾಜಿ ಉಪಾಧ್ಯಕ್ಷ ಕೆ. ಮಲ್ಲಯ್ಯ, ಕೃಷಿ ಮಾರುಕಟ್ಟೆ ನಿವೃತ್ತ ಜಂಟಿ ನಿರ್ದೇಶಕ ಎಸ್. ಪುಟ್ಟಸ್ವಾಮಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಹೇಳಿದರು.

'ಚೈತ್ರಾ ಕುಂದಾಪುರ ಹೆಣ್ಣಲ್ಲ, ವಿಷಜಂತು'

ಮಾಲೂರು (ಕೋಲಾರ): 'ಜಾತಿ ಜನಾಂಗಗಳ ಮಧ್ಯೆ ಜಗಳ ತಂದಿಡುವ ಹಿಂದುತ್ವದ ಕಾರ್ಯಕರ್ತೆ ಚೈತ್ರಾ ಕುಂದಾಪುರ ಹೆಣ್ಣಲ್ಲ, ವಿಷ ಜಂತು' ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಟೀಕಿಸಿದ್ದಾರೆ.

'ಪ್ರಚೋದನಕಾರಿಯಾಗಿ ಭಾಷಣ ಮಾಡುವ ಆಕೆ ಜೈಲಿನಲ್ಲಿ ಇರಲು ಲಾಯಕ್ಕು, ಸಮಾಜಕ್ಕೆ ಮೋಸ, ದ್ರೋಹ ಬಗೆಯುವವರು ಯಾವುದೇ ಪಕ್ಷದವರಾಗಿರಲಿ ಒಂದಲ್ಲ ಒಂದು ದಿನ ಜೈಲಿಗೆ ಹೋಗುತ್ತಾರೆ' ಎಂದು ಗುರುವಾರ ಸುದ್ದಿಗಾರರಿಗೆ ಇಲ್ಲಿ ತಿಳಿಸಿದರು.

ಸ್ನೇಹಿತರ ನಡುವೆ ಮಾರಾಮಾರಿ; ಚಾಕುವಿನಿಂದ ಇರಿದಿದ್ದ ರೌಡಿ ಬಂಧನ

ಪತ್ನಿ ಮೊಬೈಲ್ ನಂಬರ್ ಕೇಳಿದ್ದಕ್ಕೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯ ಮೊಬೈಲ್ ನಂಬರ್ ವಿಚಾರವಾಗಿ ಸ್ನೇಹಿತರ ನಡುವೆ ಮಾರಾಮಾರಿ ನಡೆದಿದ್ದು, ಈ ಪ್ರಕರಣ ಸಂಬಂಧ ರೌಡಿ ಕೆಂಪೇಗೌಡ ಅಲಿಯಾಸ್ ಕೆಂಪನನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹೊಯ್ಸಳ ನಗರದ ನಿವಾಸಿ ಕೆಂಪೇಗೌಡ ಹಾಗೂ ಈತನ ಸ್ನೇಹಿತ ರಮೇಶ್ ನಡುವೆ ಮಾರಾಮಾರಿ ನಡೆದಿದೆ. ರಮೇಶ್ ಅವರಿಗೆ ಆರೋಪಿ ಚಾಕುವಿನಿಂದ ಇರಿದಿದ್ದಾನೆ. ಕೃತ್ಯ ಎಸಗಿದ್ದ ಆರೋಪದಡಿ ಕೆಂಪೇಗೌಡನನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಂಪೇಗೌಡ ಹಾಗೂ ರಮೇಶ್, ಹಲವು ವರ್ಷಗಳ ಸ್ನೇಹಿತರು. ಆಗಾಗ ಭೇಟಿಯಾಗಿ ಒಟ್ಟಿಗೆ ಮದ್ಯ ಕುಡಿಯುತ್ತಿದ್ದರು. ಬುಧವಾರವೂ ಇಬ್ಬರೂ ಸೇರಿ ಬಾರ್‌ಗೆ ಹೋಗಿದ್ದರು. ಪಾನಮತ್ತರಾಗಿದ್ದ ರಮೇಶ್, 'ನಿನ್ನ ಪತ್ನಿಯ ಮೊಬೈಲ್ ನಂಬರ್ ಕೊಡು' ಎಂದು ಕೆಂಪೇಗೌಡ ಅವರನ್ನು ಕೇಳಿದ್ದರು. ಅದಕ್ಕೆ ಸಿಟ್ಟಾಗಿದ್ದ ಕೆಂಪೇಗೌಡ, 'ನನ್ನ ಪತ್ನಿ ನಂಬರ್ ಏಕೆ' ಎಂದು ಗದರಿಸಿದ್ದರು. ನಂತರ, ಮಾತಿಗೆ ಮಾತು ಬೆಳೆದು ಬಾರ್ ಎದುರು ಇಬ್ಬರೂ ಪರಸ್ಪರ ಹೊಡೆದಾಡಿಕೊಂಡಿದ್ದರು. ರಮೇಶ್ ಅವರನ್ನು ಥಳಿಸಿದ್ದ ಕೆಂಪೇಗೌಡ ಮನೆಗೆ ಹೋಗಿದ್ದರು' ಎಂದು ಮೂಲಗಳು ತಿಳಿಸಿವೆ.

ಮನೆ ಎದುರು ಗಲಾಟೆ: 'ರಮೇಶ್ ಹಾಗೂ ಅವರ ಸಂಬಂಧಿಕರು, ಆರೋಪಿ ಕೆಂಪೇಗೌಡ ಮನೆ ಎದುರು ರಾತ್ರಿ ಹೋಗಿದ್ದರು. ಹಲ್ಲೆಯನ್ನು ಪ್ರಶ್ನಿಸಿ ತರಾಟೆಗೆ ತೆಗೆದುಕೊಂಡಿದ್ದರು. ಇದೇ ಸಂದರ್ಭದಲ್ಲಿ ಆರೋಪಿ, ರಮೇಶ್ ಹಾಗೂ ಇಬ್ಬರು ಸಂಬಂಧಿಕರಿಗೆ ಚಾಕು ಇರಿದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪರಿಸ್ಥಿತಿ ವಿಕೋಪಕ್ಕೆ ಹೋಗಿದ್ದರಿಂದ ರಮೇಶ್ ಅವರ ಸಂಬಂಧಿಕರು, ಕೆಂಪೇಗೌಡ ಅವರ ಮನೆ ಮೇಲೆ ಕಲ್ಲು ತೂರಾಟ ನಡೆಸಿದ್ದರು. ಘಟನೆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಆರೋಪಿ ಕೆಂಪೇಗೌಡನನ್ನು ಬಂಧಿಸಿದ್ದರು. ಅಪರಾಧ ಹಿನ್ನೆಲೆಯುಳ್ಳ ಈತನ ಹೆಸರು ರೌಡಿ ಪಟ್ಟಿಯಲ್ಲಿತ್ತು' ಎಂದು ಮೂಲಗಳು ತಿಳಿಸಿವೆ.

'ಚಾಕು ಇರಿತದಿಂದ ಗಾಯಗೊಂಡಿರುವ ರಮೇಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ಬಗ್ಗೆ ಅವರ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ' ಎಂದು ಹೇಳಿವೆ.

ಆ್ಯಪ್ ಮೂಲಕ ಕ್ರಿಕೆಟ್ ಬೆಟ್ಟಿಂಗ್: ₹ 29.49 ಲಕ್ಷ ಜಪ್ತಿ

ಬೆಂಗಳೂರು: ಮೊಬೈಲ್ ಆ್ಯಪ್ ಮೂಲಕ ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದಡಿ ಆರು ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಅವರಿಂದ ₹ 29.49 ಲಕ್ಷ ನಗದು ಜಪ್ತಿ ಮಾಡಿದ್ದಾರೆ.

'ಸತೀಶ್, ಗಿರೀಶ್, ಎಂ.ಆರ್. ಮಂಜುನಾಥ್, ನವೀನ್‌ಕುಮಾರ್ ಸೇರಿ ಆರು ಮಂದಿ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಜಾಲತಾಣ ಹಾಗೂ ಮೊಬೈಲ್ ಆ್ಯಪ್‌ಗಳಲ್ಲಿ ಖಾತೆ ತೆರೆದಿದ್ದ ಆರೋಪಿಗಳು, ಪಂದ್ಯಗಳ ಸೋಲು–ಗೆಲುವು ಲೆಕ್ಕಾಚಾರದಲ್ಲಿ ಜನರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದರು. ಬೆಟ್ಟಿಂಗ್‌ನಲ್ಲಿ ಗೆದ್ದವರಿಗೆ ಹಣ ಹಿಂದಿರುಗಿಸುತ್ತಿದ್ದರು. ಆರು ಮಂದಿಯೂ ಹಲವು ತಿಂಗಳಿನಿಂದ ಬೆಟ್ಟಿಂಗ್ ನಡೆಸುತ್ತಿದ್ದ ಮಾಹಿತಿ ಇದೆ' ಎಂದು ತಿಳಿಸಿದರು.

'ಆರೋಪಿಗಳ ವಿರುದ್ಧ ಎಚ್‌ಎಸ್‌ಆರ್ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಮತ್ತಷ್ಟು ಮಂದಿ ಬೆಟ್ಟಿಂಗ್‌ನಲ್ಲಿ ತೊಡಗಿರುವ ಶಂಕೆ ಇದೆ' ಎಂದರು.

'ಸಚಿವರಿಂದಲೇ ದಲಿತರ ಜಮೀನು ಕಬಳಿಕೆ'

ಸಂತ್ರಸ್ತೆ ಮನೆಗೆ ಬಿಜೆಪಿ ನಿಯೋಗ ಭೇಟಿ; ಗೋವಿಂದ ಕಾರಜೋಳ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತರ ಆಸ್ತಿ ಕಬಳಿಕೆಗೆ ಸಚಿವ ಸುಧಾಕರ್ ಮುಂದಾಗಿರುವುದು ನಾಚಿಕೆಗೇಡಿನ ಸಂಗತಿ. ಸ್ವಾತಂತ್ರ್ಯ ಬಳಿಕ 75 ವರ್ಷಗಳ ಆಡಳಿತದಲ್ಲಿ ಇದೊಂದು ಕಪ್ಪುಚುಕ್ಕೆ. ತಾವು ದಲಿತರ ಪರ ಎನ್ನುವ ಸಿದ್ದರಾಮಯ್ಯ ತುಟಿಬಿಚ್ಚದೇ ಇರುವುದು ಅಚ್ಚರಿ ಉಂಟು ಮಾಡಿದೆ' ಎಂದು ಮಾಜಿ ಸಚಿವ ಗೋವಿಂದ ಕಾರಜೋಳ ಹರಿಹಾಯ್ದಿದ್ದಾರೆ.

ಯಲಹಂಕದಲ್ಲಿ ದಲಿತ ಮಹಿಳೆ ಮುನಿಯಮ್ಮ ಅವರನ್ನು ಭೇಟಿ ಮಾಡಿದ ಬಿಜೆಪಿ ನಿಯೋಗ. ಮಾಜಿ ಸಚಿವ ಗೋವಿಂದ ಕಾರಜೋಳ, ಎನ್‌.ರವಿಕುಮಾರ್, ಛಲವಾದಿ ನಾರಾಯಣಸ್ವಾಮಿ ಇದ್ದರು

ಯಲಹಂಕದಲ್ಲಿರುವ ಸಂತ್ರಸ್ತ ದಲಿತ ಮಹಿಳೆ ಮುನಿಯಮ್ಮ ಅವರ ಮನೆಗೆ ಗುರುವಾರ ಭೇಟಿ ನೀಡಿದ ಅವರು ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. 'ದಲಿತರ ಮೇಲೆ ದೌರ್ಜನ್ಯ ಮಾಡಿರುವ ಸಚಿವ ಸುಧಾಕರ್ ಅವರನ್ನು ವಜಾ ಮಾಡಬೇಕು' ಎಂದು ಆಗ್ರಹಿಸಿದರು.

'ಈ ಸರ್ಕಾರ ದಲಿತರನ್ನು ರಕ್ಷಿಸಲು ಬಂದಿದೆಯೇ ಅಥವಾ ದೌರ್ಜನ್ಯ ಮಾಡಿ ಆಸ್ತಿ ಕಬಳಿಸಲು ಬಂದಿದೆಯೇ' ಎಂದು ಪ್ರಶ್ನಿಸಿದ ಅವರು, 'ಗೂಂಡಾಗಳನ್ನು ಬಂಧಿಸಿ ಸಂತ್ರಸ್ತರಿಗೆ ರಕ್ಷಣೆ ಕೊಡಬೇಕು' ಎಂದು ಒತ್ತಾಯಿಸಿದರು.

ಬಿಜೆಪಿಯ ರಾಜ್ಯ ಪ್ರಧಾನಕಾರ್ಯದರ್ಶಿ ಎನ್.ರವಿಕುಮಾರ್ ಮಾತನಾಡಿ, 'ನೂರಾರು ಕೋಟಿ ಬೆಲೆಯ ಜಾಗವನ್ನು ಒತ್ತಡ ಹೇರಿ ಕನಿಷ್ಠ ಬೆಲೆಯಲ್ಲಿ ಕೊಂಡುಕೊಳ್ಳುವುದು ಯಾವ ನ್ಯಾಯ? ಮಾತೆತ್ತಿದರೆ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಎಲ್ಲಿದೆ ನ್ಯಾಯ? ಗೃಹ ಸಚಿವರು ಇಲ್ಲಿ ಭೇಟಿ ನೀಡಿ ದಲಿತ ಕುಟುಂಬಗಳಿಗೆ ನ್ಯಾಯ ಕೊಡಬೇಕು' ಎಂದು ಒತ್ತಾಯಿಸಿದರು.

ಬಿಜೆಪಿ ಎಸ್.ಸಿ.ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, '2019 ರಲ್ಲಿ ಸುಧಾಕರ್ ಇಲ್ಲಿಗೆ ಬಂದಿದ್ದರು. ಜಮೀನು ಅಭಿವೃದ್ಧಿಗೆ ಒಪ್ಪಿಗೆ ಪತ್ರ ಕೇಳಿದ್ದರು. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ₹5.70 ಕೋಟಿಗೆ ಜಮೀನು ಖರೀದಿಗೆ ಒಪ್ಪಂದ ಮಾಡಿಕೊಂಡಿದ್ದರು. ಬಳಿಕ ₹4.40 ಕೋಟಿ ನಗದು ಕೊಟ್ಟಿರುವುದಾಗಿ ಬರೆಸಿಕೊಂಡರು. ಇವರು ಕೊಟ್ಟ ₹1.40 ಕೋಟಿ ಚೆಕ್‌ಗಳು ಬೌನ್ಸ್ ಆದವು. ಅಷ್ಟೇ ಅಲ್ಲ, ಸುಧಾಕರ್ ಈ ಜಾಗದ ಮೇಲೆ ಅವರದೇ ಸೊಸೈಟಿಯಿಂದ ₹25 ಕೋಟಿ ಸಾಲ ಪಡೆದಿದ್ದಾರೆ. ಹಲವು ಪ್ರಕರಣಗಳಿದ್ದರೂ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ' ಎಂದರು.

ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಮಾತನಾಡಿ, 'ಜನರು ನಿಮಗೆ ಮತ ಕೊಟ್ಟು ಅಧಿಕಾರ ನೀಡಿದ್ದಾರೆ. ಪರಿಶಿಷ್ಟ ಜಾತಿ, ಪಂಗಡ, ದೀನದಲಿತರ ಪರ ಎನ್ನುವ ನೀವು, ಚುನಾವಣೆಯಲ್ಲಿ ಹೇಳಿದ್ದು ಸುಳ್ಳೇ' ಎಂದು ಪ್ರಶ್ನಿಸಿದರು.

ಮರು ತನಿಖೆಗೆ ಆಗ್ರಹ

ಬೆಂಗಳೂರು: ರಾಜ್ಯ ಸರ್ಕಾರವು ಉಜಿರೆಯ ವಿದ್ಯಾರ್ಥಿನಿ ಸೌಜನ್ಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣ ಕುರಿತು ಮರು ತನಿಖೆ ಮಾಡಬೇಕು ಎಂದು ಸಾಮಾಜಿಕ ಹೋರಾಟಗಾರ ಅಬ್ದುಲ್ ರಜಾಕ್ ಆಗ್ರಹಿಸಿದರು.

ಸೌಜನ್ಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣ ನಡೆದು ಹನ್ನೊಂದು ವರ್ಷಗಳಾಗಿವೆ. ಆದರೂ ಸತ್ಯ ಗೊತ್ತಾಗಿಲ್ಲ. ಆರೋಪಿ ಸ್ಥಾನದಲ್ಲಿದ್ದ ಸಂತೋಷ್ ರಾವ್ ಅವರನ್ನು ನಿರಪರಾಧಿ ಎಂದು ಸಿಬಿಐ ಕೋರ್ಟ್ ಬಿಡುಗಡೆಗೆ ತೀರ್ಪು ನೀಡಿದೆ. ಹಾಗಾಗಿ ಈ ಪ್ರಕರಣವನ್ನು ಮರು ತನಿಖೆ ಮಾಡಬೇಕು. ಕೃತ್ಯಕ್ಕೆ ಕಾರಣರಾದವರನ್ನು ಪತ್ತೆ ಹಚ್ಚಬೇಕು. ಇಂತಹ ಪ್ರಕರಣ ರಾಜ್ಯದಲ್ಲಿ ಮತ್ತೆ ಮರುಕಳಿಸದಂತೆ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಮರು ತನಿಖೆ ಮಾಡದಿದ್ದರೆ ರಾಜ್ಯದಾದ್ಯಂತ ತೀವ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸುದ್ದಿ 2 ನಿಮಿಷ

ವಸತಿ ಇಲಾಖೆ ಪರಿಸ್ಥಿತಿ ಬಿಚ್ಚಿಟ್ಟ ಸಚಿವ ಜಮೀರ್ ಅಹಮದ್

ಬೆಂಗಳೂರು: 'ವಸತಿ ಇಲಾಖೆ ವ್ಯಾಪ್ತಿಯ ಕೊಳೆಗೇರಿ ಅಭಿವೃದ್ಧಿ ಮಂಡಳಿ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದ ವಸತಿ ಯೋಜನೆಗಳಲ್ಲಿ ಫಲಾನುಭವಿಗಳ ವಂತಿಗೆ ಪಾವತಿ ಆಗುತ್ತಿಲ್ಲ. ಹೀಗಾಗಿ 2015 ರಿಂದ ಒಂದೇ ಒಂದು ಮನೆ ಕೊಡಲು ಸಾಧ್ಯವಾಗಿಲ್ಲ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಮುಖ್ಯಮಂತ್ರಿ ಸಮ್ಮುಖದಲ್ಲಿ ನೇರವಾಗಿಯೇ ಹೇಳಿದರು.

ಬುಧವಾರ ನಡೆದ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಸಿಇಒಗಳ ಸಭೆಯಲ್ಲಿ ವಸತಿ ಇಲಾಖೆ ಯೋಜನೆ ಬಗ್ಗೆ ಪ್ರಸ್ತಾಪಿಸಿ, 'ಅತ್ತ ಫಲಾನುಭವಿಗಳು ವಂತಿಗೆ ಪಾವತಿಸುತ್ತಿಲ್ಲ. ಇತ್ತ ಯೋಜನೆ ಪೂರ್ಣಗೊಳ್ಳುತ್ತಿಲ್ಲ ಎಂಬಂತಾಗಿದೆ' ಎಂದರು.

'ಕೊಳೆಗೇರಿ ಅಭಿವೃದ್ಧಿ ಮಂಡಳಿಯಲ್ಲಿ 2015 ರಿಂದ 2023 ರವರೆಗೆ 1.80 ಲಕ್ಷ ಮನೆ ನಿರ್ಮಾಣಕ್ಕೆ ಅನುಮೋದನೆ ದೊರೆತಿದೆ. ಪ್ರತಿ ಮನೆಗೆ 7.50 ಲಕ್ಷ ವೆಚ್ಚವಾಗುತ್ತಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಬ್ಸಿಡಿ ₹3.50 ಲಕ್ಷ ಮೊತ್ತದ ಕೆಲಸ ಆಗಿರುವುದು ಹೊರತುಪಡಿಸಿದರೆ ಫಲಾನುಭವಿಗಳ ವಂತಿಗೆ ಪಾವತಿ ಆಗದೆ ಮನೆಗಳು ಅರ್ಧದಲ್ಲೇ ಸ್ಥಗಿತಗೊಂಡಿವೆ. ₹6690 ಕೋಟಿ ಫಲಾನುಭವಿಗಳ ವಂತಿಗೆ ಬರಬೇಕಿದ್ದು ₹310 ಕೋಟಿ ಮಾತ್ರ ಬಂದಿದೆ' ಎಂದು ವಿವರಣೆ ನೀಡಿದರು.

ಕೆಎಸ್‌ಆರ್‌ಟಿಸಿಗೆ ರಾಷ್ಟ್ರೀಯ ಪ್ರಶಸ್ತಿ

ಬೆಂಗಳೂರು: ವಿಶ್ವ ತಯಾರಿಕೆದಾರರ ಕಾಂಗ್ರೆಸ್ (ವರ್ಲ್ಡ್ ಮ್ಯಾನುಫ್ಯಾಕ್ಚರಿಂಗ್ ಕಾಂಗ್ರೆಸ್) ಸ್ಥಾಪಿಸಿರುವ 10ನೇ ಆವೃತ್ತಿಯ ರಾಷ್ಟ್ರೀಯ ನಾಯಕತ್ವ ಹಾಗೂ ವಿದ್ಯುತ್ ವಾಹನಗಳ ಉಪಕ್ರಮಗಳ ಪ್ರಶಸ್ತಿಯನ್ನು ಕೆಎಸ್‌ಆರ್‌ಟಿಸಿ ಪಡೆದಿದೆ.

ಅಂತರನಗರ ಎಲೆಕ್ಟ್ರಿಕ್ ಬಸ್ ಉಪಕ್ರಮಕ್ಕಾಗಿ ಈ ಪ್ರಶಸ್ತಿ ಲಭಿಸಿದೆ. ಬೆಂಗಳೂರಿನ ತಾಜ್ ಹೋಟೆಲ್‌ನಲ್ಲಿ ನಡೆದ ಸಮಾರಂಭದಲ್ಲಿ ಗುರ್ಗಾಂವ್ ಅಡ್ವಾಂಟೇಜ್ ಕ್ಲಬ್ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ ಸ್ಮಿತಿ ಭಟ್ ದಿಯೋರ ಪ್ರಶಸ್ತಿ ಪ್ರದಾನ ಮಾಡಿದರು. ನಿಗಮದ ಮುಖ್ಯ ತಾಂತ್ರಿಕ ಶಿಲ್ಪಿ ಎನ್.ಕೆ. ಬಸವರಾಜು, ಮುಖ್ಯ ಸಂಚಾರ ವ್ಯವಸ್ಥಾಪಕ ಜಿ. ಅಂತೋಣಿ ಜಾರ್ಜ್, ಮುಖ್ಯ ಕಾಮಗಾರಿ ಎಂಜಿನಿಯರ್ ಶಿವಕುಮಾರ್ ಪ್ರಶಸ್ತಿ ಸ್ವೀಕರಿಸಿದರು.

'ಗುತ್ತಿಗೆದಾರರಿಗೆ 5 ವರ್ಷ ರಸ್ತೆ ನಿರ್ವಹಣೆ ಹೊಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ರಸ್ತೆಗಳನ್ನು ನಿರ್ಮಿಸಿದ ಗುತ್ತಿಗೆದಾರರೇ ಐದು ವರ್ಷಗಳವರೆಗೆ ನಿರ್ವಹಣೆ ಮಾಡಬೇಕು ಎಂಬ ಹೊಸ ನಿಯಮವನ್ನು ಜಾರಿಗೆ ತರಲಾಗುವುದು' ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು 'ಇಲ್ಲಿಯವರೆಗೆ ಈ ನಿಯಮ ಇರಲಿಲ್ಲ. ನಿರ್ವಹಣೆ ಹೊಣೆಯನ್ನು ಗುತ್ತಿಗೆದಾರರಿಗೇ ನೀಡಲಾಗುವುದು. ಈ ಉದ್ದೇಶಕ್ಕೆ ಇನ್ನು ಟೆಂಡರ್ ಆಹ್ವಾನಿಸುವುದಿಲ್ಲ' ಎಂದರು.

'ಲೋಕೋಪಯೋಗಿ ಇಲಾಖೆಯಲ್ಲಿ ಸುಧಾರಣೆ ತರಲು ಹಲವು ಕ್ರಮಗಳನ್ನು ಕೈಗೊಂಡಿದ್ದೇವೆ. ತಂತ್ರಾಂಶ ಸಿದ್ಧಪಡಿಸುತ್ತಿದ್ದು, ಪ್ರಾಥಮಿಕ ಹಂತದಲ್ಲಿದೆ. ಇದು ಅನುಷ್ಠಾನಕ್ಕೆ ಬಂದರೆ ಹೆಚ್ಚು ಅನುಕೂಲ ಆಗಲಿದೆ' ಎಂದು ಸಚಿವರು ತಿಳಿಸಿದ್ದಾರೆ. ಆದರೆ, ಇದು ಹೇಗೆ ಕಾರ್ಯನಿರ್ವಹಿಸಲಿದೆ. ಏನೆಲ್ಲ ಪ್ರಯೋಜನ ಆಗಲಿದೆ ಎಂಬ ಕುರಿತು ಯಾವುದೇ ಮಾಹಿತಿ ನೀಡಲಿಲ್ಲ.

ರನ್‌ವೇನಿಂದ ಜಾರಿದ ವಿಮಾನ: 8 ಮಂದಿಗೆ ಗಾಯ

ಮುಂಬೈ (ಪಿಟಿಐ): ಇಲ್ಲಿನ ವಿಮಾನ ನಿಲ್ದಾಣದಲ್ಲಿ ಇಳಿಯುತ್ತಿದ್ದ ವೇಳೆ ಖಾಸಗಿ ವಿಮಾನ ರನ್‌ವೇನಿಂದ ಜಾರಿ, ಅದರಲ್ಲಿದ್ದ ಎಂಟು ಮಂದಿ ಗಾಯಗೊಂಡಿದ್ದಾರೆ.

ಭಾರಿ ಮಳೆಯ ಪರಿಣಾಮವಾಗಿ ಕಡಿಮೆ ಗೋಚರತೆ ಇದ್ದುದರಿಂದ ವಿಮಾನವು ರನ್‌ವೇನಿಂದ ಜಾರಿದೆ ಮತ್ತು ಹಾನಿಗೀಡಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ವಿ.ಎಸ್.ಆರ್. ವೆಂಚರ್ಸ್ ಸಂಸ್ಥೆಗೆ ಸೇರಿದ ವಿಮಾನವು ವಿಶಾಖ ಪಟ್ಟಣಂನಿಂದ ಮುಂಬೈಗೆ ಆಗಮಿಸಿತ್ತು. ಈ ವಿಮಾನದಲ್ಲಿ ಆರು ಮಂದಿ ಪ್ರಯಾಣಿಕರು ಮತ್ತು ಇಬ್ಬರು ಸಿಬ್ಬಂದಿ ಇದ್ದರು ಎಂದು ವಿವರಿಸಿದ್ದಾರೆ.

ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ್ದು, ಇವರಲ್ಲಿ ಡೆನ್ಮಾರ್ಕ್ ಪ್ರಜೆಯೂ ಸೇರಿದ್ದಾರೆ.

ವಿಮಾನವು ರನ್‌ವೇನಿಂದ ಜಾರಿದ ಬಳಿಕ ಅಲ್ಪ ಕಾಲಕ್ಕೆ ರನ್‌ವೇಗಳನ್ನು ಮುಚ್ಚಲಾಗಿತ್ತು. 39 ವಿಮಾನಗಳನ್ನು ಬೇರೆ ವಿಮಾನ ನಿಲ್ದಾಣಕ್ಕೆ ಕಳುಹಿಸಲಾಯಿತು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ವಿವರಿಸಿದ್ದಾರೆ.

ಮುಂಬೈ ವಿಮಾನ ನಿಲ್ದಾಣದ ರನ್‌ವೇನಿಂದ ಜಾರಿದ ವಿಮಾನ ಪಿಟಿಐ ಚಿತ್ರ

ಜಮೀರ್ ಅನರ್ಹತೆ ಅರ್ಜಿ: ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಶಾಸಕರಾಗಿ ಆಯ್ಕೆಯಾಗಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ತಕರಾರು ಅರ್ಜಿಯ ವಿಚಾರಣೆಯನ್ನು ಅಕ್ಟೋಬರ್ 5ಕ್ಕೆ ಹೈಕೋರ್ಟ್ ಮುಂದೂಡಿದೆ.

'ಉಚಿತ ಗ್ಯಾರಂಟಿಗಳ ಆಮಿಷವೊಡ್ಡುವ ಮೂಲಕ ಜಮೀರ್ ಅವರು ಚುನಾವಣಾ ಅಕ್ರಮ ಎಸಗಿದ್ದಾರೆ. ಅವರನ್ನು ಅನರ್ಹಗೊಳಿಸಬೇಕು ಎಂದು ಚಾಮರಾಜಪೇಟೆ ನಿವಾಸಿ ಶಶಾಂಕ್ ಜೆ. ಶ್ರೀಧರ್ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಗುರುವಾರ ವಿಚಾರಣೆಗೆ ಬಂದಿತ್ತು.

ವಾದ ಆಲಿಸಿದ ನ್ಯಾಯಪೀಠ, ಚುನಾವಣಾ ತಕರಾರು ಅರ್ಜಿಯ ಸಂಪೂರ್ಣ ದಾಖಲೆಗಳ ಪ್ರತಿಗಳನ್ನು ಪ್ರತಿವಾದಿಗಳ ಪರ ವಕೀಲರಿಗೆ ನೀಡಲು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿತು. ಇದೇ ವೇಳೆ ಕೆಲವೊಂದು ಮಾಹಿತಿಗಳನ್ನು ಸಂಗ್ರಹಿಸಬೇಕಾಗಿದ್ದು, ಅದಕ್ಕೆ ಸಮಯ ಬೇಕು ಎಂದು ಜಮೀರ್ ಪರ ವಕೀಲರು ಕೋರಿದರು. ವಿಚಾರಣೆಯನ್ನು ಮುಂದೂಡಿದ ನ್ಯಾಯಪೀಠ, ಮುಂದಿನ ವಿಚಾರಣಾ ದಿನಾಂಕದೊಳಗೆ ಲಿಖಿತ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಪ್ರತಿವಾದಿಗಳ ಪರ ವಕೀಲರಿಗೆ ಸೂಚಿಸಿತು.

ಪಕ್ಷದ ಪ್ರಣಾಳಿಕೆಯಲ್ಲಿನ ಐದು ಗ್ಯಾರಂಟಿ ಯೋಜನೆಗಳ ಮೂಲಕ ಮತದಾರರಿಗೆ ಆಮಿಷವೊಡ್ಡಿ ಕಾಂಗ್ರೆಸ್ ಶಾಸಕರು ಆಯ್ಕೆಯಾಗಿದ್ದಾರೆ. ಅದೇ ರೀತಿ ಜಮೀರ್ ಅಹಮದ್ ಕೂಡಾ ಆಯ್ಕೆಯಾಗಿದ್ದಾರೆ. ಇದು ಚುನಾವಣಾ ಅಕ್ರಮಕ್ಕೆ ಸಮಾನಾಗಿದೆ. ಆದ್ದರಿಂದ, ಅವರ ಆಯ್ಕೆ ಅಸಿಂಧುಗೊಳಿಸಬೇಕು ಎಂಬುದು ಅರ್ಜಿದಾರರ ವಾದ. ಅರ್ಜಿದಾರರ ಪರ ಪ್ರಮೀಳಾ ನೇಸರ್ಗಿ ವಾದ ಮಂಡಿಸಿದರು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2023–24ನೇ ಸಾಲಿನ 'ಕನ್ನಡ ಪ್ರವೇಶ', 'ಕಾವ', 'ಜಾಣ', 'ರತ್ನ' ಹಾಗೂ 'ಶಾಸನ ಶಾಸ್ತ್ರ' ಡಿಪ್ಲೊಮೊ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ 30ರವರೆಗೆ ವಿಸ್ತರಿಸಿದೆ.

2023ರ ಡಿಸೆಂಬರ್ ಕೊನೆ ವಾರದಲ್ಲಿ ಪರೀಕ್ಷೆ ನಡೆಯಲಿವೆ. ₹ 50 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಪರಿಷತ್ತಿನ ಮಾರಾಟ ಮಳಿಗೆಯಲ್ಲಿ ₹ 25 ಪಾವತಿಸಿ, ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿ ನಮೂನೆ ಪಡೆಯಬಹುದು. ಪರಿಷತ್ತಿನ ಹೆಸರಿಗೆ ₹ 30 ಮನಿಯಾರ್ಡರ್ ಮಾಡಿದರೆ ಅರ್ಜಿ ನಮೂನೆಯನ್ನು ಅಂಚೆ ಮೂಲಕ ಕಳುಹಿಸಲಾಗುತ್ತದೆ.

ಪರೀಕ್ಷಾ ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕವೂ ಪಡೆದುಕೊಳ್ಳಬಹುದು. ಪರೀಕ್ಷಾ ಶುಲ್ಕದೊಂದಿಗೆ ₹ 25 ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 080 26623584 ಅಥವಾ 26612991

ದಸರಾ: ಕಲಾ ತಂಡಗಳಿಗೆ ಆಹ್ವಾನ

ಮೈಸೂರು: 2023ನೇ ಸಾಲಿನ ದಸರಾ ಮಹೋತ್ಸವದ ಅಂಗವಾಗಿ ಅ.24ರಂದು ನಡೆಯುವ ಜಂಬೂ ಸವಾರಿಯಲ್ಲಿ ಭಾಗವಹಿಸಲು ಜಾನಪದ ಕಲಾತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ತಂಡದ ಭಾವಚಿತ್ರ, ಸದಸ್ಯರ ವಿವರ, ಅಂಚೆ ವಿಳಾಸ ಹಾಗೂ ಮುಖ್ಯಸ್ಥರ ಸಂಪರ್ಕ ಸಂಖ್ಯೆಯ ಮಾಹಿತಿಯುಳ್ಳ ಅರ್ಜಿಯನ್ನು ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಸೆ.30ರ ಒಳಗಾಗಿ ಸಲ್ಲಿಸಬೇಕು.

ಅಕ್ರಮವಾಗಿ ಬಂದೂಕು ಖರೀದಿ ಬೈಡನ್ ಪುತ್ರನ ವಿರುದ್ಧ ದೋಷಾರೋಪ

ವಾಷಿಂಗ್ಟನ್ (ಎಎಫ್‌ಪಿ): ಐದು ವರ್ಷದ ಹಿಂದೆ ಅಕ್ರಮವಾಗಿ ಬಂದೂಕು ಖರೀದಿಸಿದ್ದ ಪ್ರಕರಣದಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಪುತ್ರ ಹಂಟರ್ ಬೈಡನ್ ವಿರುದ್ಧ ಗುರುವಾರ ದೋಷಾರೋಪ ಹೊರಿಸಲಾಗಿದೆ.



ಹಂಟರ್

ಡೆಲವೇರ್‌ನಲ್ಲಿ ಕೋಲ್ಟ್ ರಿವಾಲ್ವರ್ ಖರೀದಿಸಿದ್ದ ಸಮಯದಲ್ಲಿ ತಾನು ಡ್ರಗ್ಸ್ ಬಳಸುತ್ತಿರಲಿಲ್ಲ ಎಂದು ಹಂಟರ್ ಸುಳ್ಳು ಹೇಳಿಕೆ ನೀಡಿದ್ದರು ಎಂದು ಎರಡನೇ ದೋಷಾರೋಪ ಸಲ್ಲಿಸಲಾಗಿದೆ.

ಸುಳ್ಳು ಹೇಳಿಕೆಗಳ ಆಧಾರದಲ್ಲಿ ಅಕ್ರಮ ಬಂದೂಕು ಹೊಂದಿದ್ದರು ಎಂಬ ಮೂರನೇ ದೋಷಾರೋಪವು ಹಂಟರ್ ಮೇಲಿದೆ. ಇದು ಅವರನ್ನು 10 ವರ್ಷಗಳ ಜೈಲು ಶಿಕ್ಷೆಗೆ ಒಳಪಡಿಸಬಹುದು ಎಂದು ಮೂಲಗಳು ತಿಳಿಸಿವೆ.

2018ರಿಂದ ಹಂಟರ್ ಬೈಡನ್ ಪ್ರಕರಣದ ತನಿಖೆ ನಡೆಸುತ್ತಿರುವ ನ್ಯಾಯಾಂಗ ಇಲಾಖೆಯ ವಿಶೇಷ ವಕೀಲ ಡೇವಿಡ್ ವೈಸ್ ದೋಷಾರೋಪ ಸಲ್ಲಿಸಿದ್ದಾರೆ.

ಬಿಜೆಪಿ ಅಂಗಳದಲ್ಲಿ ಮೈತ್ರಿ ಚೆಂಡು

ಟಿಡಿಪಿ ಜೊತೆ ಮೈತ್ರಿ ಘೋಷಿಸಿದ ಪವನ್‌ಕಲ್ಯಾಣ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಮುಂದಿನ ವರ್ಷ ಆಂಧ್ರಪ್ರದೇಶ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ತೆಲುಗು ದೇಶಂ ಪಾರ್ಟಿ (ಟಿಡಿಪಿ) ಜೊತೆ ಮೈತ್ರಿ ಮಾಡಿಕೊಳ್ಳುವುದಾಗಿ ಜನ ಸೇನಾ ಪಕ್ಷದ ನಾಯಕ ಹಾಗೂ ಚಿತ್ರನಟ ಪವನ್ ಕಲ್ಯಾಣ್ ಗುರುವಾರ ಘೋಷಿಸಿದ್ದಾರೆ.

ಟಿಡಿಪಿ, ಬಿಜೆಪಿ ಹಾಗೂ ಜನ ಸೇನಾ ಒಳಗೊಂಡ 'ಮಹಾ ಮೈತ್ರಿ' ರಚಿಸಿ, ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ವಿರುದ್ಧ ಹೋರಾಡಬೇಕು ಎಂದು ಕೆಲ ವರ್ಷಗಳಿಂದ ಪವನ್ ಕಲ್ಯಾಣ್ ಹೇಳುತ್ತಲೇ ಇದ್ದರು. 'ಮಹಾಮೈತ್ರಿ' ಮಾಡಿಕೊಳ್ಳುವ ಕುರಿತ ಪವನ್ ಕಲ್ಯಾಣ್ ಪ್ರಸ್ತಾವಕ್ಕೆ ಈ ಹಿಂದೆ ಬಿಜೆಪಿ ಉತ್ಸಾಹ ತೋರಿರಲಿಲ್ಲ. ಈಗ, ಬಿಜೆಪಿಯ ಪ್ರತಿಕ್ರಿಯೆಗೆ ಕಾಯದೇ, ನಟ ಪವನ್ ಕಲ್ಯಾಣ್ ಅವರು ತಮ್ಮ ಚುನಾವಣಾ ನಡೆಯನ್ನು ಪ್ರಕಟಿಸಿದ್ದಾರೆ. ಚೆಂಡು ಈಗ ಬಿಜೆಪಿ ಅಂಗಳದಲ್ಲಿ ಬಿದ್ದಿದ್ದು, ಕುತೂಹಲ ಕೆರಳಿಸಿದೆ.

ರಾಜಮಹೇಂದ್ರವರಂ ಕೇಂದ್ರ ಕಾರಾಗೃಹದಲ್ಲಿರುವ ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರನ್ನು ಭೇಟಿ ಮಾಡಿ ಹೊರಬಂದ ಜನ ಸೇನಾ ಮುಖ್ಯಸ್ಥ ಹಾಗೂ ನಟ ಪವನ್ ಕಲ್ಯಾಣ್. ಟಿಡಿಪಿ ಶಾಸಕ ಹಾಗೂ ಚಂದ್ರಬಾಬು ನಾಯ್ಡು ಪುತ್ರ ನಾರಾ ಲೋಕೇಶ್, ಚಿತ್ರನಟ ನಂದಮೂರಿ ಬಾಲಕೃಷ್ಣ ಇದ್ದಾರೆ —ಪಿಟಿಐ ಚಿತ್ರ

ಭ್ರಷ್ಟಾಚಾರ ಆರೋಪದಡಿ ಬಂಧನಕ್ಕೆ ಒಳಗಾಗಿರುವ ಟಿಡಿಪಿ ಮುಖ್ಯಸ್ಥ ಎನ್.ಚಂದ್ರಬಾಬು ನಾಯ್ಡು ಅವರನ್ನು ಸದ್ಯ ರಾಜಮಹೇಂದ್ರವರಂ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದೆ. ಜೈಲಿನಲ್ಲಿರುವ ಚಂದ್ರಬಾಬು ನಾಯ್ಡು ಅವರನ್ನು ಭೇಟಿ ಮಾಡಿದ ನಂತರ, ಪವನ್‌ಕಲ್ಯಾಣ್ ತಮ್ಮ ಈ ನಿರ್ಧಾರವನ್ನು ಪ್ರಕಟಿಸಿದ್ದಾರೆ.

ಚಂದ್ರಬಾಬು ನಾಯ್ಡು ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ, ನಾಯ್ಡು ಪುತ್ರ ಹಾಗೂ ಹಿಂದೂಪುರ ಶಾಸಕ ನಾರಾ ಲೋಕೇಶ್, ಚಿತ್ರನಟ ನಂದಮೂರಿ ಬಾಲಕೃಷ್ಣ ಇದ್ದರು.

ಭೇಟಿ ನಂತರ ಸುದ್ದಿಗಾರ ರೊಂದಿಗೆ ಮಾತನಾಡಿದ ಪವನ್ ಕಲ್ಯಾಣ್, 'ಚುನಾವಣೆ ಸಮೀಪಿಸುತ್ತಿದ್ದು, ಬಿಜೆಪಿ ನಮ್ಮ ಮೈತ್ರಿಯ ಭಾಗವಾಗಲಿದೆ ಎಂಬ ಭರವಸೆ ಇದೆ' ಎಂದು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commercial Building

Chickpet

SALE G+1, East South Corner Semi-Commercial 1000sft on Akkamahadevi Road, Sultanpete Area, Verna Developers, 9353128035/ 9916310226 Brokers Excuse.

Mysore Road

MYSORE ROAD Cross Near Chamrajpet Anantharamaiah Compound G +3 (Built-up area 5600 sqft) Commercial New Building with lift available for Sale. Contact: 9845173914.

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call: 9663001940/ 9845358544.

Commerical

Tumkur Road

PRIME COMMERCIAL property in TUDA Layout-Tumkur 33,000/- sq.ft, 80ft. Road 110ft. frontage. 9972098488.

Flat

Rajajinagar

DNR HIGHLINE @ Okalipuram near LULU Mall Rajajinagar 3 & 4 Bedroom FLATS with 7 Star Luxurious Amenities for Sale. for details Contact: 9844027560.

Sanjaynagar

SANJAYNAGAR KALPANA Chawla Road 3-BHK Flat 1770sqft North Facing Semi Furnished Vastu Compliance, Rs.1.85Cr, Owner:9448787599

REAL ESTATE BUYING

Joint Development

General

WANTED PURCHASE or JD Properties at Jayanagar/ Basavangudi/ JP Nagar/ Chamrajpet/ CBD Area. Verna Developers, MG Road, Bangalore 9916310226/ 9353128035 (Brokers Excuse

Sites

Tumkur Road

WANTED SITE MEI Layout M.S Ramaiah Enclave, Soundarya Layout, Hesaraghatta Main Road. 9880779326. Brokers Excuse.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

RECRUITING FOR Supermarket in Electronic City Phase 1- Shop Supervisor, Billing Clerk and Store Clerk, Send your CV to grandmartbangalore@gmail.com

Marketing & Sales

WANTED, A Leading Recovery Agent in Bengaluru, Requires Field Executive. Contact: 9986549111

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

PERSONAL

Change of Name

I, SHRIYA, Residing at #55, 1st main, 1st cross, HMT Layout Nagasandra Post Bangalore-73 have changed my name as RAJASHRI. K.S., vide affidavit dated 13/9/2023 before Notary Kodi Nagappaya, Bangalore

I JOWHAR Pasha residing at No.557, 19th cross, 1st block, Near V Care Hospital, R.T.Nagar, Bangalore-32, have changed my name to Jowhar Basha vide affidavit dated 08-08-2023, Before Notary Leela, Bangalore.

BARANDA SHILPA BEHAN VINAYAK KUMAR, Wife/o, 14865724H, SEP/MT, BARANDA VINAYAK KUMAR RAJENDRAKUMAR, Vill-Jayala, Takatuka, Bhiloda, Sabarkantha, Gujarat changed name BARANDA SHILPA BEHAN VINAYAK KUMAR to BARANDA SILPABAHEN VINAYAKKUMAR, 13/09/2023, Notary K.V. Mani, Bangalore

CHANGE OF NAME
I, ABISHEK S.K., R/at.# 68, 5th Cross, Meenakshi Colony, Kodipalya, Kengeri, Banglore-60, have changed ABISHEK SHIVAKUMAR my name to vide affidavit dated. 09/09/2023 before Notary B.Chitra Bangalore. Henceforth I shall be called ABISHEK SHIVAKUMAR only

I NANDA Kumar residing at No.5, N.P.S Square, Sri Sai layout, Near milk dairy suggata village, Hunsamaranahalli, Bangalore-562157, have changed my name to Nanda Kumar.S. Vide affidavit dated 12-09-2023 Before Notary Leela Bangalore.

CHANGE OF NAME
I, RIAZ AHMED S M Residing at #132, 1s Cross, Kanaka Nagar, RT Nagar P.O, Bengaluru-32 have changed my name to RIAZ AHAMED S M vide affidavit dated 14.09.2023 before notary N. Thulasi, Bangalore. Henceforth I shall be called RIAZ AHAMED S M only.

RAMRAJ SINGH, 14843028L, L/NK, Vill - Nagla Kumar Prasad Etah Road, Shikohabad, Firozabad, Uttar Pradesh changed Son's name ADITYA to ADITYA SINGH, 13/09/2023, Notary K.V. Mani, Bangalore

CHANGE OF NAME
I, SHIVASHANKAR CHALAWADI/ SHIVASHANKAR DYAMANNA CHALAWADI #285, 1st B Cross, Bhuvaneshwari Nagar, T. Dasarahalli, Bangalore-57 have changed my name to SHIVASHANKAR D.C. vide affidavit dated 14.09.2023 before notary A. Idinabba, Bangalore. Henceforth I shall be called SHIVASHANKAR D.C. only

I SOWMYA M shet After marriage I Have changed my Name Sowmya M shet To Sowmya Nayak W/o Shankar Nayak Shorapur Dist Yadgir For all purposes

BINOD KUMAR THAKUR, JC681777L, HONY CAPT, Vill- Barahara, Bhore, Hathua, Gopalganj, Bihar changed Son's name SANJIV KUMAR THAKUR to SANJEEV KUMAR THAKUR, 13/09/2023, Notary K.V. Mani, Bangalore

Lost

DOCUMENT LOST
I, V. Ramaiah lost my original sale deed document in mayo hall court complex, MG Road Bangalore. Document Original sale deed document dated 24-10-1975 Regd as No. 2256 of 1975-76 consisting of two pages. If any finder please contact Mob 9141155051

DH DECCAN HERALD ಪ್ರಜಾವಾಣಿ
Classifieds
More value, more impact
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com BOOK NOW
Book your ad with us now!
For more details contact:
+91 9731810277 | +91 9886213331
+91 9845114560 | 080- 45557163/164
+91 9901641752 | +91 9900428036

ಮಾಧ್ಯಮಗಳಿಗೆ ಆತಂಕ ಬೇಕಿಲ್ಲ, ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ಇಲ್ಲ: ಪ್ರಿಯಾಂಕ್ ಖರ್ಗೆ ಭರವಸೆ

‘ಸುಳ್ಳು ಸುದ್ದಿ’ ಕಡಿವಾಣಕ್ಕೆ ಹೊಸ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರ, ಸರ್ಕಾರಿ ಸಂಸ್ಥೆಗಳು, ಸರ್ಕಾರದ ಕಾರ್ಯಕ್ರಮಗಳ ವಿರುದ್ಧ ಮತ್ತು ಕೋಮು ಸೌಹಾರ್ದ ಕದಡುವ ಉದ್ದೇಶದ ಸುಳ್ಳು ಸುದ್ದಿಗಳು, ಅಪಪ್ರಚಾರ ಮಾಡುವ ಸುದ್ದಿಗಳು ಹಾಗೂ ತಪ್ಪು ಮಾಹಿತಿಗಳನ್ನು ಸಾಮಾಜಿಕ ಜಾಲತಾಣಗಳು ಮತ್ತು ಮಾಧ್ಯಮಗಳಲ್ಲಿ ಪ್ರಸಾರ ಮಾಡುವುದಕ್ಕೆ ಕಡಿವಾಣ ಹಾಕುವ ಹಾಗೂ ಈಗಿರುವ ಕಾನೂನು ಬಳಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಲು ಸರ್ಕಾರ ಸಿದ್ಧತೆ ನಡೆಸಿದೆ.

ಈ ಕುರಿತು ‘ಫ್ಯಾಕ್ಟ್‌ಚೆಕ್’ ಮಾಡಲು ಮತ್ತು ಸುಳ್ಳು ಸುದ್ದಿ ಹಾಗೂ ಮಾಹಿತಿ ಹರಡುವವರ ಮೇಲೆ ನಿಗಾ ಇಟ್ಟು, ಅಂತಹ ಮಾಹಿತಿಗಳು ಸುಳ್ಳು ಎಂದು ಸಾರ್ವಜನಿಕರಿಗೆ ತಿಳಿಸಲು ಸರ್ಕಾರದಿಂದಲೇ ವ್ಯವಸ್ಥೆಯನ್ನು ರೂಪಿಸಲಾಗುವುದು. ಇದರ ಚೌಕಟ್ಟು (ಫ್ರೇಮ್‌ವರ್ಕ್) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಪ್ಪಿಗೆ ನೀಡಿದ್ದು, ಅದನ್ನು ಶೀಘ್ರವೇ ಜಾರಿ ಮಾಡಲಾಗುವುದು ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

ಕೆಲವು ಪಕ್ಷಗಳು ಮತ್ತು ಸಂಘಟನೆಗಳಿಗೆ ಸೇರಿದವರು ಅಪಪ್ರಚಾರ ಮತ್ತು ಸುಳ್ಳು ಸುದ್ದಿಗಳನ್ನು ಸಮಾಜದಲ್ಲಿ ಇತ್ತೀಚೆಗೆ ಹರಡುತ್ತಿದ್ದಾರೆ. ಇದರಿಂದ ಜನರಲ್ಲಿ ಗೊಂದಲ ಉಂಟಾಗುತ್ತಿದೆ. ಸತ್ಯವನ್ನು ತಿರುಚಿ ಹೇಳಿಕೆಗಳನ್ನು ನೀಡಲಾಗುತ್ತಿದೆ. ಶಕ್ತಿ ಯೋಜನೆಯೂ ಸೇರಿ ಸರ್ಕಾರದ ಹಲವು ಕಾರ್ಯಕ್ರಮಗಳ ಬಗ್ಗೆ ತಪ್ಪು ಮಾಹಿತಿಗಳನ್ನು ಹಂಚಲಾಯಿತು. ಸುಳ್ಳುಸುದ್ದಿಗಳಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಬಂದಿದೆ. ಸರಿಯಾದ ಮಾಹಿತಿ ಯಾವುದು, ತಪ್ಪು ಮಾಹಿತಿ ಯಾವುದು ಎಂಬುದನ್ನು ಜನರಿಗೆ ತಿಳಿಸುವ ಜವಾಬ್ದಾರಿಯೂ ಸರ್ಕಾರಕ್ಕಿದೆ ಎಂದು ಪ್ರಿಯಾಂಕ್ ಅವರು ತಿಳಿಸಿದರು.

ಬಿಜೆಪಿ ಕೇಂದ್ರ ಕಚೇರಿಗಳಲ್ಲಿರುವ ಸುಳ್ಳು ಸುದ್ದಿಗಳ ಫ್ಯಾಕ್ಟರಿಗಳನ್ನು ಮುಚ್ಚಿದರೆ ಸಮಸ್ಯೆಗಳು ಮುಗಿಯುತ್ತವೆ. ಇದು ಜಾರಿಯಾದರೆ ಬಿಜೆಪಿ ಅಧಿಕಾರಕ್ಕೆ ಬರುವುದಿಲ್ಲ

ಪ್ರಿಯಾಂಕ್ ಖರ್ಗೆ
ಐಟಿ-ಬಿಟಿ ಸಚಿವ

‘ಇದಕ್ಕಾಗಿ ಹೊಸ ಕಾನೂನು ಜಾರಿ ಮಾಡುವುದಿಲ್ಲ, ಕಾಯ್ದೆಗೆ ತಿದ್ದುಪಡಿ ಮಾಡುವುದೂ ಇಲ್ಲ. ಈಗಿರುವ ಕಾನೂನಿನ ಚೌಕಟ್ಟಿನಡಿಯೇ ಪರಿಣಾಮಕಾರಿಯಾಗಿ ನಿಭಾಯಿಸಲು ತೀರ್ಮಾನಿಸಲಾಗಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆ 2000, 2008, ಭಾರತೀಯ ದಂಡ ಸಂಹಿತೆ, ಮತ್ತು ವಿಪತ್ತು ನಿರ್ವಹಣಾ ಕಾಯ್ದೆ 2005 ಅಡಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಹೇಳಿದರು.

ಮಾಧ್ಯಮಗಳಿಗೆ ಆತಂಕ ಬೇಡ:

‘ನಾವು ಸುಳ್ಳುಸುದ್ದಿಗಳನ್ನು ನಿಯಂತ್ರಿಸುತ್ತೇವೆ. ಆದರೆ, ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವುದಿಲ್ಲ. ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ಆಗುತ್ತದೆ ಎಂಬ ಆತಂಕ ಬೇಡ. ಭಾರತ ಪ್ರಜಾಪ್ರಭುತ್ವ ಹೊಂದಿರುವ ದೇಶ, ಸರ್ಕಾರಗಳ ಆಯ್ಕೆ ಚುನಾವಣೆಗಳ ಮೂಲಕ ಆಗುತ್ತದೆ. ಇದಕ್ಕೆ ಸಾರ್ವಜನಿಕರ ಆಶೀರ್ವಾದ ಬೇಕು. ನಮ್ಮ ಬಗ್ಗೆ ಸಾರ್ವಜನಿಕರಲ್ಲಿ ಒಳ್ಳೆಯ ಅಭಿಪ್ರಾಯ ಇದ್ದರೆ ಜನರ ಆಶೀರ್ವಾದವೂ ಸಿಗುತ್ತದೆ. ಉತ್ತಮ, ಜನಸ್ನೇಹಿ ಕೆಲಸಗಳ ಬಗ್ಗೆ ಅರಿವು ಮೂಡಿಸಿದರೆ ಜನ ಮತ ಹಾಕುತ್ತಾರೆ. ಕಾರ್ಯಕ್ರಮಗಳು ಒಳ್ಳೆಯದೋ, ಕೆಟ್ಟದೋ ಎಂಬುದನ್ನು ಜನ ತೀರ್ಮಾನ ಮಾಡುತ್ತಾರೆ’ ಎಂದು ಪ್ರಿಯಾಂಕ್ ಹೇಳಿದರು.

ಸುಪ್ರೀಂಕೋರ್ಟ್, ಚುನಾವಣಾ ಆಯೋಗ ಕೂಡ ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕಬೇಕು ಎಂದು ಹೇಳಿವೆ. ಪ್ರಧಾನಿಯವರೂ ಟ್ವೀಟ್ ಮಾಡಿದ್ದಾರೆ. ಈ ಹಿನ್ನೆಲೆಯಲ್ಲೇ ಚೌಕಟ್ಟು ರೂಪಿಸಲಾಗಿದೆ. ರಾಜಕೀಯ ದ್ವೇಷವೂ ಇಲ್ಲ, ಮಾಧ್ಯಮಗಳ ಧ್ವನಿ ಅಡಗಿಸುವುದೂ ಇಲ್ಲ ಮತ್ತು ಪೂರ್ವಗ್ರಹಗಳಿಲ್ಲದೇ ಕಾರ್ಯ ನಿರ್ವಹಿಸಲಾಗುತ್ತದೆ ಎಂದು ಅವರು ಹೇಳಿದರು.

ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ ಸಂಸ್ಥೆಗಳಿಂದ ತಪ್ಪು ಮಾಹಿತಿಗಳು ಬಂದರೆ, ಅವರ ಗಮನಕ್ಕೂ ತರಲಾಗುವುದು ಎಂದೂ ಅವರು ಹೇಳಿದರು.

‘ಫ್ಯಾಕ್ಟ್ ಚೆಕ್’ ವ್ಯವಸ್ಥೆ ಹೇಗಿರುತ್ತದೆ?

ಫ್ಯಾಕ್ಟ್ ಚೆಕ್‌ಗೆ ಮೇಲ್ವಿಚಾರಣೆ ಸಮಿತಿಯನ್ನು ರಚಿಸಲಾಗುತ್ತದೆ. ಅದರಡಿ ಫ್ಯಾಕ್ಟ್ ಚೆಕ್ ತಂಡ, ವಿಶ್ಲೇಷಣಾ (ಅನಾಲಿಟಿಕ್) ತಂಡ ಮತ್ತು ಸಾಮರ್ಥ್ಯ ವೃದ್ಧಿ (ಕೆಪಾಸಿಟಿ ಬಿಲ್ಡಿಂಗ್) ತಂಡಗಳು ಇರುತ್ತವೆ.

- ಸಾಮಾಜಿಕ ಜಾಲತಾಣಗಳಲ್ಲಿ ಬರುವ ಮಾಹಿತಿ, ಸುದ್ದಿಗಳ ಸತ್ಯಾಸತ್ಯತೆಯನ್ನು ತಂಡ ಪರಿಶೀಲನೆ ನಡೆಸಲಿದೆ. ಆ ಬಗ್ಗೆ ಸಂಬಂಧಪಟ್ಟವರಿಗೆ ಮಾಹಿತಿಯನ್ನು ನೀಡುತ್ತದೆ.
- ವಿಶ್ಲೇಷಣಾ ತಂಡವು ಸುಳ್ಳು ಸುದ್ದಿ ಸೃಷ್ಟಿಸಿ ಪ್ರಸಾರ ಮಾಡುವ ವ್ಯವಸ್ಥೆಯ ಮೇಲೆ ನಿರಂತರ ನಿಗಾ ಇಡುತ್ತದೆ. ಸುಳ್ಳು ಸುದ್ದಿ ಪ್ರಸಾರ ಮಾಡುವುದಕ್ಕೂ ಮೊದಲೇ ಗೋಪ್ಯ ಮಾಹಿತಿಯನ್ನು ರವಾನೆ ಮಾಡುತ್ತದೆ.
- ಸಾಮರ್ಥ್ಯ ವೃದ್ಧಿ ತಂಡವು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತದೆ.

ಮೇಲ್ವಿಚಾರಣಾ ಸಮಿತಿ ಯಾರಿರುತ್ತಾರೆ?

- ಐಟಿ, ಬಿಟಿ ಇಲಾಖೆ ಮುಖ್ಯಸ್ಥರು
- ಗುಪ್ತಚರ ಮತ್ತು ಸಿಐಡಿ ವಿಭಾಗಗಳ ಎಡಿಜಿಪಿಗಳು
- ವಾರ್ತಾ ಇಲಾಖೆ ಅಧಿಕಾರಿಗಳು
- ಐಐಎಸ್‌ಸಿ ಇಇಸಿಎಸ್ ವಿಭಾಗದ ಡೀನ್
- ಕರ್ನಾಟಕ ಇನ್ನೊವೇಷನ್ ಟೆಕ್ನಾಲಜಿ ಸೊಸೈಟಿಯ ಎಂಡಿ
- ಹೆಚ್ಚುವರಿ ಅಡ್ವೊಕೇಟ್ ಜನರಲ್
- ಸಾರ್ವಜನಿಕ ಪ್ರತಿನಿಧಿಗಳು
- ಗುಪ್ತಚರ ವಿಭಾಗದ ಎಸ್‌ಪಿ

ಸುಳ್ಳು ಮಾಹಿತಿಗಳ ಹರಿವನ್ನು ತಡೆಯಲು ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು.

ಹಗರಣಗಳ ಬಗ್ಗೆ ಬರೆಯಿರಿ, ಆದರೆ...!

ಸರ್ಕಾರದ ಹಗರಣಗಳ ಬಗ್ಗೆ ಮಾಧ್ಯಮಗಳು ಬರೆಯುವುದಕ್ಕೆ ಅಡ್ಡಿ ಇಲ್ಲ. ಆದರೆ, ವರದಿಗಳಲ್ಲಿ ಬರುವ ಮಾಹಿತಿ ಸತ್ಯವೋ ಸುಳ್ಳೋ ಎಂಬುದನ್ನು ಸಂಬಂಧಪಟ್ಟ ಇಲಾಖೆ ಅಥವಾ ಸರ್ಕಾರ ಮಾಹಿತಿ ನೀಡುತ್ತದೆ. ಮಂತ್ರಿಗಳು, ಅಧಿಕಾರಿಗಳ ವಿರುದ್ಧ ಆರೋಪ ಮಾಡಿದರೆ ಅವರು ವೈಯಕ್ತಿಕ ನೆಲೆಯಲ್ಲಿ ಮಾನನಷ್ಟ ಮೊಕದ್ದಮೆ ಹೂಡಲು ಸ್ವತಂತ್ರರು ಎಂದು ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದರು.

ಮಾಧ್ಯಮಗಳಿಗೆ ಆತಂಕ ಇದ್ದರೆ ಮಾಧ್ಯಮಗಳ ಒಬ್ಬ ಪ್ರತಿನಿಧಿಯನ್ನು ಮೇಲ್ವಿಚಾರಣಾ ಸಮಿತಿಗೆ ಸೇರಿಸಲು ಅವಕಾಶವಿದೆ ಎಂದರು.

ಹರಿಪ್ರಸಾದ್ ಮನವೊಲಿಸಲು ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹರಿಹಾಯುತ್ತಿರುವ ವಿಧಾನಪರಿಷತ್ತಿನ ಸದಸ್ಯ ಬಿ.ಕೆ. ಹರಿಪ್ರಸಾದ್ ನಿವಾಸಕ್ಕೆ ಗುರುವಾರ ಸಂಜೆ ಭೇಟಿ ನೀಡಿದ ಗೃಹ ಸಚಿವ ಜಿ. ಪರಮೇಶ್ವರ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಒಂದು ಗಂಟೆಗೂ ಹೆಚ್ಚು ಹೊತ್ತು ಮಾತುಕತೆ ನಡೆಸಿದ್ದಾರೆ.

ಈಡಿಗ ಮತ್ತು ಇತರ ಅತಿ ಹಿಂದುಳಿದವರ ಸಮಾವೇಶದಲ್ಲಿ ಮಾತನಾಡಿದ್ದ ಹರಿಪ್ರಸಾದ್ ಅವರು ಸಿದ್ದರಾಮಯ್ಯ ಅವರನ್ನು ವೈಯಕ್ತಿಕ ನೆಲೆಯಲ್ಲಿ ಟೀಕಿಸಿದ್ದರು. ಹಲವು ಸಚಿವರು ಸಿದ್ದರಾಮಯ್ಯ ಬೆಂಬಲಕ್ಕೆ ನಿಂತಿದ್ದಲ್ಲದೇ, ಹರಿಪ್ರಸಾದ್ ಮಾತುಗಳಿಗೆ ಆಕ್ಷೇಪ ವ್ಯಕ್ತಪಡಿಸಿದ್ದರು.

ಈಡಿಗ ಮತ್ತು ಅತಿ ಹಿಂದುಳಿದವರ ಸಮಾವೇಶವನ್ನು ರಾಜ್ಯದ ಅನೇಕ ಕಡೆ ನಡೆಸಲು ಹರಿಪ್ರಸಾದ್ ತಯಾರಿ ನಡೆಸಿದ್ದರು. ಲೋಕಸಭೆ ಚುನಾವಣೆ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ, ಪಕ್ಷದಲ್ಲಿ ಭಿನ್ನಮತ ಇದೆ ಎಂದು ಬಿಂಬಿಸಿಕೊಳ್ಳುವ ಇಂತಹ ಕಾರ್ಯಕ್ರಮ, ಪಕ್ಷದ ವರ್ಚಸ್ಸಿಗೆ ಧಕ್ಕೆ ತರಲಿದೆ ಎಂಬ ಚರ್ಚೆ ಪಕ್ಷದಲ್ಲಿ ನಡೆದಿತ್ತು.

ಹರಿಪ್ರಸಾದ್ ಭೇಟಿ ಮಾಡಿದ ಪರಮೇಶ್ವರ ಮತ್ತು ಜಾರಕಿಹೊಳಿ ಅವರು ಪಕ್ಷಕ್ಕೆ ಮುಜುಗರ ತರುವ ಇಂತಹ ಕಾರ್ಯಕ್ರಮಗಳನ್ನು ನಡೆಸದಂತೆ ಮನವೊಲಿಸುವ ಯತ್ನ ನಡೆಸಿದರು. ‘ನಿಮ್ಮಂತಹ ಹಿರಿಯ ನಾಯಕರೇ ಈ ರೀತಿ ಮಾಡಿದರೆ, ಕಿರಿಯರಿಗೆ ಹೇಳಲಾಗದು. ಎಲ್ಲವನ್ನೂ ಮಾತುಕತೆ ಮೂಲಕ ಬಗೆಹರಿಸಿಕೊಂಡು ಒಟ್ಟಾಗಿ ಹೋಗೋಣ ಎಂದು ಮನವರಿಕೆ ಮಾಡಿಕೊಡಲು ಯತ್ನಿಸಿದರು’ ಎಂದು ಮೂಲಗಳು ಹೇಳಿವೆ.

ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಬಿ.ಕೆ. ಹರಿಪ್ರಸಾದ್ ನಿವಾಸಕ್ಕೆ ಭೇಟಿ ನೀಡಿ ಚರ್ಚಿಸಿದರು.

ಕಂಬಕ್ಕೆ ಕಟ್ಟಿ ದಲಿತ ವ್ಯಕ್ತಿಗೆ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ‘ಡಿಶ್ ಟಿ.ವಿ ಕೇಬಲ್ ಕತ್ತರಿಸಲಾಗಿದೆ’ ಎಂಬ ಆರೋಪದ ಮೇರೆಗೆ ತಾಲ್ಲೂಕಿನ ಮೂಕಬಸರಿಕಟ್ಟಿ ಗ್ರಾಮದಲ್ಲಿ ರಾಮಪ್ಪ ದುರಗಪ್ಪ ಹರಿಜನ ಎಂಬ ದಲಿತ ವ್ಯಕ್ತಿಯನ್ನು ಬುಧವಾರ ಥಳಿಸಿ, ಕಂಬಕ್ಕೆ ಕಟ್ಟಿ ದೌರ್ಜನ್ಯ ನಡೆಸಲಾಗಿದೆ. ಅದರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ರಾಮಪ್ಪ ಅವರಿಗೆ ಬಂಕಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಹಾವೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮಕ್ಕೆ ಬಂಕಾಪುರ ಠಾಣೆ ಪಿಎಸ್‌ಐ ನಿಂಗಪ್ಪ ಕರಕನ್ನವರ ಹಾಗೂ ಸಿಬ್ಬಂದಿ ಭೇಟಿ ನೀಡಿ, ಮುಂದಿನ ಕ್ರಮ ತೆಗೆದುಕೊಂಡಿದ್ದಾರೆ.

ನಾಲ್ವರ ಬಂಧನ: ಪ್ರಕರಣಕ್ಕೆ ಸಂಬಂಧಿಸಿದಂತೆ ಮೂಕಬಸರಿಕಟ್ಟಿ ಗ್ರಾಮದ ಖಲಂದರ್‌ಸಾಬ್ ರಾಜೇಸಾಬನವರ, ರಬ್ಬಾನಿ ರಾಜೇಸಾಬನವರ, ಜಹೀರ್ ಅಹ್ಮದ್ ಸವಣೂರ, ಮೋದಿನಸಾಬ ರಾಜೇಸಾಬನವರ ಮತ್ತು ಆದಮ್‌ಸಾಬ್ ರಾಜೇಸಾಬನವರ ಎಂಬವರ ವಿರುದ್ಧ ಪ್ರಕರಣ ದಾಖಲಾಗಿದೆ. ನಾಲ್ವರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಖಲಂದರ್‌ಸಾಬ್ ರಾಜೇಸಾಬನವರ ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ದಾಖಲಾಗಿದ್ದಾರೆ’ ಎಂದು ಬಂಕಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಘಟನೆ ಹಿನ್ನೆಲೆ: ‘ರಾಮಪ್ಪ ಅವರ ಮನೆಯ ಮುಂಭಾಗದ ಮರದ ಟೊಂಗೆಗಳು ವಿದ್ಯುತ್ ಕಂಬಕ್ಕೆ ತಾಗುತ್ತಿದ್ದ ಕಾರಣ ಹೆಸ್ಕಾಂ ಸಿಬ್ಬಂದಿ ಮರದ ಟೊಂಗೆಗಳನ್ನು ಕತ್ತರಿಸಿದ್ದಾರೆ. ಆಗ ಡಿಶ್ ಟಿವಿ ವೈರ್ ತುಂಡಾಗಿ ಬಿದ್ದಿದೆ. ರಾಮಪ್ಪನೇ ವೈರ್ ಕತ್ತರಿಸಿದರು ಎಂದು ಭಾವಿಸಿ, ಆರೋಪಿಗಳು ಅವರನ್ನು ನಿಂದಿಸಿ, ವಿದ್ಯುತ್ ಕಂಬಕ್ಕೆ ಕಟ್ಟಿ ಹಾಕಿ ದೌರ್ಜನ್ಯ ಎಸಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ರಾಮಪ್ಪ ಹರಿಜನ ಅವರನ್ನು ಕಂಬಕ್ಕೆ ಕಟ್ಟಿ ಹಾಕಿರುವ ದೃಶ್ಯ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	97.45	2,899	4,738
ಹಾರಂಗಿ	2,859	2,858.38	1,302	1,818
ಕಬಿನಿ	2284.00	2,276.18	4,229	3,490
ಹೇಮಾವತಿ	2,922	2,898	807	6,110
ಲಿಂಗನಮಕ್ಕಿ	1,819	1,786.60	2,211	6,553.78
ಸೂಪಾ (ಮೀ)	564	545.60	2,566	3,603
ಮಾಣಿ	595	579.84	467	00
ತುಂಗಭದ್ರಾ	1,633	1,621.99	1,840	9,940
ಮಲಪ್ರಭಾ	2079.50	2,065.70	00	194
ಘಟಪ್ರಭಾ	2175	2,163.28	1,172	184
ಭದ್ರಾ	186	161.2	431	2,491
ಆಲಮಟ್ಟಿ (ಮೀ)	519.60	519.09	6,053	405
ನಾರಾಯಣಪುರ (ಮೀ)	492.25	490.34	927	2,109

* ನೆಲಮಟ್ಟದಿಂದ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸವಣೂರ-581 118
ಇ-ಮೇಲ್: apmcsavanur1@gmail.com
ಜಿಲ್ಲೆ: ಹಾವೇರಿ ದೂರವಾಣಿ:08378-241622

ಕ್ರಸಂ:ಕೃಮಾಇ;ಕೃಉಮಾಸ:ಸ:ವಾಕ್ರಿಯೋ: 88:2023-24 ದಿನಾಂಕ:07-09-2023

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ 2ನೇ ಕರೆ

ಸಮಿತಿಯ 2023-24 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದನೆಯಾದ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 100 ಎಂಟಿ ಸಾಮರ್ಥ್ಯದ ಬೃಹತ್ ತೂಕದ ಯಂತ್ರ ನಿರ್ಮಿಸುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋದಾಯಿತ ಅರ್ಹ ಗುತ್ತಿಗೆದಾರರಿಂದ KW-2 ರನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಸ್ಪರ್ಧಾತ್ಮಕ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ:29-09-2023 ಸಾಯಂಕಾಲ: 4-00 ಗಂಟೆವರೆಗೆ.** ಟೆಂಡರ ತೆರೆಯುವ **ದಿನಾಂಕ: 30-09-2023 ಸಾಯಂಕಾಲ 4-30 ಗಂಟೆಗೆ.** ಟೆಂಡರಗಿಟ್ಟ **ಮೊತ್ತ ರೂ.3095298.00. ಇ.ಎಂ.ಡಿ ಮೊತ್ತ ರೂ.61905.00.** ಕಾಲಾವಧಿ: 51/2 ತಿಂಗಳು (ಮಳೆಗಾಲ ಸಹಿತ). ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಾರ್ಯಾಲಯದ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ (http://kppp.karnataka.gov.in) ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/- ಕಾರ್ಯದರ್ಶಿ, ಕೃ.ಉ.ಮಾ.ಸ., ಸವಣೂರು
ಸಹಿ/- ಆಡಳಿತಾಧಿಕಾರಿಗಳ ಕೃ.ಉ.ಮಾ.ಸ.,ಸವಣೂರ

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080-29776466 / 8884414268
ಇ-ಮೇಲ್: bannerghattazoo@gmail.com

ಸಂಖ್ಯೆ:ಎ3/ಬಬಪಾ/ಇ-ಟೆಂಡರ್/ಫೀಡ್-ಮೀಟ್/ಸಿಆರ್-1/2023-24 ದಿನಾಂಕ: 06-09-2023

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಆರೋಗ್ಯ ಇಲಾಖೆ / ಸರ್ಕಾರಿ ಸಂಸ್ಥೆ ಇವರಿಂದ ಟ್ರೇಡ್ ಲೈಸೆನ್ಸ್ ಸರ್ಟಿಫಿಕೇಟ್ ಹಾಗೂ ಫಾರಂ-ಸಿ ಪ್ರಮಾಣಪತ್ರ ಹೊಂದಿರುವ ಅರ್ಹ ಗುತ್ತಿಗೆದಾರರಿಂದ **ಒಂದು ವರ್ಷದ ಅವಧಿಗೆ ಬನ್ನೇರುಘಟ್ಟ ಜೈವಿಕ ಉದ್ಯಾನವನದ ವಿವಿಧ ಘಟಕಗಳಲ್ಲಿರುವ ಪ್ರಾಣಿಗಳ ಆಹಾರಕ್ಕಾಗಿ ಎಮ್ಮೆ ಮಾಂಸ ಸರಬರಾಜು ಮಾಡಲು** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ ಹಾಗೂ ಟೆಂಡರ್ ಫೀ ಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **21-09-2023 ರಂದು ಸಂಜೆ 4.00 ಗಂಟೆಯವರೆಗೆ.** ಟೆಂಡರ್‌ನ್ನು ದಿನಾಂಕ: **23-09-2023 ರಂದು ಬೆಳಿಗ್ಗೆ 11.30 ಕ್ಕೆ ತೆರೆಯಲಾಗುವುದು.** ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು
ವಾಸಾಸಂಇ/ವಾ.ಪ್ರ/1291/ಅಡ್ವರ್ಟೋರ್/2023-24

Infosys
Navigate your next
Infosys Limited
Corporate Identity Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE

Notice is hereby given that a meeting of the Board of Directors of the Company will be held on Wednesday and Thursday, October 11 and 12, 2023 inter alia to:

1. Approve and take on record the audited consolidated financial results of the Company and its subsidiaries as per Indian Accounting Standards (INDAS) for the quarter and half year ending September 30, 2023;
2. Approve and take on record the audited standalone financial results of the Company as per INDAS for the quarter and half year ending September 30, 2023;
3. Approve and take on record the audited financial statements of the Company and its subsidiaries as per INDAS and IFRS for the quarter and half year ending September 30, 2023 and
4. Consider declaration of interim dividend, if any.

The financial results and proposal for interim dividend, if any, will be presented to the Board of Directors on October 12, 2023 for their approval.

The details will be made available on the website of the Company- www.infosys.com

For **Infosys Limited**
Sd/-
A.G.S. Manikantha
Company Secretary

September 14, 2023
Bengaluru, India

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ
Pho: 08194-234488 Email:-eerdwsd.chd@gmail.com

ನಂ.ಗ್ರಾ.ನೀ.ಸ.&ನೈ./ವಿ/ಚಿ/ಕಾಇಂ/ಬಿ4/ಟೆಂಡರ್/2023-24/648 ದಿ:-12.09.2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು-2 & 3 ನಿಭಂದನೆಗೊಳಪಟ್ಟಂತೆ, ಸೂಪರಿಂಟೆಂಡಿಂಗ್ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ವೃತ್ತ ದಾವಣಗೆರೆ/ಮುಖ್ಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಬೆಂಗಳೂರು ಇವರಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ನೋಂದಣಿ ಮಾಡಿಸಿದ ಗುತ್ತಿಗೆದಾರರಿಂದ ಇ-ಪ್ರಾಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಏಕ-ಲಕೋಟೆ ಪದ್ಧತಿಯಲ್ಲಿ 2022-23 ನೇ ಸಾಲಿನ ಜಲಜೀವನ್ ಮಿಷನ್ ಯೋಜನೆಯಡಿ ಹೊಳಲ್ಕೆರೆ ತಾಲ್ಲೂಕು ವ್ಯಾಪ್ತಿಯ 41 ಕಾಮಗಾರಿ ರೂ. 2049.00 ಲಕ್ಷ, ಚಿತ್ರದುರ್ಗ ತಾಲ್ಲೂಕು ವ್ಯಾಪ್ತಿಯ 32 ಕಾಮಗಾರಿ ರೂ. 1335.30 ಲಕ್ಷ ಹಾಗೂ ಹಿರಿಯೂರು ತಾಲ್ಲೂಕು ವ್ಯಾಪ್ತಿಯ 11 ಕಾಮಗಾರಿ ರೂ. 408.90 ಲಕ್ಷಗಳಿಗೆ ಟೆಂಡರ್ ಪ್ರಕಟಿಸಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 25.09.2023 ಸಂಜೆ 4-00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26.09.2023 ರ ಸಂಜೆ 4-30 ಗಂಟೆ ಹಾಗೂ ಆರ್ಥಿಕ ಬಿಡ್ ತರೆಯುವ ದಿನಾಂಕ: 27.09.2023 ರ ಸಂಜೆ 11-00 ಗಂಟೆ ಕಾಮಗಾರಿಗಳ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ. ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

DIPR/CTA/KSMCA/197/2023-24
ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:JJMTENDER23-24:2023-24/862
ದಿನಾಂಕ:11.09.2023

1.ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:02/2023-24/862 (ದ್ವಿ-ಲಕೋಟೆ ಪದ್ಧತಿ) 2ನೇ ಕರೆ
2.ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:16/2022-23/861 (ದ್ವಿ-ಲಕೋಟೆ ಪದ್ಧತಿ) 7ನೇ ಕರೆ
(e-procurement portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆಯ ಮಂಡ್ಯ ಮತ್ತು ನಾಗಮಂಗಲ ತಾಲ್ಲೂಕಿನ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ (FHTC) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ **ರೂ.285.72 ಲಕ್ಷ**ಗಳು. ಪೂರ್ವಭಾವಿ ಸಭೆ **ದಿನಾಂಕ:20.09.2023 ಸಮಯ: ಬೆಳಿಗ್ಗೆ11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ)** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:25.09.2023 ಸಂಜೆ: 5:00 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 26.09.2023 ಸಂಜೆ:05:05 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 03.10.2023 ಬೆಳಿಗ್ಗೆ:11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08232-222363.

ಸಹಿ/-ಕಾರ್ಯಪಾಲಕ ಇಂಜಿನಿಯರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.
ವಾಸಾಸಂಇ/ಸಾ-ಮಂ/ಕಿಪ/ಎಂಒಐ/185/2023-24

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ-1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.

ಸಂಖ್ಯೆ: ಕವಶಿಸಸ/ಕಾಅ-3/ಟೆಂಡರ್-01/2023-24 ದಿನಾಂಕ: 13.09.2023

ಟೆಂಡರ್ ಪ್ರಕಟಣೆ (ಇ-ಟೆಂಡರ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ, (1) **ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಪುಂಜಾಲುಕಟ್ಟೆ (ಪಿಲಾತಬೆಟ್ಟು ಗ್ರಾಮದ ಹಾಡಿ)**ಯಲ್ಲಿ (ಹಿಂ.ವರ್ಗ) ಶ್ರೀ ನಾರಾಯಣಗುರು ವಸತಿ ಶಾಲೆ ನಿರ್ಮಾಣ ಕಾಮಗಾರಿ, (2) **ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು, ವಡ್ಡರಸೆ ಗ್ರಾಮದಲ್ಲಿ** (ಹಿಂ.ವರ್ಗ) ಶ್ರೀ ನಾರಾಯಣಗುರು ವಸತಿ ಶಾಲೆ ನಿರ್ಮಾಣ ಕಾಮಗಾರಿ, (3) **ಉತ್ತರ ಕನ್ನಡ ಜಿಲ್ಲೆ, ಭಟ್ಕಳ ತಾಲ್ಲೂಕು, ಸುಸಗಡಿ ಹೋಬಳಿ, ಜಾಲಿ ಗ್ರಾಮದಲ್ಲಿ** (ಹಿಂ.ವರ್ಗ) ಶ್ರೀ ನಾರಾಯಣಗುರು ವಸತಿ ಶಾಲೆ ನಿರ್ಮಾಣ ಕಾಮಗಾರಿ (ಟೆಂಡರ್ ಇಂಡೆಂಟ್ ಸಂಖ್ಯೆ: **KREIS/2023-24/BD/WORK_INDENT22**)ನ್ನು ಇ-ಪೋರ್ಟಲ್ ಮುಖಾಂತರ **ದಿನಾಂಕ: 13.09.2023 ರಂದು** ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ: 13.10.2023** ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.

ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಕ.ವ.ಶಿ.ಸಂ.ಸಂಘ
DIPR/CP/YC/1285/2023-24

GOVERNMENT OF KARNATAKA
THE EXECUTIVE ENGINEER, PUBLIC WORKS DEPARTMENT DIVISION, VIJAYAPUR.
Ref: EE/PWD/VJP/TA/AE/Quotations/Airport/2023-24/02520
Dated:13.09.2023

NOTICE INVITING QUOTATIONS FOR RATES OF THE ITEMS DETAILED AS PER ANNEXURE-1 & 2

Sub: Preparation of Estimates for Development of Greenfield Airport at Vijayapur in Karnataka State.

Sealed Quotations are invited from the reputed Company / Firms Agencies for preparation of Estimates for Development of Greenfield Airport at Vijayapur in Karnataka State. Schedule can be obtained from this Office during working Hours 10.00 am to 5.30 pm (Contact Numbers 9481563200, 9900106481, 9742944373, 9972369677 & Email Id- eepwdbjp062@rediffmail.com and eevijayapur2017@gmail.com). Terms and conditions are as below mentioned.

1. The rates should be inclusive of all services and applicable taxes.
2. The rates should be quoted for the quality items and in case if any change in item this should be clearly stated in quotations.
3. The rates should be Valid for the period of at least 90 days from the date of quotations submitted to the department. The bidders are bound to these rates when orders are placed after approval of quotations rates within the validity period of quotation rates.
4. Sealed quotations should be reach this office on or before 30-09-2023 @5.00 or handed over personally in this office. Delay in postal transit will not be considered.
5. Materials should be as per standard specification and quality tested and certificates for quality assurance should be obtained from concern department on their own cost of the bidder.

Sd/- Executive Engineer,
Public Works Department Division, Vijayapur
DIPR/VIJAYAPURA/147/KSMCA/2023-24

ಕರ್ನಾಟಕ ಸರ್ಕಾರ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ
ಟೆಂಡರ್ ಪ್ರಕಟಣೆ ಸಂ:ಕಾಇಂ:ಪಂರಾಇಂವಿ:ಉಡುಪಿ:ಟೆಂಡರ್ ನಂ.02-09/2023-24/ಎಇ-2/ ದಿನಾಂಕ:

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯ e-procurement portal ನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರವರು 2023-24ನೇ ಸಾಲಿನ ... (Standard Tender Document for Procurement of Goods)... Government of Karnataka e-procurement portal WEB site https://www.kppp.karnataka.gov.in ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.

1. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ: 13.09.2023 ರಿಂದ 27.09.2023ರ 11.00 (PM) ಗಂಟೆಯವರೆಗೆ.
2. ಪ್ರಿ ಬಿಡ್ ಮೀಟಿಂಗ್ ನಿಗದಿಪಡಿಸಿದ ದಿನಾಂಕ: 20.09.2023ರ 11.00 (AM)
3. ಟೆಕ್ನಿಕಲ್ ಬಿಡ್ಡುಗಳನ್ನು ತೆರೆಯುವ ದಿನಾಂಕ: 29.09.2023ರ 4.30 (PM) ಗಂಟೆಯ ನಂತರ.
4. ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 30.09.2023ರ 11.00 (AM) ಗಂಟೆಯ ನಂತರ.

ಇನ್ನಿತರ ನಿಬಂಧನೆಗಳು, ... https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ...
E-proc portal helpdesk: 080-22371090 / 22373788
Hphelpdesk.bir@intarvo.com

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.
ಸಂಖ್ಯೆ: ಕಾಇಂ/ಪಂರಾಇಂವಿ/ತುಮ/ಎಇ-1/ಟೆಂಡರ್/2023-24 ದಿನಾಂಕ: 08.09.2023

ಟೆಂಡರ್ ಪ್ರಕಟಣೆ ಸಂಖ್ಯೆ-03/2023-24
(ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಟೆಂಡರ್‌ಗಳನ್ನು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ... ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಕೆ.ಪಿ.ಪಿ.ಪಿ. ಪೋರ್ಟಲ್) (ಸಪೋರ್ಟ್ ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು-560 025, ದೂರವಾಣಿ: 080-22485867, 080-22485927)ರಲ್ಲಿ ... ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ವೆಬ್‌ಸೈಟ್ https://kppp.karnataka.gov.in ಮುಖಾಂತರ ದಿನಾಂಕ: 12.09.2023 ರಿಂದ 26.09.2023 ಸಂಜೆ 5.00 ಗಂಟೆವರೆಗೆ ... ಟೆಂಡರ್ ತೆರೆಯುವ ದಿನಾಂಕ: 27.07.2023 ರಂದು ಸಂಜೆ 5.10 ಗಂಟೆ ನಂತರ. ಈ ಬಗ್ಗೆ ಸಂಪೂರ್ಣ ವಿವರಗಳನ್ನು https://kppp.karnataka.gov.in ನಲ್ಲಿ ... ದೂರವಾಣಿ ಸಂಖ್ಯೆ: 0816-2272620 ...

ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ತುಮಕೂರು.
DIPR/TUM/171/KSMCA/2023-24

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2023-24/3271 ದಿನಾಂಕ:11.09.2023

-: ಟೆಂಡರ ಅಧಿಸೂಚನೆ (ಇ-ಪ್ರೊಕ್ಯೂರಮೆಂಟ್‌ನಲ್ಲಿ):-

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೊಕ್ಯೂರಮೆಂಟನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1, 2, 3 & 4 ರಲ್ಲಿ ಲೆಕ್ಕ ಶೀರ್ಷಿಕೆ: 3054-ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ , 3054-ಜಿಲ್ಲಾ ಮುಖ್ಯ ರಸ್ತೆ ಸೇತುವೆ ನಿರ್ವಹಣೆ, 3054-ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ, 8443-ಠೇವಣಿ ವಂತಿಕೆ, 4059-ಕಟ್ಟಡಗಳು, 2059-ಬೆಳಗಾವಿ ಸುವರ್ಣಸೌಧ ಕಟ್ಟಡ ನಿರ್ವಹಣೆ,2059 ಇಲಾಖಾ ಕಟ್ಟಡಗಳ ನಿರ್ವಹಣೆ, ಮತ್ತು 2216 ವಸತಿ ಕಟ್ಟಡಗಳ ನಿರ್ವಹಣೆ ಅಡಿಯಲ್ಲಿ ಒಟ್ಟು 45 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ 249.28 ಲಕ್ಷಗಳು ಹಾಗೂ 0.21 ಲಕ್ಷಗಳು ಇದ್ದು, ಮುಂಗಡ ಮೊತ್ತವು ಅನುಕ್ರಮವಾಗಿ ರೂ 374000/- ಹಾಗೂ 1000/- ಇರುತ್ತದೆ. ಭಾಗ-1: ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 20.09.2023 ರ ಸಂಜೆ 4.30 ಘಂಟೆಯರೆಗೆ ಮತ್ತು ಟೆಂಡರಗಳನ್ನು ತೆರೆಯುವ ದಿನಾಂಕ 21-09-2023 ರ ಸಂಜೆ 4.45 ಘಂಟೆ ನಂತರ, ಭಾಗ-2: ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 29.09.2023 ರ ಸಂಜೆ 4.30 ಘಂಟೆಯರೆಗೆ ಮತ್ತು ಟೆಂಡರಗಳನ್ನು ತೆರೆಯುವ ದಿನಾಂಕ 30-09-2023 ರ ಸಂಜೆ 4.45 ಘಂಟೆ ನಂತರ, ಭಾಗ-3: ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 20.09.2023 ರ ಸಂಜೆ 4.30 ಘಂಟೆಯರೆಗೆ ಮತ್ತು ಟೆಂಡರಗಳನ್ನು ತೆರೆಯುವ ದಿನಾಂಕ 21-09-2023 ರ ಸಂಜೆ 4.45 ಘಂಟೆ ನಂತರ, ಭಾಗ-4 ಮತ್ತು ಭಾಗ-5: ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 05.10.2023 ರ ಸಂಜೆ 4.30 ಘಂಟೆಯರೆಗೆ ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 06.10.2023 ರ ಸಂಜೆ 4.45 ಘಂಟೆ, ಭಾಗ-6:ಜಾಹೀರ್ ಲಿಲಾವು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಸುವರ್ಣ ಸೌಧ ಬೆಳಗಾವಿ ಕಛೇರಿಯಲ್ಲಿ ದಿನಾಂಕ 20.09.2023 ರಂದು ಮುಂಜಾನೆ 11.00 ಗಂಟೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಸುವರ್ಣ ಸೌಧ ಬೆಳಗಾವಿ ಇವರ ಹೆಸರಿನಲ್ಲಿ ರೂ.1000/- ಡಿ.ಡಿ. ಕಟ್ಟಿ ಭಾಗವಹಿಸುವುದು ನಂತರ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 11 09-2023 ರ ನಂತರ ಪಡೆಯಬಹುದು.(ಒಂದು ವೇಳೆ ಬೀಡ್ ಸ್ವೀಕೃತವಾಗದಿದಲ್ಲಿ 3 ದಿನಗಳ ಸಂಯುಮ ಚಾಲೀತ ಸಕ್ರೀಯಗೊಳಿಸಲಾಗಿದೆ)

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-396/KSMCA/2023-24

ಮೇಘನಾ ರಾಜ್

ಬೆಳ್ಳಿತೆರೆಗೆ ಮರಳಿದ ಮೇಘನಾ

ಬೆಳ್ಳಿತೆರೆಯಿಂದ ಕೆಲ ಸಮಯ ದೂರ ಉಳಿದಿದ್ದ ನಟಿ ಮೇಘನಾ ರಾಜ್ 'ತತ್ಸಮ ತದ್ಭವ' ಸಿನಿಮಾ ಮೂಲಕ ಮತ್ತೆ ತೆರೆಗೆ ಮರಳಿದ್ದಾರೆ. ನಟನೆಯಿಂದಲೇ ದೂರ ಉಳಿಯಲು ನಿರ್ಧರಿಸಿದ್ದ ಮೇಘನಾ ತದನಂತರ ಈ ನಿರ್ಧಾರದಿಂದ ಹಿಂದೆ ಹೆಜ್ಜೆ ಇಟ್ಟ ಬಗ್ಗೆ ಸಿನಿಮಾ ಪುರವಣಿ ಜೊತೆ ಮಾತನಾಡಿದ್ದಾರೆ...

ಅಭಿಲಾಷ್ ಪಿ.ಎಸ್.

- **ಹಿಂದೊಮ್ಮೆ ನಟನೆಯಿಂದ ದೂರ ಉಳಿಯುವ ನಿರ್ಧಾರ ಮಾಡಿದ್ದೇಕೆ?**

ಇದಕ್ಕೆ ಪ್ರಮುಖ ಕಾರಣ ನಿಮಗೆಲ್ಲರಿಗೂ ಗೊತ್ತು. ನಾನು ಮಾನಸಿಕವಾಗಿ ಕುಗ್ಗಿಹೋಗಿದ್ದೆ. ರಾಯನ್‌ನ ಜನ್ಮ ನನ್ನ ಬದುಕಿಗೆ ಹೊಸ ತಿರುವು ನೀಡಿತು. ನನ್ನ ಆದ್ಯತೆ ಆತನೇ ಆದ. ಆತನ ಆರೈಕೆಯಲ್ಲೇ ದಿನ ಕಳೆದೆ. ಮತ್ತೆ ಸಿನಿಮಾ ಕ್ಷೇತ್ರಕ್ಕೆ ಮರಳಬೇಕು ಎನ್ನುವ ಯಾವುದೇ ಯೋಜನೆ ನನಗೆ ಇರಲಿಲ್ಲ. ಚಿರು(ಚಿರಂಜೀವಿ ಸರ್ಜಾ) ಈ ಚಿತ್ರ ಆರಂಭವಾಗಲು ಕಾರಣ. ಅವರಿಗೆ ಪ್ರಜ್ವಲ್ ಹಾಗೂ ಪನ್ನಗ ಭರಣ(ಪನ್ನ) ಅವರ ಜೊತೆ ಸೇರಿ ಸದಭಿರುಚಿಯ ಚಿತ್ರಗಳನ್ನು ನಿರ್ಮಾಣ ಮಾಡಬೇಕೆಂಬ ಆಸೆಯಿತ್ತು. ಪನ್ನ ಈ ಚಿತ್ರದ ಕಥೆಯನ್ನು ಹೇಳಲು ನಿರ್ದೇಶಕರನ್ನೇ ಮನೆಗೆ ಕಳುಹಿಸಿದ್ದರು. ವಿಶಾಲ್ ಆತ್ರೇಯ ಕಥೆ ಹೇಳುತ್ತಿದ್ದರೆ, ನಾನು ಆ ಪಾತ್ರದಲ್ಲಿ ಮುಳುಗಿದ್ದೆ. 'ಈ ಕಥೆ ಚೆನ್ನಾಗಿದೆ' ಎಂದು ಪನ್ನನಿಗೆ ಹೇಳಿದಾಗ, 'ಇದೇ ಏಕೆ ನಿನ್ನ ಮರುಪ್ರವೇಶಕ್ಕೆ ವೇದಿಕೆಯಾಗಬಾರದು?' ಎಂದು ಪನ್ನ ಕೇಳಿದ್ದರು. ಇಲ್ಲಿಂದ 'ತತ್ಸಮ ತದ್ಭವ' ಆರಂಭವಾಯಿತು.

- **ಅಮ್ಮನಾದ ಬಳಿಕ ಆದ ದೈಹಿಕ, ಮಾನಸಿಕ ಬದಲಾವಣೆ ಬೀರಿದ ಪರಿಣಾಮ?**

ಹೌದು, ಈ ಬದಲಾವಣೆ ಹಲವು ಪರಿಣಾಮ ಬೀರಿದೆ. ನಾನು ಬಾಣಂತಿಯಾಗಿದ್ದಾಗ ಸಲಹೆಗಳ ಮಹಾಪೂರವೇ ಬರುತ್ತಿತ್ತು. ಇದು ಒಂದು ರೀತಿಯ ಹಿಂಸೆಯಂತೆ ಅನಿಸುತ್ತಿತ್ತು. ಆದರೆ ಆ ಸಂದರ್ಭದಲ್ಲಿ ನನ್ನ ಗುರಿ ಸ್ಪಷ್ಟವಾಗಿತ್ತು. ಅಮ್ಮನಾಗಿ ಮಗನಿಗೆ ಹೆಚ್ಚಿನ ಸಮಯವನ್ನು ನೀಡಬೇಕಿತ್ತು. ನಟಿಯರು ಅಮ್ಮನಾದ ಬಳಿಕ ಮತ್ತೆ ಮೊದಲಿನಂತೆ ಆಗಲು ಕಸರತ್ತು ಆರಂಭಿಸುತ್ತಾರೆ. ಆದರೆ ನಾನು ಸಿನಿಮಾಗೆ ಮರಳುವ ಯೋಚನೆಯಲ್ಲೇ ಇರಲಿಲ್ಲ. ರಾಯನ್‌ನ ಹೆಜ್ಜೆಗಳು ನನಗೆ ಮುಖ್ಯವಾಗಿದ್ದವು. ಹೀಗಾಗಿ ಬೇರೆ ಯಾವುದರ ಬಗ್ಗೆ ನನಗೆ ಗಮನ ಇರಲಿಲ್ಲ. ಸ್ನೇಹಿತರ ಬೆಂಬಲ ಮತ್ತೆ ನನ್ನನ್ನು ಬೆಳ್ಳಿತೆರೆಗೆ ಕರೆತಂದಿದೆ.

- **ಸಿನಿಮಾ ವಿಚಾರದಲ್ಲಿ ಚಿರು ಅವರ ಬೆಂಬಲ ನೆನಪಿಸಿಕೊಂಡರೆ...**

ಇಬ್ಬರಿಗೂ ಸಿನಿಮಾ ಎಂದರೆ ಬಹಳ ಪ್ರೀತಿ. ಸಿನಿಮಾ ವಿಚಾರದಲ್ಲಿ ಚಿರು ಹಾಗೂ ನಾನು ಪರಸ್ಪರ ಸಲಹೆ ಪಡೆದುಕೊಳ್ಳುತ್ತಿದ್ದೆವು. ಆದರೆ ಸಿನಿಮಾ ಮಾಡುವ ನಿರ್ಧಾರ ವೈಯಕ್ತಿಕವಾಗಿತ್ತು. ನಾನು ವರ್ಷಕ್ಕೆ ಒಂದು ಸಿನಿಮಾ ಮಾಡುತ್ತೇನೆ ಎಂದಾಗ ಚಿರು ಅವರ ಆಲೋಚನೆಯೇ ಬೇರೆ ಇತ್ತು. ಹೆಚ್ಚು ಹೆಚ್ಚು ಸಿನಿಮಾಗಳನ್ನು ಮಾಡು ಎಂದು ಚಿರು ಪ್ರೇರೇಪಿಸುತ್ತಿದ್ದರು.

- **'ತತ್ಸಮ ತದ್ಭವ' ಸಿನಿಮಾ ಬಗ್ಗೆ...**

ಇದು ಕ್ರೈಮ್ ಥ್ರಿಲ್ಲರ್ ಚಿತ್ರ. ಆದರೆ ಮಾಮೂಲಿ ಕ್ರೈಮ್ ಥ್ರಿಲ್ಲರ್‌ಗಳಿಗಿಂತ ವಿಭಿನ್ನ. ಇದು ಸುಮ್ಮನೆ ಕುಳಿತು ನೋಡುವ ಸಿನಿಮಾ ಅಲ್ಲ. ಇಲ್ಲಿ ಪ್ರೇಕ್ಷಕರ ಯೋಚನೆಗೂ ಕೆಲಸವಿದೆ. ಪ್ರೇಕ್ಷಕರೂ ಒಂದು ಪಾತ್ರವಾಗಿ ಸಿನಿಮಾದೊಳಗೆ ಇರುತ್ತಾರೆ. ನನ್ನ ಪಾತ್ರದ ಹೆಸರು 'ಅರಿಕಾ'. ಸಿನಿಮಾ ನೋಡಿಯೇ ಈ ಪಾತ್ರದ ಬರವಣಿಗೆಯನ್ನು ಅನುಭವಿಸಬೇಕು. ನನ್ನ ವೃತ್ತಿ ಜೀವನದಲ್ಲಿ ಈ ಮಾದರಿಯ ಪಾತ್ರವನ್ನು ಮಾಡಿರಲಿಲ್ಲ. ಇತ್ತೀಚಿನ ಸಿನಿಮಾ, ವೆಬ್ ಸರಣಿಗಳಲ್ಲಿ ಸ್ತ್ರೀ ಪಾತ್ರಗಳ ಬರವಣಿಗೆ ಗಟ್ಟಿಯಾಗಿದ್ದು, ಇದೊಂದು ಸಕಾರಾತ್ಮಕ ಬೆಳವಣಿಗೆ.

- **ಮೇಘನಾ ಮುಂದಿನ ಹೆಜ್ಜೆಗಳು..**

2009ರಲ್ಲಿ ನಾನು ಮಲಯಾಳಂ ಇಂಡಸ್ಟ್ರಿ ಪ್ರವೇಶಿಸಿದೆ. ಕನ್ನಡ ಆಗಲಿ, ಮಲಯಾಳಂ ಆಗಲಿ ಹೆಚ್ಚು ಸಿನಿಮಾ ಮಾಡುವ ನಿರ್ಧಾರವನ್ನು ಈಗ ಮಾಡಿದ್ದೇನೆ. ಇಡೀ ಕುಟುಂಬ ನಟನೆಯಲ್ಲಿ ಇರುವಾಗ, ಸಿನಿಮಾ ಕನಸು ಮತ್ತೆ ಹುಟ್ಟಿಕೊಳ್ಳಲು ಇದೂ ಪ್ರೇರಣೆಯಾಗಿದೆ. ಶ್ರೀನಗರ ಕಿಟ್ಟಿ ಅವರೊಂದಿಗೆ ಒಂದು ಸಿನಿಮಾ ಮಾಡುತ್ತಿದ್ದು, 'ಅಮರ್ಥ' ಎಂಬ ಶೀರ್ಷಿಕೆ ಅದಕ್ಕಿದೆ. ಇದರ ಶೂಟಿಂಗ್ ಶೀಘ್ರದಲ್ಲೇ ಆರಂಭವಾಗಲಿದೆ.

ದಿವ್ಯಾ ಉರುಡುಗ

ದಿವ್ಯಾ ಅರವಿಂದ್ 'ಅರ್ದಂಬರ್ಧ ಪ್ರೇಮಕಥೆ'

ಕಿರುತೆರೆಯ 'ಬಿಗ್‌ಬಾಸ್' ಮೂಲಕ ಮನೆಮಾತಾದ ದಿವ್ಯಾ ಉರುಡುಗ ಹಾಗೂ ಅರವಿಂದ್ ಕೆ.ಪಿ. ಜೋಡಿ ಇದೀಗ ಸಿನಿಮಾವೊಂದರ ಮೂಲಕ ಬೆಳ್ಳಿತೆರೆಗೆ ಬರುತ್ತಿದೆ.

ಅರವಿಂದ್ ಕೌಶಿಕ್ ನಿರ್ದೇಶನದ 'ಅರ್ದಂಬರ್ಧ ಪ್ರೇಮಕಥೆ' ಚಿತ್ರದ ಟೀಸರ್ ಇಂದು(ಸೆ.15) ಬಿಡುಗಡೆಯಾಗಲಿದೆ. 'ದಾರಿಹೋಕನೆಂದುಕೊಂಡೆ ದಾರಿಯೇ ಇವನಾದಂತಿದೆ ಗುಟ್ಟೊಂದು ಗುಯ್ಗುಟ್ಟಿ ದಾರಿ ತಪ್ಪಿದ ಹಾಗಿದೆ! ಪ್ರೇಮಕಥೆಯಲ್ಲಿ ಬಂದೂಕು ಏಕೆ? ತಿರುವುಗಳ ರಸ್ತೆಯಿದು.. ಸುಳಿವಿಲ್ಲವೇಕೆ?' ಎನ್ನುವ ಮೂಲಕ ನಾಯಕ ಅರವಿಂದ್ ಕಥಾಹಂದರದ ಸುಳಿವನ್ನು ನೀಡಿದ್ದಾರೆ.

'ಅರ್ದಂಬರ್ಧ ಪ್ರೇಮ ಕಥೆ'ಗೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದು, ಬಕ್ಸಸ್ ಮೀಡಿಯಾ ಚಿತ್ರವನ್ನು ನಿರ್ಮಿಸಿದೆ. ಲೈಟ್ ಹೌಸ್ ಮೀಡಿಯಾ ಮತ್ತು ಆರ್‌ಎಸಿ ವಿಷುವಲ್ಸ್ ಕೂಡಾ ನಿರ್ಮಾಣದಲ್ಲಿ ಕೈಜೋಡಿಸಿವೆ. ಸೂರ್ಯ ಛಾಯಾಚಿತ್ರಗ್ರಹಣ, ಸಂತೋಷ್ ರಾಧಾಕೃಷ್ಣನ್ ಶೀರ್ಷಿಕೆ ವಿನ್ಯಾಸದ ಜೊತೆಗೆ ಗ್ರಾಫಿಕ್ಸ್ ತಂತ್ರಜ್ಞಾನದ ಕೆಲಸವನ್ನೂ ನಿಭಾಯಿಸಿದ್ದಾರೆ. ರ್‍ಯಾಪರ್ ಆಲ್ ಓಕೆ ಅಲೋಕ್ ಬಾಬು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿರೂಪಕಿ ಶ್ರೇಯಾ ಬಾಬು, ವೆಂಕಟ್ ಶಾಸ್ತ್ರಿ, ಪ್ರದೀಪ್ ರೋಷನ್, ಸೂರಜ್ ಹೂಗಾರ್, ಸುಜಿತ್ ಶೆಟ್ಟಿ ಮೊದಲಾದವರ ತಾರಾಗಣ ಚಿತ್ರದಲ್ಲಿದೆ.

ಮಾಸ್ ಲುಕ್‌ನಲ್ಲಿ ಧನ್ವೀರ್

'ಬಜಾರ್', 'ಬೈ ಟು ಲವ್' ಸಿನಿಮಾ ಖ್ಯಾತಿಯ ನಟ ಧನ್ವೀರ್ ನಟನೆಯ ಹೊಸ ಸಿನಿಮಾ 'ವಾಮನ' ಬಿಡುಗಡೆಗೆ ಸಜ್ಜಾಗುತ್ತಿದೆ. ಇದೇ ಹೊತ್ತಿನಲ್ಲಿ ಮತ್ತೊಂದು ಸಿನಿಮಾಗೆ ಧನ್ವೀರ್ ಹಸಿರು ನಿಶಾನೆ ನೀಡಿದ್ದಾರೆ.

ಧನ್ವೀರ್ ಜನ್ಮದಿನದಂದು ಹೊಸ ಚಿತ್ರದ ಘೋಷಣೆಯಾಗಿದ್ದು, ಇದು ಧನ್ವೀರ್ ನಾಯಕರಾಗಿ ನಟಿಸುತ್ತಿರುವ ಐದನೇ ಸಿನಿಮಾ ಆಗಿರಲಿದೆ. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರವನ್ನು ರಘುಕುಮಾರ್ ಓ. ಆರ್. ನಿರ್ದೇಶಿಸಲಿದ್ದಾರೆ. ಕಥೆಯೂ ರಘು ಅವರದ್ದು. ರಘುಕುಮಾರ್ ಅವರ ನಿರ್ದೇಶನದ ಚೊಚ್ಚಲ ಚಿತ್ರ ಇದಾಗಿದ್ದು, 'ಸಮೃದ್ಧಿ ಫಿಲಂಸ್' ಲಾಂಛನದಲ್ಲಿ ಇದು ನಿರ್ಮಾಣವಾಗುತ್ತಿದೆ. ರಘು ಅವರು ಈ ಹಿಂದೆ 'ಕೋಟಿಗೊಬ್ಬ–3' ಚಿತ್ರದಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು.

'ರಂಗಾಯಣ ರಘು , ರವಿಶಂಕರ್, ತಬಲನಾಣಿ, ಸಾಧುಕೋಕಿಲ ಇನ್ನಿತರ ಕಲಾವಿದರು ನಟಿಸುತ್ತಿದ್ದಾರೆ. ಶೀಘ್ರದಲ್ಲೇ ಚಿತ್ರೀಕರಣ ಆರಂಭವಾಗಲಿದೆ' ಎಂದಿದೆ ಚಿತ್ರತಂಡ.

ನಾಲ್ಕು ಸಿನಿಮಾಗಳು ತೆರೆಗೆ

ಪ್ರಜಾವಾಣಿ ನೋಡಿಯೊ

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ರೆಮೋಲ

ಮೇಘನಾ ರಾಜ್ ನಟನೆಯ 'ತತ್ಸಮ ತದ್ಭವ', ರಾಘವೇಂದ್ರ ರಾಜ್‌ಕುಮಾರ್ ನಟನೆಯ '13' ಸೇರಿದಂತೆ ಇಂದು(ಸೆ.15) ನಾಲ್ಕು ಸಿನಿಮಾಗಳು ತೆರೆಕಾಣುತ್ತಿವೆ.

'ತತ್ಸಮ ತದ್ಭವ': ಮೇಘನಾ ರಾಜ್, ಪ್ರಜ್ವಲ್ ದೇವರಾಜ್ ನಟನೆಯ 'ತತ್ಸಮ ತದ್ಭವ' ತೆರೆಕಂಡಿದೆ. ಕ್ರೈಮ್ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾವನ್ನು ವಿಶಾಲ್ ಆತ್ರೇಯ ನಿರ್ದೇಶಿಸಿದ್ದಾರೆ. ಪನ್ನಗ ಭರಣ, ಸ್ಫೂರ್ತಿ ಅನಿಲ್ ಹಾಗೂ ಚೇತನ್ ನಂಜುಂಡಯ್ಯ ಜಂಟಿಯಾಗಿ ನಿರ್ಮಾಣ ಮಾಡಿದ್ದಾರೆ. ಈ ಚಿತ್ರದಲ್ಲಿ ಭಿನ್ನವಾದ ಒಂದು ಪಾತ್ರದಲ್ಲಿ ಮೇಘನಾ ನಟಿಸಿದ್ದು, ಪೊಲೀಸ್ ಅಧಿಕಾರಿಯಾಗಿ ಪ್ರಜ್ವಲ್ ನಟಿಸಿದ್ದಾರೆ. ಕೆ.ಆರ್.ಜಿ ಸ್ಟುಡಿಯೋಸ್ ಮೂಲಕ ಚಿತ್ರ ಬಿಡುಗಡೆಯಾಗಿದೆ. ಚಿತ್ರಕ್ಕೆ ವಾಸುಕಿ ವೈಭವ್ ಸಂಗೀತ ನಿರ್ದೇಶನ, ಶ್ರೀನಿವಾಸ ರಾಮಯ್ಯ ಛಾಯಾಚಿತ್ರಗ್ರಹಣವಿದೆ.

ಪ್ರಜ್ವಲ್ ದೇವರಾಜ್

'ಟೇಲ್ಸ್ ಆಫ್ ಮಹಾನಗರ': ಅಥರ್ವ್ ನಾಯಕನಾಗಿ ನಟಿಸಿರುವ ಈ ಸಿನಿಮಾವನ್ನು ಕಿರಣ್ ನಿರ್ದೇಶಿಸಿದ್ದಾರೆ. 'ಗೆಜ್ಜೆನಾದ' ವಿಜಯ್ ಕುಮಾರ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಕಿರುತೆರೆಯಲ್ಲಿ ನಟಿಸಿರುವ ಅಥರ್ವ್ ಅವರಿಗೆ ಇದು ಚೊಚ್ಚಲ ಸಿನಿಮಾ. ಈ ಚಿತ್ರದ ಮೊದಲಾರ್ಧ ಮೂರು ಬೇರೆ ಕಥೆಗಳಿದ್ದು, ದ್ವಿತೀಯಾರ್ಧದಲ್ಲಿ ಮೂರು ಕಥೆಗಳು ಒಂದೇ ಆಗುತ್ತದೆ ಎಂದಿದೆ ಚಿತ್ರತಂಡ. ರೆಮೋಲ ಈ ಚಿತ್ರದ ನಾಯಕಿ.

'13': 'ಪಲ್ಲಕ್ಕಿ' ಖ್ಯಾತಿಯ ಕೆ.ನರೇಂದ್ರಬಾಬು ಅವರ ನಿರ್ದೇಶನದ, ರಾಘವೇಂದ್ರ ರಾಜ್‌ಕುಮಾರ್, ಶ್ರುತಿ, ಪ್ರಮೋದ್ ಶೆಟ್ಟಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುವ ಈ ಚಿತ್ರ ತೆರೆಕಂಡಿದೆ. ರಾಘವೇಂದ್ರ ರಾಜ್‌ಕುಮಾರ್ ಅವರು ನಿವೃತ್ತ ಸೈನಿಕ ಹಾಗೂ ಗುಜರಿ ಅಂಗಡಿ ಮಾಲೀಕ 'ಮೋಹನ್ ಕುಮಾರ್' ಪಾತ್ರದಲ್ಲಿ ಮತ್ತು ಟೀ ಅಂಗಡಿ ನಡೆಸುವ 'ಸಾಯಿರಾ ಬಾನು' ಎಂಬ ಮುಸ್ಲಿಂ ಮಹಿಳೆಯ ಪಾತ್ರದಲ್ಲಿ ಶ್ರುತಿ ಅವರು ನಟಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಭಾಗದಲ್ಲಿ ನಡೆದ ಒಂದು ನೈಜ ಘಟನೆಯನ್ನು ಸ್ಫೂರ್ತಿಯಾಗಿಟ್ಟುಕೊಂಡು ನಿರ್ದೇಶಕರು ಈ ಚಿತ್ರಕಥೆಯನ್ನು ಹೆಣೆದಿದ್ದಾರೆ. ಪ್ರಮೋದ್ ಶೆಟ್ಟಿ ಅವರು ಪೊಲೀಸ್ ಅಧಿಕಾರಿಯ ಪಾತ್ರ ನಿರ್ವಹಿಸಿದ್ದಾರೆ.

'ಪರಿಮಳ ಡಿಸೋಜ': ಗಿರಿಧರ್ ಎಚ್. ಟಿ. ಅವರ ನಿರ್ದೇಶನದ ಈ ಚಿತ್ರದಲ್ಲಿ ಬಹುತಾರಾಗಣವಿದೆ. ಕ್ರೈಂ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾದಲ್ಲಿ ಕೋಮಲ ಬನವಾಸೆ, ಭವ್ಯ, ಶ್ರೀನಿವಾಸ್ ಪ್ರಭು, ವಿನೋದ್ ಶೇಷಾದ್ರಿ, ಶ್ವೇತ ರಮೇಶ್, ಪೂಜಾ ರಾಮಚಂದ್ರ, ನಾಗಮಂಗಲ ಜಯರಾಮ್, ಮೀಸೆ ಆಂಜನಪ್ಪ, ಜ್ಯೋತಿ ಮರೂರ್, ಉಗ್ರಂ ರೆಡ್ಡಿ, ಚಂದನ ಶ್ರೀನಿವಾಸ್, ಲಕ್ಷ್ಮಣ್ ಗೌಡ, ರೋಹಿಣಿ ನಟಿಸಿದ್ದಾರೆ.

ಕಾಟೇರ
ದರ್ಶನ್, ಆರಾಧನಾ

ಶೀಘ್ರದಲ್ಲೇ ತೆರೆಗೆ 'ಕಾಟೇರ'

ತರುಣ್ ಸುಧೀರ್

ತರುಣ್ ಸುಧೀರ್ ನಿರ್ದೇಶನದ, ನಟ ದರ್ಶನ್ ಅಭಿನಯದ 'ಕಾಟೇರ' ಸಿನಿಮಾದ ಚಿತ್ರೀಕರಣ ಅಂತಿಮ ಹಂತ ತಲುಪಿದ್ದು, ಶೀಘ್ರದಲ್ಲೇ ಸಿನಿಮಾ ಬಿಡುಗಡೆಯಾಗುವ ಸುಳಿವನ್ನು ಚಿತ್ರತಂಡ ನೀಡಿದೆ. ಚಿತ್ರೀಕರಣದ ಮಾಹಿತಿ ನೀಡಲು ಚಿತ್ರತಂಡ ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿತ್ತು.

'ಸಾಮಾನ್ಯವಾಗಿ ಚಿತ್ರವೊಂದಕ್ಕೆ 85 ದಿನಗಳ ಕಾಲ್‌ಶೀಟ್ ನೀಡುತ್ತೇನೆ. ಈ ಪೈಕಿ 'ಕಾಟೇರ'ದ 71 ದಿನಗಳ ಚಿತ್ರೀಕರಣ ಮುಗಿದಿದೆ. ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯಗಳ ಚಿತ್ರೀಕರಣ ಪೂರ್ಣಗೊಂಡಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭಗೊಂಡಿದ್ದು, ಡಬ್ಬಿಂಗ್ ಕೆಲಸಗಳು ನಡೆಯುತ್ತಿವೆ. ಆದಷ್ಟು ಬೇಗ ಸಿನಿಮಾವನ್ನು ತೆರೆಗೆ ತರಲು ಪ್ರಯತ್ನಿಸುತ್ತಿದ್ದೇವೆ. ಚಿತ್ರದ ಶೇ 95ರಷ್ಟು ಕೆಲಸ ಪೂರ್ಣಗೊಂಡಿದೆ. ನೀನಾಸಂ, ಹವ್ಯಾಸಿ ರಂಗಭೂಮಿ ಕಲಾವಿದರು ಈ ಸಿನಿಮಾದಲ್ಲಿದ್ದಾರೆ' ಎಂದಿದ್ದಾರೆ ದರ್ಶನ್.

''ಗುರು ಶಿಷ್ಯರು' ಚಿತ್ರದ ನಂತರ ನಾನು ಹಾಗೂ ಜಡೇಶ್ ಸೇರಿ 'ಕಾಟೇರ' ಕಥೆ ಬರೆದಿದ್ದೆವು. ದರ್ಶನ್ ಅವರಿಗಾಗಿಯೇ ಬರೆದ ಕಥೆಯಿದು' ಎಂದು ಮಾತು ಆರಂಭಿಸಿದ ತರುಣ್ ಸುಧೀರ್, 'ಇದು ನನ್ನ ನಿರ್ದೇಶನದ ಮೂರನೇ ಸಿನಿಮಾ. ಈ ಚಿತ್ರ 1970ರ ಕಾಲಘಟ್ಟದಲ್ಲಿ ನಡೆಯುವ ಕಥೆ ಹೊಂದಿದ್ದು, ಇದಕ್ಕಾಗಿ ಕನಕಪುರ ರಸ್ತೆಯಲ್ಲಿ ಅದ್ದೂರಿ ಹಳ್ಳಿ ಸೆಟ್ ಹಾಕಲಾಗಿದೆ. ನೂರು ದಿನಗಳ ಚಿತ್ರೀಕರಣ ಪೂರ್ಣವಾಗಿದೆ. ಹಾಡುಗಳ ಚಿತ್ರೀಕರಣವಷ್ಟೇ ಬಾಕಿಯಿದೆ' ಎಂದರು.

ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ನಟರಾದ ಅವಿನಾಶ್, ಜಗಪತಿ ಬಾಬು, ಕುಮಾರ್ ಗೋವಿಂದ್, ವಿನೋದ್ ಆಳ್ವಾ, ಆರಾಧನಾ ಚಿತ್ರದ ತಾರಾಬಳಗದಲ್ಲಿದ್ದಾರೆ. ವಿ.ಹರಿಕೃಷ್ಣ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ವೀರಪುತ್ರನಾದ ವಿಜಯ್

ವಿಜಯ್ ಸೂರ್ಯ

'ಅಗ್ನಿಸಾಕ್ಷಿ' ಧಾರಾವಾಹಿ ಮೂಲಕ ಗುರುತಿಸಿಕೊಂಡಿರುವ ನಟ ವಿಜಯ್ ಸೂರ್ಯ ಮತ್ತೊಮ್ಮೆ ಬೆಳ್ಳಿತೆರೆಯಲ್ಲಿ ಮಿಂಚಲು ಸಜ್ಜಾಗುತ್ತಿದ್ದಾರೆ. ಅವರ ನಟನೆಯ 'ವೀರಪುತ್ರ' ಸಿನಿಮಾದ ಫಸ್ಟ್‌ಲುಕ್ ಬಿಡುಗಡೆಯಾಗಿದೆ.

'ಇಷ್ಟಕಾಮ್ಯ' ಸಿನಿಮಾ ಮೂಲಕ ಬೆಳ್ಳಿತೆರೆ ಪ್ರವೇಶಿಸಿದ್ದ ವಿಜಯ್ ಪ್ರಸ್ತುತ 'ಪ್ರೇಮಲೋಕ' ಎಂಬ ಧಾರಾವಾಹಿಯಲ್ಲಿ ನಟಿಸುತ್ತಿದ್ದಾರೆ. ವಿಜಯ್ ಜನ್ಮದಿನದಂದು ಈ ಫಸ್ಟ್‌ಲುಕ್ ಬಿಡುಗಡೆಯಾಗಿದ್ದು, ರಡಗ್ ಆಗಿ ಅವರು ಕಾಣಿಸಿಕೊಂಡಿದ್ದಾರೆ.

ದೇವರಾಜ್ ಎಸ್. 'ವೀರಪುತ್ರ' ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದು, ಇದು ಇವರ ನಿರ್ದೇಶನದ ಎರಡನೇ ಚಿತ್ರ. ಈ ಹಿಂದೆ 'ಸಪ್ಲಿಮೆಂಟರಿ' ಎಂಬ ಚಿತ್ರವನ್ನು ಅವರು ನಿರ್ದೇಶಿಸಿದ್ದರು. ಮೆಡಿಕಲ್ ಮಾಫಿಯಾ ಹಾಗೂ ಪ್ರತೀಕಾರದ ಕಥಾಹಂದರ ಹೊಂದಿರುವ 'ವೀರಪುತ್ರ' ಸಿನಿಮಾಗೆ ನಿರ್ದೇಶನದ ಜೊತೆಗೆ ಕಥೆ, ಚಿತ್ರಕಥೆ, ಸಂಭಾಷಣೆಯನ್ನೂ ದೇವರಾಜ್ ಬರೆದಿದ್ದಾರೆ. ಗುರು ಬಂಡಿ ಈ ಚಿತ್ರದ ನಿರ್ಮಾಪಕರು. ವಿಜಯ್ ಸೂರ್ಯ ಅವರಿಗೆ ಜೋಡಿಯಾಗಿ ಲೇಖಚಂದ್ರ ನಟಿಸುತ್ತಿದ್ದಾರೆ. ಜೂಡಾ ಸ್ಯಾಂಡಿ ಸಂಗೀತ, ಉದಯ್ ಆದಿತ್ಯ ಛಾಯಾಚಿತ್ರಗ್ರಹಣ, ಪ್ರಮೋದ್ ಮರವಂತೆ ಸಾಹಿತ್ಯ ಚಿತ್ರಕ್ಕಿದೆ. ಶೇ60ರಷ್ಟು ಶೂಟಿಂಗ್ ಪೂರ್ಣಗೊಂಡಿದ್ದು, ಉಳಿದ ಭಾಗದ ಚಿತ್ರೀಕರಣ ಮುಂದಿನ ತಿಂಗಳಿನಿಂದ ಆರಂಭವಾಗಲಿದೆ.

ಸಿನಿ ಸಂಕ್ಷಿಪ್ತ

'ವಸಂತಕಾಲದ ಹೂ' ರಾಧಾ ಭಗವತಿ

ಕಿರುತೆರೆಯ ಜನಪ್ರಿಯ ಧಾರಾವಾಹಿ 'ರಾಮಾಚಾರಿ'ಯಲ್ಲಿ ನಾಯಕನ ತಂಗಿ ಪಾತ್ರದಲ್ಲಿ ನಟಿಸಿದ್ದ ರಾಧಾ ಭಗವತಿ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾರೆ.

ಸಚಿನ್ ಶೆಟ್ಟಿ ನಿರ್ದೇಶಿಸುತ್ತಿರುವ 'ವಸಂತಕಾಲದ ಹೂಗಳು' ಚಿತ್ರಕ್ಕೆ ನಾಯಕಿಯಾಗಿ ರಾಧಾ ಆಯ್ಕೆಯಾಗಿದ್ದಾರೆ. ವಿಜಯಪುರ ಮೂಲದ ರಾಧಾ ಭಗವತಿ ಅವರು, ಟೀನೇಜ್ ಪ್ರೇಮಕಥೆ ಹೊಂದಿರುವ ಈ ಚಿತ್ರದಲ್ಲಿ 'ಸುಮಾ' ಎಂಬ ಹೆಸರಿನ ಪಿಯುಸಿ ವಿದ್ಯಾರ್ಥಿನಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ.

'ಚಿತ್ರದ ಹೆಸರೇ ನನಗೆ ಆಪ್ತವೆನಿಸಿತು. ಕಥೆ ಕೇಳಿದ ನಂತರ ಮೂರ್ನಾಲ್ಕು ದಿನ ಆ ಗುಂಗಿನಲ್ಲೇ ಇದ್ದೆ. ಚಿತ್ರ ನೋಡಿದವರಿಗೆಲ್ಲ ತಮ್ಮ ಕಾಲೇಜು ದಿನಗಳ ನೆನಪು ಮರುಕಳಿಸದೇ ಇರದು. ನಟನೆಗೆ ಹೆಚ್ಚು ಅವಕಾಶ ಇರುವಂತ ಪಾತ್ರ ಸಿಕ್ಕಿದ್ದಕ್ಕೆ ಖುಷಿಯಿದೆ. ಸಿನಿಪ್ರಿಯರ ಪ್ರತಿಕ್ರಿಯೆಗೆ ಕಾತರದಿಂದ ಎದುರು ನೋಡುತ್ತಿದ್ದೇನೆ' ಎನ್ನುತ್ತಾರೆ ರಾಧಾ.

ಸೌಂಡ್ ಮಾಡಿದ ಸೋಮು...

'ದುನಿಯಾ' ಖ್ಯಾತಿಯ ನಿರ್ದೇಶಕ ಸೂರಿ ಗರಡಿಯಲ್ಲಿ ಪಳಗಿ, 'ಕಡ್ಡಿಪುಡಿ', 'ಕೆಂಡಸಂಪಿಗೆ', 'ದೊಡ್ಮನೆ ಹುಡುಗ', 'ಟಗರು' ಹೀಗೆ ಹಿಟ್ ಸಿನಿಮಾಗಳಲ್ಲಿ ಸಹ ನಿರ್ದೇಶಕರಾಗಿ ದುಡಿದಿದ್ದ ಅಭಿ ನಿರ್ದೇಶಕರಾಗಿ ತಮ್ಮ ಮೊದಲ ಹೆಜ್ಜೆ ಇಟ್ಟಿದ್ದಾರೆ.

ಉತ್ತರ ಕರ್ನಾಟಕದ ಸೊಗಡಿನ, ಅಭಿ ನಿರ್ದೇಶನದ ಸಿನಿಮಾ 'ಸೋಮು ಸೌಂಡ್ ಇಂಜಿನಿಯರ್' ರಿಲೀಸ್‌ಗೆ ಸಜ್ಜಾಗುತ್ತಿದ್ದು, ಸಿನಿಮಾದ ಟೈಟಲ್ ಟ್ರ್ಯಾಕ್ ಇತ್ತೀಚೆಗೆ ಬಿಡುಗಡೆಯಾಯಿತು. ಧನಂಜಯ್ ರಂಜನ್ ಸಾಹಿತ್ಯದ ಈ ಹಾಡಿಗೆ ಸ್ವರೂಪ್ ಖಾನ್ ಧ್ವನಿಯಾಗಿದ್ದು, ಚರಣ್ ರಾಜ್ ಸಂಗೀತವಿದೆ. ನಾಯಕ 'ಸೋಮು'ವನ್ನು ಈ ಹಾಡಿನ ಮೂಲಕ ಕಟ್ಟಿಕೊಡಲಾಗಿದೆ. ಹಳ್ಳಿ ಬ್ಯಾಕ್ ಡ್ರಾಪ್‌ನಲ್ಲಿ ಈ ಹಾಡು ಮೂಡಿಬಂದಿದೆ.

'ಸಲಗ' ಸಿನಿಮಾದಲ್ಲಿ 'ಕೆಂಡ' ಎಂಬ ಪಾತ್ರದಲ್ಲಿ ಮಿಂಚಿದ್ದ ಶ್ರೇಷ್ಠ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದು, ಶೃತಿ ಪಾಟೀಲ್ ಜೋಡಿಯಾಗಿದ್ದಾರೆ. ಜಹಾಂಗೀರ್, ಅಪೂರ್ವ, ಯಶ್ ಶೆಟ್ಟಿ ಚಿತ್ರದ ಮುಖ್ಯ ಭೂಮಿಕೆಯಲ್ಲಿದ್ದಾರೆ. ಶೂಟಿಂಗ್ ಮುಗಿಸಿರುವ ಚಿತ್ರತಂಡ ರಿ ರೆಕಾರ್ಡಿಂಗ್ ಕೆಲಸದಲ್ಲಿ ತೊಡಗಿಸಿಕೊಂಡಿದೆ.


ಶ್ರೇಷ್ಠ

ಶೂನ್ಯದಿಂದ ಆರಂಭಿಸಿ ಯಶಸ್ವಿ ಉದ್ಯಮಿಯಾಗಿರುವ ಗೋವಿಂದ ಬಾಬು ಪೂಜಾರಿ

ರಾಜಕೀಯ ಕ್ಷೇತ್ರದಲ್ಲಿ ಎಡವಿದ ಉದ್ಯಮಿ

• ಬಾಲಚಂದ್ರ ಎಚ್.

ಉಡುಪಿ: ಬೈಂದೂರು ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಪಡೆಯಲು ಹೋಗಿ ₹ 5 ಕೋಟಿ ಕಳೆದು ಕೊಂಡಿರುವುದಾಗಿ ದೂರು ನೀಡಿರುವ ಗೋವಿಂದ ಬಾಬು ಪೂಜಾರಿ (46), ಹೋಟೆಲ್ ಹಾಗೂ ಕೇಟರಿಂಗ್ ಉದ್ಯಮದಲ್ಲಿ ಯಶಸ್ಸು ಸಾಧಿಸಿದ್ದಾರೆ.

ಗೋವಿಂದ ಬಾಬು ಪೂಜಾರಿ

ಬೈಂದೂರು ತಾಲ್ಲೂಕಿನ ಬಿಜೂರು ಮೂಲದ ಗೋವಿಂದ ಬಾಬು ಪೂಜಾರಿ ಓದಿದ್ದು 7ನೇ ತರಗತಿಯಾದರೂ ಸ್ವಂತ ಕಂಪನಿ ಆರಂಭಿಸಿ ಸಾವಿರಾರು ಮಂದಿಗೆ ಉದ್ಯೋಗ ನೀಡಿದ್ದಾರೆ. ನೂರಾರು ಕೋಟಿ ವಹಿವಾಟು ನಡೆಸುತ್ತಿದ್ದಾರೆ.

ಉದ್ಯೋಗ ಅರಸಿ ಮುಂಬೈಗೆ ತೆರಳಿದ ಅವರು ಸಣ್ಣ ಹೋಟೆಲ್‌ನಲ್ಲಿ ಪ್ಲೇಟ್ ತೊಳೆದು ಚಹಾ ಮಾರಿ, ಅಡುಗೆ ಕೆಲಸದ ಮೂಲಕ ವೃತ್ತಿ ಆರಂಭಿಸಿದರು. ಸಣ್ಣ ಹೋಟೆಲ್ ಆರಂಭಿಸಿ ಕೈಸುಟ್ಟುಕೊಂಡರೂ ಛಲ ಬಿಡದೆ ಆ ಕ್ಷೇತ್ರದಲ್ಲೇ ಬೆಳೆದವರು ಎನ್ನುತ್ತಾರೆ ಅವರ ಆಪ್ತರು.

ಮುಂಬೈನ ಸ್ಟಾರ್ ಹೋಟೆಲ್‌ನಲ್ಲಿ ಕ್ಲೀನಿಂಗ್, ಕುಕಿಂಗ್ ಕೆಲಸಕ್ಕೆ ಸೇರಿ ದುಡಿದಿದ್ದ ಹಣದಲ್ಲಿ ಶೆಫ್ ಟಾಕ್ ಕಂಪನಿ (ಶೆಫ್ ಫುಡ್ ಅಂಡ್ ಹಾಸ್ಪಿಟಾಲಿಟಿ) ಹುಟ್ಟು ಹಾಕಿ, ಗುಣಮಟ್ಟದ ಆಹಾರ ಪೂರೈಸುವ ಮೂಲಕ ಕೇಟರಿಂಗ್ ಕ್ಷೇತ್ರದಲ್ಲಿ ಎತ್ತರಕ್ಕೆ ಬೆಳೆದು ನಿಂತಿದ್ದಾರೆ.

ಮುಂಬೈ, ಬೆಂಗಳೂರಿನ ಬೊಮ್ಮನಹಳ್ಳಿ, ಕಾಡುಗೋಡಿಯಲ್ಲಿ ಸಂಸ್ಥೆಯ ಕೇಂದ್ರಗಳನ್ನು ಹೊಂದಿದ್ದು ಪ್ರಮುಖ ಕಾರ್ಪೊರೇಟ್ ಕಂಪನಿಗಳಿಗೆ ನಿತ್ಯ ಆಹಾರ ಪೂರೈಸುತ್ತಿದ್ದಾರೆ. ಐದಾರು ರಾಜ್ಯಗಳಿಗೆ ಉದ್ಯಮ ವಿಸ್ತರಿಸಿದ್ದಾರೆ. ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಪೂರೈಸುವ ಟೆಂಡರ್ ವಹಿಸಿಕೊಂಡಿದ್ದಾರೆ. ಇಂಡಿಯನ್ ಲೀಡರ್‌ಶಿಪ್, ಬೆಸ್ಟ್ ಕಾರ್ಪೊರೇಟ್ ಕೇಟರರ್ಸ್ ಸೇರಿ ಪ್ರತಿಷ್ಠಿತ ಪ್ರಶಸ್ತಿಗಳು ಅವರಿಗೆ ಸಂದಿವೆ.

ಉದ್ಯಮದಲ್ಲಿ ಹೆಸರು ಮಾಡಿರುವ ಗೋವಿಂದ ಬಾಬು ಪೂಜಾರಿ ಕಳೆದ ಆರೇಳು ವರ್ಷಗಳಿಂದ ವರಲಕ್ಷ್ಮೀ ಚಾರಿಟೆಬಲ್ ಟ್ರಸ್ಟ್ ಮೂಲಕ ಉಡುಪಿ ಜಿಲ್ಲೆಯಲ್ಲಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಟ್ರಸ್ಟ್ ವತಿಯಿಂದ ಬಡವರಿಗೆ ಉಚಿತವಾಗಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದು, ಬಡ ಮಕ್ಕಳ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುತ್ತಿದ್ದಾರೆ.

ಉದ್ಯಮ ಕ್ಷೇತ್ರದಲ್ಲಿನ ಯಶಸ್ಸಿನ ಬೆನ್ನಿಗೆ ರಾಜಕೀಯದಲ್ಲೂ ಅದೃಷ್ಟ ಪರೀಕ್ಷೆಗೆ ಇಳಿಯಲು ಮುಂದಾಗಿದ್ದ ಇವರು ಕಳೆದ ಮೂರ್ನಾಲ್ಕು ವರ್ಷಗಳಿಂದ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದರು. ಹಿಂದುತ್ವ ಪರವಾದ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಬೈಂದೂರು ಕ್ಷೇತ್ರದಿಂದ ಬಿಜೆಪಿಯ ಟಿಕೆಟ್ ಆಕಾಂಕ್ಷಿ ಎಂದು ಬಿಂಬಿಸಿಕೊಂಡಿದ್ದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೈಂದೂರಿನಿಂದ ಗೋವಿಂದ ಪೂಜಾರಿ ಹೆಸರು ಕೇಳಿಬಂದಿತ್ತು.

‘ಷಡ್ಯಂತ್ರಕ್ಕೆ ಮಗಳು ಬಲಿ’

‘ಬೇರೆಯವರ ಹಣಕ್ಕೆ ಆಸೆ ಪಟ್ಟವಳಲ್ಲ ನನ್ನ ಮಗಳು. ಹಣವನ್ನು ಯಾರು ತಿಂದಿದ್ದಾರೋ ಗೊತ್ತಿಲ್ಲ. ಈ ಪ್ರಕರಣದಲ್ಲಿ ಮಗಳನ್ನು ಸಿಲುಕಿಸಲಾಗಿದೆ’ ಎಂದು ಚೈತ್ರಾ ಕುಂದಾಪುರ ಅವರ ತಾಯಿ ರೋಹಿಣಿ ಮಾಧ್ಯಮಗಳ ಮುಂದೆ ಕಣ್ಣೀರು ಸುರಿಸಿದರು.

ಕುಂದಾಪುರದ ತಮ್ಮ ಮನೆಯಲ್ಲಿ ಮಾತನಾಡಿದ ಅವರು, ‘ಸಣ್ಣ ವಯಸ್ಸಿನಿಂದ ಚುರುಕಾಗಿರುವ ಚೈತ್ರಾ ಭಾಷಣದ ಮೂಲಕ ಪ್ರಸಿದ್ಧಿ ಪಡೆದಿದ್ದಾಳೆ. ಎಲ್ಲವನ್ನು ನಿಭಾಯಿಸುವ ಧೈರ್ಯವಂತೆ. ಆಕೆಯನ್ನು ವಂಚನೆ ಪ್ರಕರಣದಲ್ಲಿ ಸಿಲುಕಿಸುವ ಷಡ್ಯಂತ್ರ ಮಾಡಲಾಗಿದೆ’ ಎಂದು ದೂರಿದರು.

ಬಂಧನವಾದ ದಿನ ಕರೆ ಮಾಡಿದ್ದ ಚೈತ್ರಾ, ’ಚಿಂತಿಸಬೇಡಿ, ಸರಿಯಾಗಿ ಔಷಧ ತೆಗೆದುಕೊಳ್ಳಿ’ ಎಂಬ ಧೈರ್ಯದ ಮಾತು ಆಡಿದ್ದಳು. ಮಗಳ ಸ್ಥಿತಿ ಕಂಡು ದುಃಖವಾಗುತ್ತಿದೆ. ದುಡಿದ ಹಣವನ್ನು ಬೇರೆಯವರ ಕಷ್ಟಕ್ಕೆ ಖರ್ಚು ಮಾಡುವ ಮಗಳನ್ನು ಮಾಡದ ತಪ್ಪಿಗೆ ಗುರಿ ಮಾಡಲಾಗಿದೆ ಎಂದರು.

ಸಲೂನ್ ಮಾಲೀಕನಿಗೆ ಬೆದರಿಕೆ ಕರೆ

ಕಡೂರು (ಚಿಕ್ಕಮಗಳೂರು): ಉದ್ಯಮಿಗೆ ವಂಚನೆ ಪ್ರಕರಣದಲ್ಲಿ ಚೈತ್ರಾ ಕುಂದಾಪುರ ಜತೆಗೆ ಬಂಧಿತನಾಗಿರುವ ಆರೋಪಿಯ ಸ್ನೇಹಿತನೊಬ್ಬ ಕಡೂರಿನ ಸಲೂನ್ ಮಾಲೀಕ ರಾಮುವಿಗೆ ದೂರವಾಣಿ ಕರೆ ಮಾಡಿ ಬೆದರಿಕೆ ಹಾಕಿದ್ದು, ಈ ಕುರಿತ ಆಡಿಯೊ ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡುತ್ತಿದೆ.

‘ಯಾರನ್ನು ಕೇಳಿ ನೀನು ಮೀಡಿಯಾದವರ ಬಳಿ ಹೋದೆ? ಅಂಗಡಿಗೆ ನೂರಾರು ಜನ ಬರ್ತಾರೆ. ಎಲ್ಲರನ್ನೂ ನೆನಪಿಡಲಾಗುತ್ತಾ ಎನ್ನಬೇಕಿತ್ತು. ಇಲ್ಲೇ ಬಂದು ಫೋಟೊ ತೋರಿಸಿದ್ರು, ಕಟಿಂಗ್ ಮಾಡಿಸಿದ್ರು ಅಂತೆಲ್ಲಾ ಹೇಳಿದ್ದೀಯಾ, ನಮ್ಮನ್ನು ಎದುರಾಕ್ಕೊಂಡು ಅದೇಗೆ ಸಲೂನ್ ನಡಸ್ತೀಯಾ... ಮೀಡಿಯಾದವ್ರು ನಿನ್ನ ಜೊತೆ ಇರ್ತಾರಾ ನೋಡೋಣ‘ ಎಂಬ ಬೆದರಿಕೆ ಈ ಆಡಿಯೊದಲ್ಲಿದೆ.

‘ನಾನು ನಡೆದಿದ್ದನಷ್ಟೇ ಹೇಳಿರುವೆ. ಬೇರೇನೂ ಗೊತ್ತಿಲ್ಲ‘ ಎಂದು ರಾಮು ಹೇಳಲು ಪ್ರಯತ್ನಿಸಿದರೂ, ಕರೆ ಮಾಡಿದ ವ್ಯಕ್ತಿ ‘ಆಗಲಿ... ನಿನಗೆ ಒಳ್ಳೆಯದಾಗಲಿ‘ ಎಂದು ಮಾತು ಮುಗಿಸಿದ್ದಾನೆ. ಈ ಬಗ್ಗೆ ಪ್ರತಿಕ್ರಿಯೆಗೆ ಸಲೂನ್ ಮಾಲೀಕ ರಾಮು ಸಂಪರ್ಕಕ್ಕೆ ಸಿಗಲಿಲ್ಲ.

‘ಚೈತ್ರಾ ಪ್ರಕರಣಕ್ಕೂ ಇಂದಿರಾ ಕ್ಯಾಂಟೀನ್‌ಗೂ ಸಂಬಂಧವಿಲ್ಲ’

ಬೆಂಗಳೂರು: ‘ಬೈಂದೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಹೇಳಿ ಉದ್ಯಮಿ ಗೋವಿಂದಬಾಬು ಪೂಜಾರಿ ಎಂಬವರಿಂದ ₹3.5 ಕೋಟಿ ವಂಚಿಸಿದ ಆರೋಪಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿದ್ದು, ಯಾರೇ ತಪ್ಪು ಮಾಡಿದರೂ ಕಾನೂನಿನಡಿ ಕ್ರಮ ಆಗಲಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಈ ಪ್ರಕರಣಕ್ಕೂ ಇಂದಿರಾ ಕ್ಯಾಂಟಿನ್‌ಗೂ ಸಂಬಂಧ ಇಲ್ಲ’ ಎಂದರು.

‘ನನಗೆ ಬಂದ ಮಾಹಿತಿ ಪ್ರಕಾರ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಹಣ ಪಡೆದಿದ್ದಾರೆ. ಪ್ರಕರಣದಲ್ಲಿ ಸ್ವಾಮೀಜಿ ಬಗ್ಗೆಯೂ ತನಿಖೆಯಾಗಲಿದೆ. ಸ್ವಾಮೀಜಿಯ ತಪ್ಪಿದ್ದರೇ ಅವರ ಬಂಧನವೂ ಆಗಲಿದೆ. ಸಿಸಿಬಿ ಪೊಲೀಸರ ತನಿಖೆ ಬಳಿಕ ಎಲ್ಲ ವಿಚಾರ ಗೊತ್ತಾಗಲಿದೆ’ ಎಂದರು.

‘ಪೊಲೀಸರು ಸ್ವಯಂಪ್ರೇರಿತವಾಗಿ ಈ ಪ್ರಕರಣವನ್ನು ದಾಖಲಿಸಿಕೊಂಡಿಲ್ಲ. ವ್ಯಕ್ತಿಯೊಬ್ಬರು ನೀಡಿದ ದೂರಿನ ಆಧಾರದಲ್ಲಿ ಪ್ರಕರಣ ದಾಖಲಾಗಿದೆ. ಚೈತ್ರಾ ಹಿಂದೂ ಪರವಾದ ಭಾಷಣ ಮಾಡಿದ್ದಾರೆ ಎಂಬ ವಿಚಾರಕ್ಕೂ ಅವರ ಬಂಧನದ ವಿಚಾರವನ್ನು ಜೊತೆಗೂಡಿಸುವುದು ಬೇಡ’ ಎಂದೂ ಪರಮೇಶ್ವರ ಹೇಳಿದರು.

ಸಿಸಿಬಿ ತನಿಖೆಗೆ ತೆರಳುವ ಮೊದಲು ಮಾಧ್ಯಮದ ಮುಂದೆ ಮಾತನಾಡಿದ್ದ ಚೈತ್ರಾ ಕುಂದಾಪುರ, ‘ ಇದರಲ್ಲಿ ದೊಡ್ಡ ದೊಡ್ಡವರ ಹೆಸರು ಕೂಡ ಬಹಿರಂಗವಾಗುತ್ತದೆ. ಇಂದಿರಾ ಕ್ಯಾಂಟೀನ್ ಬಿಲ್‌ಗಾಗಿ ಈ ರೀತಿ ಷಡ್ಯಂತ್ರ ಮಾಡಿದ್ದಾರೆ’ ಎಂದಿದ್ದರು.

ಬಿಜೆಪಿಗೆ ಸಂಬಂಧವಿಲ್ಲ–ಬೊಮ್ಮಾಯಿ

ಮಂಗಳೂರು: ಚೈತ್ರಾ ಕುಂದಾಪುರ ಪ್ರಕರಣ ಮತ್ತು ಅವರ ವ್ಯವಹಾರಕ್ಕೂ ಬಿಜೆಪಿಗೂ ಸಂಬಂಧವಿಲ್ಲ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಪ್ರಕರಣದ ಸಮಗ್ರ ತನಿಖೆ ಆಗಿ, ಸತ್ಯ ಹೊರ ಬರಲಿ. ಸ್ವಾಮೀಜಿ ಅಷ್ಟೇ ಅಲ್ಲ, ಈ ಪ್ರಕರಣದಲ್ಲಿ ಯಾರೇ ಇದ್ದರೂ ಅವರ ಬಂಧನ ಆಗಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಲಿ’ ಎಂದರು.

‘ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಹೇಳಿ ಹಣ ಪಡೆದಿರುವುದನ್ನು ನಾವೂ ಗಂಭೀರವಾಗಿ ಪರಿಗಣಿಸುತ್ತೇವೆ. ಹಲವು ಸಂಘಟನೆಯವರು ಹೋರಾಟ ಮಾಡುತ್ತಾರೆ. ಅವರಿಗೂ–ಬಿಜೆಪಿಗೂ ಸಂಬಂಧ ಇದೆ ಎಂದು ಹೇಳುವುದು ಸರಿಯಲ್ಲ.’ ಎಂದರು.

ಕೆಪಿಎಸ್‌ಸಿ ಕಾರ್ಯದರ್ಶಿ ವರ್ಗ: ಅಭ್ಯರ್ಥಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಪಾರದರ್ಶಕ ವ್ಯವಸ್ಥೆ ಜಾರಿಗೆ ತರಲು ಮುಂದಾಗಿದ್ದ ಕಾರ್ಯದರ್ಶಿ ಸುರಳ್ಕರ್ ವಿಕಾಸ್ ಕಿಶೋರ್ ಅವರನ್ನು 14 ತಿಂಗಳಲ್ಲಿ ವರ್ಗಾವಣೆ ಮಾಡಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಅಭ್ಯರ್ಥಿಗಳ ಆಯ್ಕೆಗೆ ‘ಸಂದರ್ಶನ ಸಮಿತಿ’ ರಚನೆಯ ಸ್ವರೂಪವೂ ಸೇರಿದಂತೆ ಕೆಲವು ವಿಚಾರಗಳಲ್ಲಿ ತೆಗೆದುಕೊಂಡಿದ್ದ ಕ್ರಮಗಳ ಕಾರಣಕ್ಕೆ ಸುರಳ್ಕರ್ ಅವರು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ಕೆಂಗಣ್ಣಿಗೆ ಗುರಿಯಾಗಿದ್ದರು. ಈ ವಿಚಾರ ಪರಸ್ಪರ ಸಂಘರ್ಷಕ್ಕೂ ಕಾರಣವಾಗಿ, ಮುಖ್ಯ ಕಾರ್ಯದರ್ಶಿ ಮತ್ತು ಮುಖ್ಯಮಂತ್ರಿಯವರ ಅಂಗಳಕ್ಕೂ ತಲುಪಿತ್ತು. ಸುರಳ್ಕರ್ ಅವರ ವರ್ಗಾವಣೆಗೆ ಇದೇ ಕಾರಣ ಎಂದು ಹೇಳಲಾಗಿದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಗ್ರೇಡ್–1 ಹುದ್ದೆಗಳ ನೇಮಕಾತಿಗೆ 1:3 ಅನುಪಾತದಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಶುಕ್ರವಾರ (ಸೆ. 15) ಮತ್ತು ಶನಿವಾರ ಸಂದರ್ಶನ ನಿಗದಿಯಾಗಿದೆ. ಈ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲು ಸುರಳ್ಕರ್ ಮುಂದಾಗಿದ್ದರು. ಆ ಬೆನ್ನಲ್ಲೇ ಅವರ ವರ್ಗಾವಣೆ ಆದೇಶ ಹೊರಬಿದ್ದಿದೆ. ಅಲ್ಲದೆ, ಅವರ ಜಾಗಕ್ಕೆ ಕೆ.ಎಸ್. ಲತಾ ಕುಮಾರಿ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಸುರಳ್ಕರ್ ಅವರ ವರ್ಗಾವಣೆ ಖಂಡಿಸಿ ನೂರಾರು ಉದ್ಯೋಗಾಕಾಂಕ್ಷಿಗಳು ಕೆಪಿಎಸ್‌ಸಿ ಮುಂಭಾಗದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

‘ನೇಮಕಾತಿಯಲ್ಲಿ ಯಾವುದೇ ಅಕ್ರಮ, ಅವ್ಯವಹಾರಕ್ಕೆ ಆಸ್ಪದ ಇಲ್ಲದಂತೆ ಪ್ರಾಮಾಣಿಕ, ಪಾರದರ್ಶಕ ವ್ಯವಸ್ಥೆ ಜಾರಿಗೊಳಿಸಿರುವ ಮತ್ತು ಆ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಲು ಯೋಜನೆ ರೂಪಿಸಿದ್ದ ಸುರಳ್ಕರ್ ಅವರನ್ನು ಕಾರ್ಯದರ್ಶಿಯ ಹುದ್ದೆಯಲ್ಲಿಯೇ ಮುಂದುವರಿಸಬೇಕು’ ಎಂದು ಪ್ರತಿಭಟನೆಕಾರರು ಆಗ್ರಹಿಸಿದರು

ಅಲೋಕ್ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ಬಾರ್ ಮಾಲೀಕರು ಮತ್ತು ಗ್ರಾಹಕರ ನಡುವೆ ನಡೆದಿದ್ದ ಗಲಾಟೆ ಸಂಬಂಧ ಪ್ರಕರಣ ಮುಕ್ತಾಯಗೊಳಿಸಲು ಲಂಚಕ್ಕೆ ಬೇಡಿಕೆಯಿಟ್ಟಿದ್ದಾರೆ ಎಂಬ ಆರೋಪ ಎದುರಿಸುತ್ತಿದ್ದ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ವಿರುದ್ಧದ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿ ಆದೇಶಿಸಿದೆ.

ತಮ್ಮ ವಿರುದ್ಧದ ಪ್ರಕರಣ ಮತ್ತು ಈ ಸಂಬಂಧ ವಿಚಾರಣಾ ಪ್ರಕ್ರಿಯೆಯನ್ನು ರದ್ದು ಮಾಡುವಂತೆ ಕೋರಿ ಅಲೋಕ್ ಕುಮಾರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಅರ್ಜಿದಾರ ಐಪಿಎಸ್ ಅಧಿಕಾರಿಯ ವಿರುದ್ಧ ವಿಚಾರಣೆಗೆ ಪರಿಗಣಿಸುವುದಕ್ಕಾಗಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ಲೋಕಾಯುಕ್ತ ವಿಚಾರಣಾ ನ್ಯಾಯಾಲಯ ಸಂಜ್ಞೆಯನ್ನು ಪರಿಗಣಿಸಿದೆ ಎಂದು ಅಭಿಪ್ರಾಯ ಪಟ್ಟು ಪ್ರಕರಣವನ್ನು ರದ್ದು ಪಡಿಸಿದೆ.

ಆದರೆ, ಅರ್ಜಿದಾರರ ವಿರುದ್ಧ ತನಿಖೆಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದ ಬಳಿಕ ವಿಚಾರಣೆಗೆ ಪರಿಗಣಿಸಲು ವಿಚಾರಣಾ ನ್ಯಾಯಾಲಯ ಸ್ವತಂತ್ರವಾಗಿ ರಲಿದೆ ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ನಟನೆಗೆ ಚನ್ನನಾಯ್ಕಗೆ ₹ 1 ಲಕ್ಷ!

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಬಿಜೆಪಿ ಟಿಕೆಟ್ ಕೊಡಿಸುವುದಾಗಿ ನಂಬಿಸಿ ವಂಚಿಸಿದ್ದ ಪ್ರಕರಣದ 5ನೇ ಆರೋಪಿ ಬಿ.ಎಲ್.ಚನ್ನನಾಯ್ಕ ತಾಲ್ಲೂಕಿನ ಮಾಚಿಹಳ್ಳಿ ತಾಂಡಾ ನಿವಾಸಿಯಾಗಿದ್ದು, ಕೃಷಿ ಕುಟುಂಬಕ್ಕೆ ಸೇರಿದ್ದಾರೆ.

ಬಿ.ಎಲ್. ಚನ್ನನಾಯ್ಕ

‘ನಾನು 7 ಭಾಷೆಗಳನ್ನು ಬಲ್ಲವನು. ಆದ್ದರಿಂದ ಗಗನ್ ಮತ್ತು ಧನಂಜಯ ನನ್ನನ್ನು ಪರಿಚಯ ಮಾಡಿಕೊಂಡರು. ಬಳಿಕ ಚೈತ್ರಾ ಅವರೊಟ್ಟಿಗೆ ಹಿಂದಿಯಲ್ಲಿ ಮಾತನಾಡಿಸಿ ಟೆಸ್ಟ್ ನಡೆಸಿದ್ದರು. ಕಡೂರು ಮನೆಯಿಂದ ನನ್ನನ್ನು ಬೆಂಗಳೂರಿಗೆ ಕರೆ ತಂದರು. ಅವರು ಹೇಳಿಕೊಟ್ಟಂತೆ ಟಿಕೆಟ್ ಕೊಡಿಸುವ ವಿಚಾರವಾಗಿ ಗೋವಿಂದ ಪೂಜಾರಿ ಅವರ ಜೊತೆ ನಟಿಸಿದ್ದಕ್ಕೆ ನನಗೆ ₹1 ಲಕ್ಷ ಕೊಟ್ಟಿದ್ದರು. ನಾನು ಅವರನ್ನು ನಂಬಿ ಮೋಸ ಹೋಗಿದ್ದೇನೆ’ ಎಂದು ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಚನ್ನನಾಯ್ಕ ತಿಳಿಸಿದ್ದಾರೆ.

2018ರ ಚುನಾವಣೆಯಲ್ಲಿ ಚನ್ನನಾಯ್ಕ ಹರಪನಹಳ್ಳಿ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಸೋತಿದ್ದರು. 7ನೇ ತರಗತಿ ಉತ್ತೀರ್ಣರಾಗಿದ್ದು ಕೃಷಿಕ ಎಂದು ಆಯೋಗಕ್ಕೆ ಸಲ್ಲಿಸಿದ್ದ ಅಫಿಡೆವಿಟ್ ನಲ್ಲಿ ಹೇಳಿಕೊಂಡಿದ್ದರು. ಕೆಲ ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿರುವ ಚನ್ನನಾಯ್ಕ ಈಚೆಗೆ ಸ್ವಗ್ರಾಮಕ್ಕೆ ಬಂದು ವಾಪಸ್ ಹೋಗಿದ್ದಾರೆ ಎಂದು ತಿಳಿದುಬಂದಿದೆ.

₹ 5 ಕೋಟಿ ವಂಚನೆ: ಮತ್ತೊಬ್ಬ ಸೆರೆ

ಒಂದನೇ ಪುಟದಿಂದ

‘ದೂರುದಾರರನ್ನೇ ಬೆದರಿಸಿದ್ದ ಚೈತ್ರಾ, ‘ನನಗೆ ನ್ಯಾಯಾಧೀಶರು ಪರಿಚಯವಿದ್ದಾರೆ. ಅವರಿಗೆ ಹೇಳಿ ನಿಮ್ಮನ್ನು ಶಾಶ್ವತವಾಗಿ ಜೈಲಿಗೆ ಕಳುಹಿಸುತ್ತೇನೆ. ಭೂಗತ ಪಾತಕಿಗಳ ಸಂಪರ್ಕವೂ ಇದ್ದು, ಅವರಿಗೆ ಹೇಳಿ ನಿಮ್ಮನ್ನು ಮುಗಿಸುತ್ತೇನೆ’ ಎಂದಿದ್ದರು. ಇದಕ್ಕೆ ಹೆದರದ ದೂರುದಾರ, ಹಣ ನೀಡುವಂತೆ ಪಟ್ಟು ಹಿಡಿದಿದ್ದರು. ವಿಷದ ಬಾಟಲಿ ತೋರಿಸಿದ್ದ ಚೈತ್ರಾ, ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸಿದ್ದರು. ನಂತರ, ಹಣ ವಾಪಸು ನೀಡಲು ಕಾಲಾವಕಾಶ ಪಡೆದಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಸುಪ್ರೀಂ’ಗೆ ಪ್ರಜ್ವಲ್ ರೇವಣ್ಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಗೆ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಿ ಕರ್ನಾಟಕ ಹೈಕೋರ್ಟ್ ಹೊರಡಿಸಿರುವ ಆದೇಶ ಪ್ರಶ್ನಿಸಿ ಪ್ರಜ್ವಲ್ ರೇವಣ್ಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಹಾಸನ ಕ್ಷೇತ್ರದಿಂದ ಸಂಸದರಾಗಿ ಪ್ರಜ್ವಲ್ ರೇವಣ್ಣ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಿ ನ್ಯಾಯಮೂರ್ತಿ ಕೆ. ನಟರಾಜನ್ ಅವರ ಪೀಠ ಸೆ.1ರಂದು ತೀರ್ಪು ನೀಡಿತ್ತು. ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವವರೆಗೆ ತಡೆಯಾಜ್ಞೆ ನೀಡುವಂತೆ ಕೋರಿ ಪ್ರಜ್ವಲ್ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನೂ ಹೈಕೋರ್ಟ್ ವಜಾಗೊಳಿಸಿತ್ತು. ಮೇಲ್ಮನವಿಯ ವಿಚಾರಣೆ ಶುಕ್ರವಾರ ಅಥವಾ ಸೋಮವಾರ ನಡೆಯುವ ಸಾಧ್ಯತೆ ಇದೆ. ಪ್ರಜ್ವಲ್ ಪರ ಹಿರಿಯ ವಕೀಲರಾದ ಮುಕುಲ್ ರೋಹಟಗಿ ಹಾಗೂ ವೇಣುಗೋಪಾಲ್ ವಾದಿಸಿದರು.

‘ಕಾವೇರಿ ನೀರು ಹರಿಸಲು ಸಾಧ್ಯವಿಲ್ಲ’

ಕೇಂದ್ರ ಜಲಶಕ್ತಿ ಸಚಿವರಿಗೆ ರಾಜ್ಯದ ಪತ್ರ • ಶೆಖಾವತ್ ಭೇಟಿ ಮಾಡಿದ ಡಿಕೆಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ನೀರಿನ ಮೇಲೆ ಅವಲಂಬಿತರಾಗಿರುವ ಜನರು ಹಾಗೂ ಜಾನುವಾರುಗಳ ಹಿತಾಸಕ್ತಿಯನ್ನು ಸಂಕಷ್ಟಕ್ಕೆ ದೂಡಿ ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ಅನುಷ್ಠಾನ ಮಾಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರ ತಿಳಿಸಿದೆ.

ಮುಖ್ಯಮಂತ್ರಿ ಬರೆದ ಪತ್ರವನ್ನು ಗಜೇಂದ್ರ ಸಿಂಗ್ ಶೆಖಾವತ್ ಅವರಿಗೆ ಡಿ.ಕೆ. ಶಿವಕುಮಾರ್ ಹಸ್ತಾಂತರಿಸಿದರು

ಕರ್ನಾಟಕದ ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರು ರಾಜಸ್ಥಾನದ ಜೈಪುರದಲ್ಲಿ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರನ್ನು ಗುರುವಾರ ಭೇಟಿ ಮಾಡಿ ರಾಜ್ಯದ ನಿಲುವನ್ನು ತಿಳಿಸಿದರು. ಕರ್ನಾಟಕದಲ್ಲಿ ಕಾವೇರಿ ಜಲ ಸಂಕಷ್ಟ ಪರಿಸ್ಥಿತಿ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಜಲಶಕ್ತಿ ಸಚಿವರಿಗೆ ಬರೆದಿರುವ ಪತ್ರವನ್ನು ಹಸ್ತಾಂತರಿಸಿದರು.

ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸಿನ ಪ್ರಕಾರ, 15 ದಿನಗಳ ಕಾಲ ಕೆಆರ್‌ಎಸ್ ಹಾಗೂ ಕಬಿನಿಯಿಂದ 5000 ಕ್ಯೂಸೆಕ್ ನೀರನ್ನು ಬಿಳಿಗುಂಡ್ಲುವಿನಿಂದ ಹರಿಸುವುದು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿರುವ ರಾಜ್ಯ ಸರ್ಕಾರ, ಕರ್ನಾಟಕದ ಮನವಿಯನ್ನು ಪರಿಗಣಿಸಿ ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ಮರುಪರಿಶೀಲಿಸುವಂತೆ ಕೋರಿದೆ.

ಜೂನ್ ತಿಂಗಳಿನಿಂದ ಸೆಪ್ಟೆಂಬರ್ ಮಧ್ಯದವರೆಗೂ 92 ದಿನ 100 ಟಿಎಂಸಿ ಅಡಿ ನೀರನ್ನು ತಮಿಳುನಾಡು ಬಳಸಿಕೊಂಡಿದೆ. ಇದು ಹಿಂದೆ 1987-88, 2002-03, 2012-13, 2016-17 ಹಾಗೂ 2017-18ರ ಬರಪರಿಸ್ಥಿತಿಯಲ್ಲಿ ಬಳಕೆಯಾದ ನೀರಿಗಿಂತಲೂ ಹೆಚ್ಚಾಗಿದೆ. ಕರ್ನಾಟಕದ ಜಲಾಶಯಗಳಲ್ಲಿ ಸಂಕಷ್ಟದ ಸ್ಥಿತಿಯಿದ್ದರೂ ತಮಿಳುನಾಡು ಭತ್ತವನ್ನು ಬೆಳೆಯುತ್ತಿದೆ ಎಂದು ರಾಜ್ಯ ದೂರಿದೆ.

ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ, ಕಾವೇರಿ ಜಲಾಯನ ಪ್ರದೇಶದಲ್ಲಿ ಸೆ.24ವರೆಗೆ ಮಳೆಯಾಗುವ ಲಕ್ಷಣಗಳಿಲ್ಲ. ಮೆಟ್ಟೂರು ಜಲಾಶಯದಲ್ಲಿ ಪ್ರಸ್ತುತ 24 ಟಿಎಂಸಿ ಅಡಿ ನೀರು ಸಂಗ್ರಹವಿದೆ. ಪ್ರಸ್ತುತ ಬಿಡುಗಡೆಯಾಗಿರುವ ನೀರನ್ನು ಪರಿಗಣಿಸಿದರೆ, ತಮಿಳುನಾಡಿನ ಅವಶ್ಯಕತೆಯನ್ನು ಪೂರೈಸಲು ಸಾಕಾಗುವಷ್ಟು ನೀರು ಲಭ್ಯವಿದೆ. ಕರ್ನಾಟಕದ ಬೆಳೆಗಳ ರಕ್ಷಣೆಗೆ 70 ಟಿಎಂಸಿ ಅಡಿ, ಕುಡಿಯುವ ನೀರಿಗೆ 33 ಟಿಎಂಸಿ ಅಡಿ ಹಾಗೂ ಕೈಗಾರಿಕೆಗಳಿಗೆ 3 ಟಿಎಂಸಿ ನೀರು ಅಗತ್ಯವಿದೆ. ನಮ್ಮಲ್ಲಿ 53 ಟಿಎಂಸಿ ಅಡಿ ಮಾತ್ರ ಸಂಗ್ರಹವಿದ್ದು, ನಮ್ಮ ಅವಶ್ಯಕತೆ ಪೂರೈಸಿಕೊಳ್ಳಲು ಈ ಸಂಗ್ರಹ ಸಾಕಾಗಲ್ಲ ಎಂದು ರಾಜ್ಯ ಸರ್ಕಾರ ಹೇಳಿದೆ.

ಇನ್ನೊಂದೆಡೆ, ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ತಿರಸ್ಕರಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ರಾಜ್ಯ ಪತ್ರ ಬರೆದಿದೆ.

ಈ ಸಂಬಂಧ ಗುರುವಾರ ಪತ್ರ ಬರೆದಿರುವ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಲ್ಲಿ ಶೇ 54ರಷ್ಟು ಒಳ ಹರಿವು ಕಡಿಮೆ ಆಗಿದೆ. ಇದು ಕಳೆದ 30 ವರ್ಷಗಳಲ್ಲೇ ಕಡಿಮೆ ಎಂದು ಗಮನ ಸೆಳೆದಿದ್ದಾರೆ.

ಎನ್‌ಐಎಯಿಂದ ಯುವಕನ ವಿಚಾರಣೆ

ಪ್ರಜಾವಾಣಿ ವಾರ್ತೆ

ಯಾದಗಿರಿ: ಜಾರ್ಖಂಡ್‌ನ ರಾಂಚಿಯಲ್ಲಿ ಬಂಧನಕ್ಕೊಳಗಾಗಿದ್ದ ಐಎಸ್ ಉಗ್ರ ಫೈಯಾಜ್ ಜೊತೆ ಸಂಪರ್ಕವಿದ್ದ ಆರೋಪದಡಿ ಜಿಲ್ಲೆ ಶಹಾಪುರದ ಖಾಲೀದ್ ಅಹ್ಮದ್ ಮನೆಯ ಮೇಲೆ ಎನ್‌ಐಎ ಅಧಿಕಾರಿಗಳು ಗುರುವಾರ ದಾಳಿ ನಡೆಸಿ ದಾಖಲೆ ಪರಿಶೀಲಿಸಿದ್ದಾರೆ.

ಖಾಲೀದ್

ಖಾಲೀದ್ ಅಹ್ಮದ್ (22) ಗ್ಯಾರೇಜ್‌ನಲ್ಲಿ ಕೆಲಸ ಮಾಡುವುದರ ಜೊತೆಗೆ ಹಣ್ಣಿನ ವ್ಯಾಪಾರ ಮಾಡುತ್ತಿದ್ದಾರೆ. ಉಗ್ರ ಫೈಯಾಜ್ ಜೊತೆ ಖಾಲೀದ್ ಇನ್‌ಸ್ಟಾಗ್ರಾಂನಲ್ಲಿ ಸಂಪರ್ಕದಲ್ಲಿದ್ದರಿಂದ ವಿಚಾರಣೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ಕಳೆದ ಜುಲೈನಲ್ಲಿ ರಾಂಚಿಯಲ್ಲಿ ಐಸಿಸ್ ಉಗ್ರ ಸಂಘಟನೆಗೆ ಸೇರಿದ ಫೈಯಾಜ್‌ನನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದರು.

ತೀವ್ರ ಬರಪೀಡಿತ 161 ತಾಲ್ಲೂಕುಗಳ ಪಟ್ಟಿ

ಜಿಲ್ಲೆ	ತಾಲ್ಲೂಕು
ಬೆಂಗಳೂರು ನಗರ	ಬೆಂಗಳೂರು ಪೂರ್ವ
ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ
ರಾಮನಗರ	ಕನಕಪುರ, ರಾಮನಗರ, ಹಾರೋಹಳ್ಳಿ
ಕೋಲಾರ	ಬಂಗಾರಪೇಟೆ, ಕೋಲಾರ, ಮುಳಬಾಗಿಲು, ಶ್ರೀನಿವಾಸಪುರ, ಕೆಜಿಎಫ್
ಚಿಕ್ಕಬಳ್ಳಾಪುರ	ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ, ಶಿಡ್ಲಘಟ್ಟ
ತುಮಕೂರು	ಚಿಕ್ಕನಾಯಕನಹಳ್ಳಿ, ಗುಬ್ಬಿ, ಕೊರಟಗೆರೆ, ಕುಣಿಗಲ್, ಮಧುಗಿರಿ, ಪಾವಗಡ, ಶಿರಾ, ತಿಪಟೂರು, ತುರುವೆಕೆರೆ
ಚಿತ್ರದುರ್ಗ	ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ, ಮೊಳಕಾಲ್ಮುರು
ದಾವಣಗೆರೆ	ಚನ್ನಗಿರಿ, ದಾವಣಗೆರೆ, ಹರಿಹರ, ಹೊನ್ನಾಳಿ, ಜಗಳೂರು, ನ್ಯಾಮತಿ
ಮೈಸೂರು	ಎಚ್.ಡಿ. ಕೋಟೆ, ಹುಣಸೂರು, ಮೈಸೂರು, ನಂಜನಗೂಡು, ಪಿರಿಯಾಪಟ್ಟಣ, ಟಿ. ನರಸೀಪುರ, ಸರಗೂರು, ಸಾಲಿಗ್ರಾಮ
ಮಂಡ್ಯ	ಕೃಷ್ಣರಾಜಪೇಟೆ, ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣ
ಬಳ್ಳಾರಿ	ಬಳ್ಳಾರಿ, ಸಂಡೂರು, ಶಿರಗುಪ್ಪ, ಕುರುಗೋಡು, ಕಂಪ್ಲಿ
ಕೊಪ್ಪಳ	ಗಂಗಾವತಿ, ಕೊಪ್ಪಳ, ಕುಷ್ಟಗಿ, ಯಲಬುರ್ಗಾ, ಕಾರಟಗಿ, ಕುಕನೂರು, ಕನಕಗಿರಿ
ರಾಯಚೂರು	ಲಿಂಗಸುಗೂರು, ಮಾನ್ವಿ, ರಾಯಚೂರು, ಶಿರವಾರ
ಕಲಬುರಗಿ	ಅಫಜಲಪುರ, ಆಳಂದ, ಚಿಂಚೋಳಿ, ಚಿತ್ತಾಪುರ, ಕಲಬುರಗಿ, ಜೇವರ್ಗಿ, ಸೇಡಂ, ಕಾಳಗಿ, ಕಮಲಾಪುರ, ಯಡ್ರಾಮಿ, ಶಹಾಬಾದ್
ಬೀದರ್	ಭಾಲ್ಕಿ, ಬಸವಕಲ್ಯಾಣ, ಹುಲಸೂರು
ಬೆಳಗಾವಿ	ಅಥಣಿ, ಬೈಲಹೊಂಗಲ, ಚಿಕ್ಕೋಡಿ, ಗೋಕಾಕ್, ಹುಕ್ಕೇರಿ, ರಾಮದುರ್ಗ, ರಾಯಬಾಗ, ಸವದತ್ತಿ, ಕಿತ್ತೂರು, ನಿಪ್ಪಾಣಿ, ಕಾಗವಾಡ, ಮೂಡಲಗಿ, ಯರಗಟ್ಟಿ
ಬಾಗಲಕೋಟೆ	ಬಾದಾಮಿ, ಬಾಗಲಕೋಟೆ, ಬೀಳಗಿ, ಹುನಗುಂದ, ಜಮಖಂಡಿ, ಮುಧೋಳ, ಗುಳೇದಗುಡ್ಡ, ಇಳಕಲ್, ರಬಕವಿ ಬನಹಟ್ಟಿ
ವಿಜಯಪುರ	ಬಸವನ ಬಾಗೇವಾಡಿ, ವಿಜಯಪುರ, ಇಂಡಿ, ಮುದ್ದೇಬಿಹಾಳ, ಸಿಂದಗಿ, ಬಬಲೇಶ್ವರ, ಚಡಚಣ, ನಿಡಗುಂದಿ, ತಾಳಿಕೋಟೆ, ಕೊಲ್ಹಾರ, ದೇವರ ಹಿಪ್ಪರಗಿ, ಆಲಮೇಲ
ಗದಗ	ಗದಗ, ನರಗುಂದ, ರೋಣ, ಶಿರಹಟ್ಟಿ, ಗಜೇಂದ್ರಗಡ, ಲಕ್ಷ್ಮೇಶ್ವರ
ಹಾವೇರಿ	ಹಾವೇರಿ, ಹಿರೇಕೆರೂರು, ರಾಣೆಬೆನ್ನೂರು, ಸವಣೂರು, ರಟ್ಟಿಹಳ್ಳಿ
ಧಾರವಾಡ	ಧಾರವಾಡ, ಹುಬ್ಬಳ್ಳಿ, ಕುಂದಗೋಳ, ನವಲಗುಂದ, ಹುಬ್ಬಳ್ಳಿನಗರ
ಶಿವಮೊಗ್ಗ	ಭದ್ರಾವತಿ, ಹೊಸನಗರ, ಸಾಗರ, ಶಿಕಾರಿಪುರ, ಶಿವಮೊಗ್ಗ, ಸೊರಬ, ತೀರ್ಥಹಳ್ಳಿ
ಹಾಸನ	ಅರಕಲಗೂಡು
ಚಿಕ್ಕಮಗಳೂರು	ಕಡೂರು, ಅಜ್ಜಂಪುರ
ಕೊಡಗು	ಮಡಿಕೇರಿ, ವಿರಾಜಪೇಟೆ, ಕುಶಾಲನಗರ
ಉಡುಪಿ	ಕಾರ್ಕಳ
ಉತ್ತರ ಕನ್ನಡ	ಹಳಿಯಾಳ, ಮುಂಡಗೋಡ, ಶಿರಸಿ, ಯಲ್ಲಾಪುರ
ಯಾದಗಿರಿ	ಶಹಾಪುರ, ವಡಗೇರಾ
ವಿಜಯನಗರ	ಹೊಸಪೇಟೆ, ಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಕೊಟ್ಟೂರು, ಕೂಡ್ಲಿಗಿ

ಸಾಧಾರಣ ಬರಪೀಡಿತ 34 ತಾಲ್ಲೂಕುಗಳು

ಜಿಲ್ಲೆ	ತಾಲ್ಲೂಕು
ಬೆಂಗಳೂರು ನಗರ	ಆನೇಕಲ್, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಯಲಹಂಕ
ರಾಮನಗರ	ಚನ್ನಪಟ್ಟಣ, ಮಾಗಡಿ
ಕೋಲಾರ	ಮಾಲೂರು
ತುಮಕೂರು	ತುಮಕೂರು
ಚಾಮರಾಜನಗರ	ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು
ರಾಯಚೂರು	ದೇವದುರ್ಗ, ಮಸ್ಕಿ
ಹಾಸನ	ಬೇಲೂರು, ಚನ್ನರಾಯಪಟ್ಟಣ, ಹೊಳೆನರಸೀಪುರ, ಸಕಲೇಶಪುರ
ಚಿಕ್ಕಮಗಳೂರು	ಕೊಪ್ಪ, ಎನ್.ಆರ್. ಪುರ, ಶೃಂಗೇರಿ, ಕಳಸ
ಕೊಡಗು	ಸೋಮವಾರಪೇಟೆ
ದಕ್ಷಿಣ ಕನ್ನಡ	ಮಂಗಳೂರು, ಮೂಡುಬಿದಿರೆ
ಉಡುಪಿ	ಬ್ರಹ್ಮಾವರ
ಉತ್ತರ ಕನ್ನಡ	ಅಂಕೋಲ, ಭಟ್ಕಳ, ಕಾರವಾರ, ಕುಮಟಾ, ಜೋಯಿಡಾ
ಯಾದಗಿರಿ	ಸುರಪುರ, ಯಾದಗಿರಿ, ಗುರುಮಠಕಲ್, ಹುಣಸಗಿ

161 ತಾಲ್ಲೂಕುಗಳಲ್ಲಿ ತೀವ್ರ, 34ರಲ್ಲಿ ಸಾಧಾರಣ ಬರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಒಟ್ಟು 31 ಜಿಲ್ಲೆಗಳ 236 ತಾಲ್ಲೂಕುಗಳ ಪೈಕಿ 195 ತಾಲ್ಲೂಕುಗಳನ್ನು ಬರಪೀಡಿತವೆಂದು ಸರ್ಕಾರ ಘೋಷಿಸಿದೆ. ಈ ಪೈಕಿ, 161 ತಾಲ್ಲೂಕುಗಳಲ್ಲಿ ತೀವ್ರ, 34 ತಾಲ್ಲೂಕುಗಳಲ್ಲಿ ಸಾಧಾರಣ ಬರ ಪರಿಸ್ಥಿತಿ ಕಂಡುಬಂದಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

‘ಎಸ್‌ಡಿಆರ್‌ಎಫ್ (ರಾಜ್ಯ ವಿಪತ್ತು ಪರಿಹಾರ ನಿಧಿ) ಮತ್ತು ಎನ್‌ಡಿಆರ್‌ಎಫ್ (ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ) ಮಾರ್ಗಸೂಚಿಯ ಪ್ರಕಾರ ಬರಪೀಡಿತ ತಾಲ್ಲೂಕುಗಳನ್ನು ಘೋಷಿಸಲಾಗಿದೆ. ಈ ತಾಲ್ಲೂಕುಗಳಿಗೆ ಬರ ಪರಿಹಾರ ಒದಗಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬರ ಪರಿಸ್ಥಿತಿ ಕಂಡುಬಂದಿರುವ ತಾಲ್ಲೂಕುಗಳಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಬರ ನಿರ್ವಹಣೆಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ನಿಯಮಗಳ ಅನ್ವಯ ಮಾರ್ಗಸೂಚಿಗಳನ್ನು ನೀಡಲಾಗುವುದು ಎಂದು ಕಂದಾಯ ಇಲಾಖೆ ಹೇಳಿದೆ.

ರಾಜ್ಯದಲ್ಲಿ ಜೂನ್ ತಿಂಗಳಲ್ಲಿ ವಾಡಿಕೆಗಿಂತ ಶೇ 56 ಮಳೆ ಕೊರತೆ ಉಂಟಾಗಿತ್ತು. ಜುಲೈ ತಿಂಗಳಲ್ಲಿ ವಾಡಿಕೆಗಿಂತ ಶೇ 29ರಷ್ಟು ಹೆಚ್ಚು ಮಳೆಯಾಗಿದ್ದರೂ ಕೇವಲ ಒಂದು ವಾರ ಮಾತ್ರ ಕೇಂದ್ರೀಕೃತವಾಗಿತ್ತು. ಆಗಸ್ಟ್ ತಿಂಗಳಲ್ಲಿ ವಾಡಿಕೆಗಿಂತ ಶೇ 73 ಮಳೆ ಕೊರತೆಯಾಗಿದ್ದು, ಕಳೆದ 125 ವರ್ಷಗಳಲ್ಲಿ ಅತಿ ಕಡಿಮೆ ಮಳೆ ದಾಖಲಾಗಿದೆ. ಬರ ಘೋಷಣೆಗೆ ಕೇಂದ್ರ ಸರ್ಕಾರ ನಿಗದಿಪಡಿಸಿದ್ದ ಮಾನದಂಡಗಳ ಅನ್ವಯ ಜಿಲ್ಲಾಧಿಕಾರಿಗಳಿಂದ ಬೆಳೆ ಹಾನಿ ಸಮೀಕ್ಷೆಯ ವರದಿ ಪಡೆಯಲಾಗಿತ್ತು. ಬಳಿಕ ಬರ ಪರಿಸ್ಥಿತಿ ಕಂಡುಬಂದಿರುವ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸುವಂತೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆಯ ಸಚಿವ ಸಂಪುಟ ಉಪ ಸಮಿತಿ ಶಿಫಾರಸು ಮಾಡಿತ್ತು.

ತೆರಿಗೆ ಸಂಗ್ರಹ: ರಾಜ್ಯ ನಂ. 1

ಒಂದನೇ ಪುಟದಿಂದ

‘ದೇಶದ ಸರಾಸರಿ ತೆರಿಗೆ ಸಂಗ್ರಹ ಬೆಳವಣಿಗೆ ದರ ಶೇ 15ರಷ್ಟು ಮಾತ್ರ ಇದೆ. ಅದಕ್ಕೆ ಹೋಲಿಸಿದರೆ ತೆರಿಗೆ ಸಂಗ್ರಹ ವಿಚಾರದಲ್ಲಿ ಗಮನಾರ್ಹ ಸಾಧನೆ ಆಗಿದೆ. ಹಾಗೆಂದು, ಇಷ್ಟಕ್ಕೆ ಸಮಾಧಾನಪಟ್ಟುಕೊಳ್ಳದೆ ತೆರಿಗೆ ವಂಚನೆ ಪ್ರಕರಣಗಳನ್ನು ಹೆಚ್ಚೆಚ್ಚು ಪತ್ತೆ ಹಚ್ಚಿ ತೆರಿಗೆ ಸಂಗ್ರಹ ಗುರಿಯನ್ನು ದಾಟಿ ಸಾಧನೆ ಮಾಡುವ ಅವಕಾಶಗಳಿವೆ. ಅದನ್ನು ಸಾಧಿಸಿ ತೋರಿಸಬೇಕು’ ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಕಿವಿಮಾತು ಹೇಳಿದರು.

ಇಲಾಖೆಗೆ ಪ್ರಸಕ್ತ ಸಾಲಿನಲ್ಲಿ ಶೇ 24ರ ಬೆಳವಣಿಗೆ ಗುರಿ ನೀಡಲಾಗಿದೆ. ಈ ಗುರಿ ಮೀರಬೇಕು. ಕಾರ್ಯಚಟುವಟಿಕೆಯಲ್ಲಿ ಹಿಂದೆ ಉಳಿದವರು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು. ಜಾಗೃತ ದಳದವರೂ ಸಹಕರಿಸಬೇಕು. ಎರಡು ತಿಂಗಳ ನಂತರ ಮತ್ತೆ ಪ್ರಗತಿ ಪರಿಶೀಲಿಸಲಾಗುವುದು. ಆ ವೇಳೆಗೆ ಇನ್ನಷ್ಟು ಪ್ರಗತಿಯ ವರದಿ ನೀಡಿ. ಮುಂದಿನ ಸಭೆ ವೇಳೆಗೆ ಒಟ್ಟಾರೆ ಪರಿಸ್ಥಿತಿ ಈಗಿರುವುದಕ್ಕಿಂತ ಹೆಚ್ಚು ಆಶಾದಾಯಕ ಆಗಿರುವಂತೆ ಕ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

‘ಸಾರಿಗೆ, ಗಣಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆ ತೆರಿಗೆ ಸಂಗ್ರಹದಲ್ಲಿ ಆಶಾದಾಯಕ ಬೆಳವಣಿಗೆ ಕಾಣುತ್ತಿದೆ. ಆದರೆ ಗುರಿ ಮುಟ್ಟುವ ದಿಕ್ಕಿನಲ್ಲಿ ಸಮರ್ಪಕ ಕಾರ್ಯಯೋಜನೆಯನ್ನು ರೂಪಿಸಿಕೊಳ್ಳಿ’ ಎಂದು ಮೂರೂ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

ಶಕ್ತಿ ಯೋಜನೆಯಿಂದಾಗಿ ಪುರುಷ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಾಗಿ ಯೋಜನೆ ಯಶಸ್ವಿ ಆಗಿದೆ ಎನ್ನುವ ಮಾಹಿತಿಯನ್ನು ಅಧಿಕಾರಿಗಳಿಂದ ಪಡೆದ ಮುಖ್ಯಮಂತ್ರಿ, ಮೆಚ್ಚುಗೆ ವ್ಯಕ್ತಪಡಿಸಿದರು.

ಹೊಸ ಬಸ್‌ಗಳ ಖರೀದಿ ಬಳಿಕ ಹೊಸ ಚಾಲಕರು ಮತ್ತು ನಿರ್ವಾಹಕರ ಅಗತ್ಯ ಬೀಳುತ್ತದೆ. ಅವರ ನೇಮಕದ ಕುರಿತು ಪ್ರತ್ಯೇಕ ಸಭೆ ನಡೆಸಲು ಸಭೆ ನಿರ್ಧರಿಸಿತು.

ಹೋರಾಟಗಾರರ ಸಭೆಯಲ್ಲಿ ಸಚಿವ ಎಚ್‌.ಕೆ. ಪಾಟೀಲ

ಅರಣ್ಯವಾಸಿ ಪ್ರಮುಖರ ಜತೆ ಶೀಘ್ರವೇ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅರಣ್ಯವಾಸಿಗಳ ಸಮಸ್ಯೆಗೆ ಪರಿಹಾರ ಹುಡುಕುವ ಕೆಲಸವನ್ನು ನಾವು ಮಾಡಬೇಕು. ಅದಕ್ಕಾಗಿ ಅರಣ್ಯವಾಸಿಗಳ ಮುಖಂಡರೊಂದಿಗೆ ಇದೇ 27 ಅಥವಾ 28ರಂದು ಸಭೆ ನಡೆಸಲಾಗುವುದು’ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಸೆಂಟ್ರಲ್ ಕಾಲೇಜಿನ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಒಂದು ಲಕ್ಷ ಗಿಡ ನೆಡುವ ಛಾಯಾಚಿತ್ರ ಪ್ರದರ್ಶನವನ್ನು ಶಾಸಕ ಭೀಮಣ್ಣ ನಾಯ್ಕ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್, ರಾಜ್ಯ ಅರಣ್ಯ ಭೂಮಿಯ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಗುರುವಾರ ಹಮ್ಮಿಕೊಂಡಿದ್ದ ಲಕ್ಷ ವೃಕ್ಷ ನೆಟ್ಟಿರುವ ಛಾಯಾಚಿತ್ರ ಪ್ರದರ್ಶನ ಮತ್ತು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ಸಭೆಯಲ್ಲಿ ಅವರು ಮಾತನಾಡಿದರು.

‘ಗದಗದಲ್ಲಿ ದಶಕಗಳಿಂದ ಅರಣ್ಯವಾಸಿಗಳಾಗಿದ್ದವರಿಗೆ ಹೋರಾಟ ಮಾಡಿ ಭೂಮಿಯನ್ನು ಅನುಭವಿಸುವ ಹಕ್ಕು ಕೊಡಿಸಿದ್ದೆ. ಅದೇ ನಿಯಮವನ್ನು ರಾಜ್ಯದಾದ್ಯಂತ ಜಾರಿ ಮಾಡಬೇಕು ಎಂಬ ಆಸೆ ನನ್ನದಾಗಿತ್ತು. ಆದರೆ ಕಾನೂನಿನ ನ್ಯೂನತೆ ಮತ್ತು ಕೆಲ ಅಧಿಕಾರಿಗಳ ಕಾರಣದಿಂದ ಅದು ಸಾಧ್ಯವಾಗಿಲ್ಲ’ ಎಂದು ಹೇಳಿದರು.

‘ಗಣಿಗಾರಿಕೆ ಮಾಡಲು ಬಿಡುವ, ಕಾಡುಗಳ್ಳರಿಗೆ ಅವಕಾಶ ಕೊಡುವ ಅಧಿಕಾರಿಗಳು, ಕಾಡು ಕಾಪಾಡಿಕೊಂಡು ಬಂದಿರುವ ಅರಣ್ಯವಾಸಿಗಳ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ. ಇದನ್ನೆಲ್ಲ ನಿಯಂತ್ರಿಸಲಾಗುವುದು’ ಎಂದರು.

ವೇದಿಕೆಯ ಅಧ್ಯಕ್ಷ ಎ. ರವೀಂದ್ರ ನಾಯ್ಕ ಮಾತನಾಡಿ,‘ರಾಜ್ಯದಲ್ಲಿ 2.92 ಲಕ್ಷ ಅರಣ್ಯವಾಸಿಗಳು ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಅದರಲ್ಲಿ 2.42 ಲಕ್ಷ ಅರ್ಜಿಗಳು ತಿರಸ್ಕೃತಗೊಂಡಿವೆ. ಮೂರು ತಲೆಮಾರಿನ ದಾಖಲೆ ಬೇಕು ಎಂದು ಕೇಳಿದ್ದಾರೆ. ನಿಯಮದಲ್ಲಿ ಇಲ್ಲದ ದಾಖಲೆಗಳನ್ನು ಕೇಳುತ್ತಿದ್ದಾರೆ. ಅರಣ್ಯ ಹಕ್ಕು ಕಾಯ್ದೆ–2006 ಅನ್ನು ಯಥಾವತ್ ಜಾರಿ ಮಾಡಬೇಕು’ ಎಂದು ಆಗ್ರಹಿಸಿದರು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗ ಮೋಹನ್ ದಾಸ್ ಮಾತನಾಡಿ, ‘ಹೊಸ ಕಾಯ್ದೆ ಜಾರಿಗೆ ತನ್ನಿ, ಇರುವ ಕಾಯ್ದೆಗೆ ತಿದ್ದುಪಡಿ ತನ್ನಿ ಎಂದೆಲ್ಲ ಕೇಳುವುದು ಸರಿ. ನೀವೇ ಜಾರಿ ಮಾಡಿರುವ ಅರಣ್ಯ ಹಕ್ಕು ಕಾಯ್ದೆಯನ್ನು ಅನುಷ್ಠಾನಕ್ಕೆ ತನ್ನಿ ಎಂದು ಕೇಳುವ ಪರಿಸ್ಥಿತಿ ಉಂಟಾಗಿರುವುದು ನಾಚಿಕೆಗೇಡಿನ ಸಂಗತಿ. ರೈತರಿಗೆ ಭದ್ರತೆ ಇಲ್ಲದೇ ದೇಶದ ಭದ್ರತೆ ಸಾಧ್ಯವಿಲ್ಲ’ ಎಂದರು.

ಶಾಸಕರಾದ ಆರ್.ವಿ. ದೇಶಪಾಂಡೆ, ಭೀಮಣ್ಣ ನಾಯ್ಕ, ಸತೀಶ್ ಸೈಲ್ ಮಾತನಾಡಿದರು.

ಚಿತ್ರ ನಿರ್ದೇಶಕ ವಿ.ಆರ್. ಭಾಸ್ಕರ್ ನಿಧನ

ಮೈಸೂರು: ಚಿತ್ರ ನಿರ್ದೇಶಕ ವಿ.ಆರ್. ಭಾಸ್ಕರ್ (65) ಅನಾರೋಗ್ಯದಿಂದ ಗುರುವಾರ ಮುಂಜಾನೆ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟರು. ಅವರಿಗೆ ತಾಯಿ ಇದ್ದಾರೆ. ಚಾಮುಂಡಿ ಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಸಂಸ್ಕಾರ ನಡೆಯಿತು.

ವಿ.ಆರ್. ಭಾಸ್ಕರ್

ಅನುರಾಗ ದೇವತೆ, ಮನೆಮನೆ ರಾಮಾಯಣ, ಸಕಲ ಕಲಾವಲ್ಲಭ, ಪಂಜಾಬಿ ಹೌಸ್ ಸಿನಿಮಾ ನಿರ್ದೇಶಿಸಿದ್ದರು. ರುದ್ರ ನಾಗ, ಕರ್ತವ್ಯ, ಆಪ್ತಮಿತ್ರ, ಆಪ್ತರಕ್ಷಕ ಸೇರಿದಂತೆ ವಿಷ್ಣುವರ್ಧನ್ ಅವರ ಹಲವು ಸಿನಿಮಾಕ್ಕೆ ಸಂಭಾಷಣೆಕಾರ, ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜಾತಿ ಜಾತಿಯೊಳಗೆ ಜನಕೆಲ್ಲ ಹಗೆ, ಹೆರರಿಗಿದು ನಗೆ,
ನಮಗಿದು ದಗೆ.

-ಪಂಜೆ ಮಂಗೇಶರಾವ್

ಕೇರಳದಲ್ಲಿ ನಿಪಾ ಸೋಂಕು ನೆರೆರಾಜ್ಯಗಳಲ್ಲಿ ಕಟ್ಟೆಚ್ಚರ ಅಗತ್ಯ

ಕೋಯಿಕ್ಕೋಡ್ ಜಿಲ್ಲೆಯಲ್ಲಿ ನಿಪಾ ವೈರಸ್‌ನಿಂದ ಇಬ್ಬರು ಸಾವಿಗೀಡಾದ ಬಳಿಕ ಕೇರಳದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಈ ಸೋಂಕಿನಿಂದಾಗಿ ಕೆಲವರು ಚಿಕಿತ್ಸೆ ಪಡೆಯುತ್ತಿದ್ದಾರೆ ಮತ್ತು ಕೆಲವರು ನಿಗಾದಲ್ಲಿ ಇದ್ದಾರೆ. ಕೇರಳದಲ್ಲಿ ನಿಪಾ ಸೋಂಕಿನ ಐದು ಪ್ರಕರಣಗಳು ಪತ್ತೆಯಾಗಿವೆ. ಈ ಸೋಂಕಿನಿಂದಾಗಿ 2017ರಲ್ಲಿ 17 ಜನರು ಮೃತಪಟ್ಟಿದ್ದರು. 2019 ಮತ್ತು 2021ರಲ್ಲಿಯೂ ಈ ಸೋಂಕು ಕಾಣಿಸಿಕೊಂಡಿತ್ತು. ಆದರೆ ಆಗ ಯಾರೂ ಈ ಸೋಂಕಿನಿಂದಾಗಿ ಸಾವಿಗೀಡಾಗಿರಲಿಲ್ಲ. ಕೋಯಿಕ್ಕೋಡ್ ಜಿಲ್ಲೆಯಲ್ಲಿ ಮಾಸ್ಕ್ ಧರಿಸುವಂತಹ ಎಚ್ಚರಿಕೆಯ ಕ್ರಮಗಳನ್ನು ಅನುಸರಿಸಲಾಗುತ್ತಿದೆ. ಈ ಸೋಂಕಿನಿಂದಾಗಿ ಮೊದಲ ಸಾವು ಎರಡು ವಾರಗಳ ಹಿಂದೆಯೇ ಸಂಭವಿಸಿದ್ದರೂ ಕಾರಣ ಈಗಷ್ಟೇ ಗೊತ್ತಾಗಿದೆ. ಮೃತರ ಸಂಪರ್ಕಕ್ಕೆ ಬಂದಿದ್ದ ಎಲ್ಲ ವ್ಯಕ್ತಿಗಳನ್ನು ಗುರುತಿಸಲು ಕಾರ್ಯಾಚರಣೆ ಆರಂಭಿಸಲಾಗಿದೆ. ಜನರು ದಿಗಿಲುಗೊಳ್ಳುವ ಅಗತ್ಯ ಇಲ್ಲ ಎಂದು ಸರ್ಕಾರ ಹೇಳಿದೆ. ಹಾಗಿದ್ದರೂ ಸೋಂಕು ಮತ್ತೆ ಕಾಣಿಸಿಕೊಂಡಿರುವುದು ಕಳವಳ ಮೂಡಿಸಿದೆ.

ಸೋಂಕು ಈ ಹಿಂದೆ ಕಾಣಿಸಿಕೊಂಡಾಗ ಅದರ ಮೂಲ ಬಾವಲಿಗಳು ಎಂಬುದು ದೃಢಪಟ್ಟಿತ್ತು. ಈ ಬಾರಿ ಸೋಂಕಿನ ಮೂಲ ಖಚಿತಪಟ್ಟಿಲ್ಲ. ಹಂದಿಯಂತಹ ಪ್ರಾಣಿಗಳು ಕೂಡ ಈ ಸೋಂಕಿನ ವಾಹಕಗಳಾಗುತ್ತವೆ. ನಿಪಾ ಸೋಂಕಿನಿಂದ ಮೊದಲಿಗೆ ವ್ಯಕ್ತಿಯೊಬ್ಬರು ಸತ್ತಾಗ ಇದಕ್ಕೆ ನಿಪಾ ಸೋಂಕು ಕಾರಣವಾಗಿರಬಹುದು ಎಂಬ ಸಂದೇಹ ಬಂದಿರಲಿಲ್ಲ. ಆದರೆ, ಮೊದಲಿಗೆ ಸತ್ತ ವ್ಯಕ್ತಿಯಲ್ಲಿ ಇದ್ದಂತಹುದೇ ಲಕ್ಷಣಗಳನ್ನು ಹೊಂದಿದ್ದ ಇನ್ನೊಬ್ಬ ವ್ಯಕ್ತಿ ಸತ್ತಾಗ ನಿಪಾ ಸೋಂಕು ಇರಬಹುದು ಎಂಬ ಅನುಮಾನ ವೈದ್ಯರಿಗೆ ಮೂಡಿತು. ಸೋಂಕು ಇರುವುದು ದೃಢಪಟ್ಟ ಕೂಡಲೇ ಅನುಸರಣೆ ಕೆಲಸಗಳನ್ನು ಮಾಡಲಾಗಿದೆ. ಸೋಂಕನ್ನು ಈ ಹಿಂದೆ ನಿಭಾಯಿಸಿದ್ದ ಅನುಭವವು ಈ ಬಾರಿ ಸೋಂಕು ನಿರ್ವಹಿಸಲು ನೆರವಾಯಿತು. ಆದರೆ, ಸೋಂಕನ್ನು ಇನ್ನೂ ತ್ವರಿತವಾಗಿ ಮತ್ತು ಉತ್ತಮ ರೀತಿಯಲ್ಲಿ ಪತ್ತೆ ಮಾಡುವ ವಿಧಾನಗಳು ಬೇಕಿವೆ. ಸೋಂಕು ದೃಢಪಡಿಸಿಕೊಳ್ಳುವುದಕ್ಕೆ ರೋಗಿಯಿಂದ ಸಂಗ್ರಹಿಸಿದ ಮಾದರಿಯನ್ನು ಪುಣೆಯ ವೈರಾಣು ಸಂಸ್ಥೆಗೆ ಕಳುಹಿಸಿಕೊಡಬೇಕಿದೆ. ಸಾಂಕ್ರಾಮಿಕವು ಈ ಹಿಂದೆ ಕಂಡುಬಂದಿದ್ದಾಗ ಕೆಲವು ಪ್ರಸ್ತಾವಗಳು ಮತ್ತು ಶಿಫಾರಸುಗಳನ್ನು ಮುಂದಿರಿಸಲಾಗಿತ್ತು. ಹಕ್ಕಿಗಳು ಮತ್ತು ಪ್ರಾಣಿಗಳನ್ನು ಅದರಲ್ಲೂ ವಿಶೇಷವಾಗಿ ಬಾವಲಿಗಳನ್ನು ಕಾಲಕಾಲಕ್ಕೆ ಪರಿಶೀಲನೆಗೆ ಒಳಪಡಿಸಬೇಕು ಎಂಬ ಶಿಫಾರಸು ಕೂಡ ಇತ್ತು. ಆದರೆ ಇವು ಜಾರಿಯಾಗಿಲ್ಲ. ಸೋಂಕು ಇದೆ ಎಂಬುದು ದೃಢಪಡುವುದು ವಿಳಂಬವಾದಷ್ಟೂ ರೋಗಿಗಳಿಗೆ ತೊಂದರೆ ಹೆಚ್ಚುತ್ತದೆ ಮತ್ತು ಸೋಂಕು ಹರಡುವ ಅಪಾಯವೂ ಹೆಚ್ಚಾಗುತ್ತದೆ.



ಸೋಂಕನ್ನು ಇನ್ನೂ ತ್ವರಿತವಾಗಿ ಮತ್ತು ಉತ್ತಮ ರೀತಿಯಲ್ಲಿ ಪತ್ತೆ ಮಾಡುವ ವಿಧಾನಗಳನ್ನು ಅನುಸರಿಸಬೇಕಾದ ಅಗತ್ಯವಿದೆ

ವನ್ಯಮೃಗಗಳಿಂದ ಸಸ್ತನಿಗಳಿಗೆ ಮತ್ತು ಅವುಗಳಿಂದ ಮನುಷ್ಯರಿಗೆ ಸೋಂಕು ಹರಡುವಿಕೆಯು ಇತ್ತೀಚೆಗೆ ಹೆಚ್ಚಾಗಿದೆ. ಅರಣ್ಯ ನಾಶ, ಪ್ರಾಣಿಗಳು ಮತ್ತು ಮನುಷ್ಯರ ನಡುವೆ ಒಡನಾಟ ಹೆಚ್ಚಳ, ಜನಸಂಖ್ಯೆ ಏರಿಕೆ ಮತ್ತು ಹವಾಮಾನ ಬದಲಾವಣೆಯಂತಹ ಕಾರಣಗಳಿಂದ ಸೋಂಕು ಹರಡುವಿಕೆಯು ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಲಿದೆ. ಕೇರಳ, ಕರ್ನಾಟಕ ಮತ್ತು ತಮಿಳುನಾಡು ಸೇರಿ ಒಂಬತ್ತು ರಾಜ್ಯಗಳಲ್ಲಿ ಇಂತಹ ಸೋಂಕಿನ ಅಪಾಯ ಹೆಚ್ಚು ಎಂಬುದನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ನಡೆಸಿದ ಸಮೀಕ್ಷೆಯು ಕಂಡುಕೊಂಡಿದೆ. ಭಾರತ ಮತ್ತು ಚೀನಾವು ಇಂತಹ ಸೋಂಕುಗಳ ಕೇಂದ್ರಗಳಾಗಬಹುದು ಎಂಬುದರತ್ತ 2022ರ ಭಾರತದ ಅರಣ್ಯ ಸ್ಥಿತಿಗತಿ ವರದಿಯೂ ಹೇಳಿದೆ. ಕೇರಳದ ಆಸುಪಾಸಿನ ರಾಜ್ಯಗಳಾದ ಕರ್ನಾಟಕ ಮತ್ತು ತಮಿಳುನಾಡು ನಿಪಾ ಸೋಂಕಿನ ವಿಚಾರದಲ್ಲಿ ಹೆಚ್ಚು ಎಚ್ಚರಿಕೆ ವಹಿಸಬೇಕಿದೆ. ನಿಪಾ ಸೋಂಕಿನ ಲಕ್ಷಣಗಳು ಕಂಡುಬರುತ್ತಿವೆಯೇ ಎಂಬುದರತ್ತ ವೈದ್ಯಾಧಿಕಾರಿಗಳು ನಿಗಾ ಇರಿಸಬೇಕಿದೆ.

ದಿನದ ಟ್ವೀಟ್

ಜೀವ ಅಮೂಲ್ಯ

ಜಾಹ್ನವಿ ಕಂದುಲ ಪದವಿ ಪಡೆಯುವ ಸಲುವಾಗಿ ಅಮೆರಿಕಕ್ಕೆ ಬಂದಿದ್ದರು. ಅತಿ ವೇಗವಾಗಿ ಚಲಿಸುತ್ತಿದ್ದ ಪೊಲೀಸ್ ಕಾರಿಗೆ ಸಿಲುಕಿ ಮೃತಪಟ್ಟರು. ಆಕೆಯ ಸಾವಿಗೆ ಹೆಚ್ಚಿನ ಬೆಲೆಯಿಲ್ಲ ಎಂದು ಪೊಲೀಸ್ ಅಧಿಕಾರಿ ಅಡೆರರ್ ಹೇಳುತ್ತಾರೆ. ತಮ್ಮ 20ನೇ ವಯಸ್ಸಿನಲ್ಲಿ ಇಲ್ಲಿಗೆ ಬಂದ ನನ್ನ ತಂದೆಯ ಬಗ್ಗೆ ನಾನು ಯೋಚಿಸಿದೆ. ಮಿಸ್ಟರ್ ಅಡೆರರ್, ಪ್ರತಿಯೊಬ್ಬ ಭಾರತೀಯ ವಲಸಿಗನ ಜೀವವೂ ಅಮೂಲ್ಯವಾದುದು.

ರೋ ಖನ್ನಾ, ಅಮೆರಿಕ ನಿವಾಸಿ

ಕಿಡಿನುಡಿ

ನೀವು ಹಿಂದಿ ಮಾತನಾಡುತ್ತೀರಿ... ಯಾಕೇಂದ್ರೆ ನಿಮಗೆ ಹಿಂದಿ ಗೊತ್ತು... ನಮ್ಮನ್ನ ಹಿಂದಿಯಲ್ಲಿ ಮಾತಾಡಿ ಅಂತ ಒತ್ತಾಯಿಸ್ತೀರಿ... ಯಾಕೇಂದ್ರೆ ನಿಮಗೆ ಹಿಂದಿ ಮಾತ್ರ ಗೊತ್ತು...#ಹಿಂದಿಹೇರಿಕೆನಿಲ್ಲಿಸಿ

ಪ್ರಕಾಶ್ ರಾಜ್, ಚಲನಚಿತ್ರ ನಟ

25 ವರ್ಷಗಳ ಹಿಂದೆ

ಮಂಗಳವಾರ, 15-9-1998

• ಮಹಿಳೆಯರ ಸೀಟಲ್ಲಿ ಕುಳಿತ 700 ಗಂಡಸರ ಬಂಧನ

ಬೆಂಗಳೂರು, ಸೆ. 14– ನಗರ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗಾಗಿಯೇ ಮೀಸಲಿಟ್ಟಿರುವ ಆಸನಗಳಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದ ಸುಮಾರು 700ಕ್ಕೂ ಹೆಚ್ಚು ಮಂದಿ ಪುರುಷರನ್ನು ಪೊಲೀಸರು ಬಂಧಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಾರೆ.

ಮಫ್ತಿಯಲ್ಲಿದ್ದ ಮಹಿಳಾ ಪೊಲೀಸರು ಮತ್ತು ಸಂಚಾರ ಪೊಲೀಸರು ಮಹಿಳೆಯರ ಆಸನಗಳಲ್ಲಿ ಕುಳಿತು ಪ್ರಯಾಣಿಸುತ್ತಿದ್ದ ಪುರುಷರ ವಿರುದ್ಧ ಕ್ರಮ ಕೈಗೊಂಡು, ಅವರನ್ನು ಬಂಧಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಾರೆ.

ಕೆಲವು ನ್ಯಾಯಾಲಯಗಳಲ್ಲಿ ಬಂಧಿತರಿಗೆ ರೂ 25 ದಂಡ ವಿಧಿಸಿ ಬಿಡುಗಡೆ ಮಾಡಿದರು. ಕಾಯ್ದೆಯಲ್ಲಿ ಕನಿಷ್ಠ 20 ರೂನಿಂದ 500 ರೂಪಾಯಿವರೆಗೆ ದಂಡ ವಿಧಿಸಬಹುದಾಗಿದೆ.

• ಬಿಜೆಪಿ ಚಳವಳಿ: ಸಾವಿರಕ್ಕೂ ಹೆಚ್ಚು ಮಂದಿ ಬಂಧನ

ಬೆಂಗಳೂರು, ಸೆ. 14– ಬಿಜೆಪಿ ಪಕ್ಷದ ಸಾವಿರಕ್ಕೂ ಹೆಚ್ಚು ಮಂದಿ ಕಾರ್ಯಕರ್ತರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದಲ್ಲಿ 'ಜೈಲ್ ಭರೋ' ಚಳವಳಿ ನಡೆಸಿ ಇಂದು ಸ್ವಯಂ 'ಬಂಧನ'ಕ್ಕೆ ಒಳಗಾದರು.

ವಿದ್ಯುತ್ ಬೆಲೆ ಏರಿಕೆ, ಭಾಗ್ಯಜ್ಯೋತಿ ವಿದ್ಯುತ್‌ಗೆ ಶುಲ್ಕ ಹೇರಿಕೆ, ರಸಗೊಬ್ಬರದ ಅಭಾವ ಇವುಗಳನ್ನು ಖಂಡಿಸಿ ರಾಜ್ಯ ಸರ್ಕಾರದ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟಿಸಲು ಬಿಜೆಪಿ ಕರೆ ಕೊಟ್ಟಿತ್ತು.

ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿಯೂ ಬಿಜೆಪಿ ಶಾಸಕರು ಮತ್ತು ಲೋಕಸಭಾ ಸದಸ್ಯರ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು 'ಜೈಲ್ ಭರೋ' ಚಳವಳಿ ನಡೆಸಿದರು.

50 ವರ್ಷಗಳ ಹಿಂದೆ

ಶನಿವಾರ, 15-9-1973

• ಮದ್ದೂರು, ದೊಡ್ಡಬಳ್ಳಾಪುರ, ಕುಣಿಗಲ್‌ಗಳಲ್ಲಿ ಗೋಲಿಬಾರ್: ಗಲಭೆಗಳಲ್ಲಿ ಈವರೆಗೆ 6 ಸಾವು

ಬೆಂಗಳೂರು, ಸೆ. 14– ರಾಜ್ಯದ ಹಲವು ಊರುಗಳಲ್ಲಿ ಬೆಲೆ ಏರಿಕೆ ವಿರೋಧಿ ಚಳವಳಿ ಹಿಂಸಾರೂಪಕ್ಕೆ ತಿರುಗಿದೆ. ಮದ್ದೂರು, ದೊಡ್ಡಬಳ್ಳಾಪುರ ಮತ್ತು ಕುಣಿಗಲ್‌ನಲ್ಲಿ ಪರಿಸ್ಥಿತಿಯನ್ನು ತಹಬಂದಿಗೆ ತರಲು ಪೊಲೀಸರು ಗೋಲಿಬಾರ್ ನಡೆಸಿದರು.

ನಿನ್ನೆ ಮತ್ತು ಇಂದಿನ ಘಟನೆಗಳಲ್ಲಿ ಒಟ್ಟು ಸತ್ತವರು ಆರು ಮಂದಿ. ಈ ಪೈಕಿ ನಿನ್ನೆಯ ಮೂರನ್ನು ಸೇರಿ ನಾಲ್ಕು ಸಾವುಗಳು ಮಂಡ್ಯದಲ್ಲಿ ನಡೆದಿವೆ. ಮದ್ದೂರಿನಲ್ಲಿ ಬೆಳಿಗ್ಗೆ ಗುಂಡೇಟಿನಿಂದ ಗಾಯಗೊಂಡ ವ್ಯಕ್ತಿ ಆನಂತರ ಆಸ್ಪತ್ರೆಯಲ್ಲಿ ತೀರಿಕೊಂಡ. ಪಿರಿಯಾಪಟ್ಟಣದಲ್ಲಿ ನಿನ್ನೆ ಗಾಯಗೊಂಡ ಇನ್ನೊಬ್ಬ ಇಂದು ಬೆಳಿಗ್ಗೆ ಮೃತಪಟ್ಟನೆಂದು ಅಧಿಕೃತವಾಗಿ ತಿಳಿದುಬಂದಿದೆ.

ರಾಜ್ಯದ ಇತರ ಹಲವಾರು ಕಡೆಗಳಲ್ಲಿಯೂ ಹಿಂಸಾಕೃತ್ಯಗಳಲ್ಲಿ ತೊಡಗಿದ ಜನರನ್ನು ಚದುರಿಸಲು ಪೊಲೀಸರು ಅಶ್ರುವಾಯು ಮತ್ತು ಲಾಠಿ ಪ್ರಯೋಗ ನಡೆಸಿದರು. ಮಂಡ್ಯ ಅಲ್ಲದೆ ಮಾಗಡಿ, ದೊಡ್ಡಬಳ್ಳಾಪುರ, ಮೈಸೂರು, ಹುಣಸೂರು, ಕಡೂರು ಮತ್ತು ತುಮಕೂರಿನಲ್ಲಿ ನಿಷೇಧಾಜ್ಞೆ ವಿಧಿಸಲಾಗಿದೆ.

• ಲಾಠಿ ಪ್ರಹಾರ: ಒಬ್ಬರ ಸಾವು

ಮಂಡ್ಯ, ಸೆ. 4– ಮಂಡ್ಯದ ಹೊಸಹಳ್ಳಿ ಬಡಾವಣೆಯಲ್ಲಿ ಇಂದು ಗುಂಪೊಂದರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದ ಕಾರಣ ಒಬ್ಬರು ಸತ್ತರೆಂದು ವರದಿಯಾಗಿದೆ.

ನಿನ್ನೆ ನಡೆದ ಗಲಭೆಗಳ ಕಾರಣ ನಿರಾಶ್ರಿತರಾದ 167 ಕುಟುಂಬಗಳ ಜನರಿಗೆ ಪರಿಹಾರ ಒದಗಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ. ಅವರಿಗೆ ಉಚಿತ ಊಟ ಮತ್ತು ಅಕ್ಕಿಯನ್ನು ಒದಗಿಸಲಾಗುತ್ತಿದೆ. ಪರಿಹಾರ ಕಾರ್ಯ ಕೈಗೊಳ್ಳಲು ಸಮಾಜ ಸೇವಾ ಸಂಸ್ಥೆಗಳಿಗೆ ಕರೆ ನೀಡಲಾಗಿದೆ.

ಸುತ್ತಲಿನ ಹಳ್ಳಿಗಳಿಂದ ಗುಂಪುಗಳಲ್ಲಿ ಜನ ಮಂಡ್ಯಕ್ಕೆ ಬರುವುದನ್ನು ತಡೆಗಟ್ಟಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಎಲ್ಲ ಶಿಕ್ಷಣ ಸಂಸ್ಥೆಗಳನ್ನೂ ಸೆ. 23ರವರೆಗೆ ಮುಚ್ಚಲಾಗಿದೆ. ನಾಳೆಯಿಂದ ವ್ಯಾಪಾರ ವಹಿವಾಟು ಆರಂಭಿಸಲು ವರ್ತಕರಿಗೆ ಮನವಿ ಮಾಡಲಾಗಿದೆ.

ಆಮ್ಲಜನಕದ ಅಣ್ಣನಂತಿರುವ ಓಝೋನ್ ಕುರಿತ ವೈಜ್ಞಾನಿಕ ಸತ್ಯ ಅನೇಕರಿಗೆ ಗೊತ್ತಿಲ್ಲ

ಓಝೋನ್ ಪದರಕ್ಕೆ ಬೇಕು ಕಾಯಕಲ್ಪ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಮುಂಬೈ ಮೂಲದ ಎಸ್ಸೆಲ್ ಗ್ರೂಪ್ ಒಡೆತನದ ಇಂಗ್ಲಿಷ್ ಸುದ್ದಿವಾಹಿನಿ 'ವರ್ಲ್ಡ್ ಈಸ್ ಒನ್ ನ್ಯೂಸ್' (ಡಬ್ಲ್ಯುಐಒಎನ್) ಎರಡು ವರ್ಷಗಳ ಹಿಂದೆ ಸುದ್ದಿಯೊಂದನ್ನು ಬಿತ್ತರಿಸಿತ್ತು. ಅದೆಂದರೆ, ಕೊರೊನಾ ಲಾಕ್‌ಡೌನ್‌ನಿಂದ ವಿಶ್ವದ ವಿವಿಧ ಭಾಗಗಳ ವಾತಾವರಣದಲ್ಲಿ ಗಾಳಿ ತಿಳಿಯಾಗಿದೆ, ನದಿಗಳ ನೀರು ಶುದ್ಧವಾಗಿದೆ, ಮಾಲಿನ್ಯ ಕಡಿಮೆಯಾಗಿದೆ ಎಂದು ಹೇಳುತ್ತ, ಇದರಿಂದಲೇ ಆರ್ಕಟಿಕ್ ಪ್ರದೇಶದ ಮೇಲ್ಭಾಗದ ಓಝೋನ್ ಪದರದ ರಂಧ್ರ ಮುಚ್ಚಿಹೋಗಿದೆ ಎಂದು ಘೋಷಿಸಿಬಿಟ್ಟಿತು. ಹಾಗಂದದ್ದೇ ತಡ, ಶುರುವಾಯಿತು ನೋಡಿ ನೆಟ್ಟಿಗರ ಸಂಭ್ರಮ ಮತ್ತು ತಳಮಳ!

ಮಾಧ್ಯಮಗಳಲ್ಲಿ ಹರಿದಾಡುವ ಸುದ್ದಿಯನ್ನೇ ಆಹಾರ ಮಾಡಿಕೊಂಡ ಸಾಮಾಜಿಕ ಮಾಧ್ಯಮಗಳ ಲಕ್ಷಾಂತರ ಬಳಕೆದಾರರು ಶಹಬ್ಬಾಸ್, ವೆರಿಗುಡ್ ಎಂದು ಕಮೆಂಟು, ಲೈಕ್ ಹಾಕಿ, ಜಗತ್ತಿನ ಮೂಲೆ ಮೂಲೆಗೆಲ್ಲಾ ಸುದ್ದಿಯನ್ನು ಶೇರ್ ಮಾಡಿ ನಿರುಮ್ಮಳರಾದರು. ಸುದ್ದಿ ಕೇಳಿ ಕೆಂಡಾಮಂಡಲವಾದ ಕೆಲವರು, ಇದೆಂತಹ ಅತಿರೇಕ, ಲಾಕ್‌ಡೌನ್‌ನಿಂದ ನಾವೆಲ್ಲ ಕಾರು, ಬಸ್ಸು, ಬೈಕು, ರೈಲು ಓಡಿಸದೆ, ಫ್ಯಾಕ್ಟರಿ ನಡೆಸದೆ, ಡೀಸೆಲ್ ಉರಿಸದೆ ಇದ್ದುದರಿಂದ ನೀರು, ಗಾಳಿ, ಹವೆ ಶುದ್ಧವಾಗಿವೆ ಎಂದು ಹೇಳಿ, ನಮ್ಮನ್ನು 'ಭೂಮಿಯ ಕಳೆ' ಎಂದು ಚಿತ್ರಿಸಿದ್ದು ಎಷ್ಟು ಸರಿ ಎಂದು ಸಿಡಿಮಿಡಿಗೊಂಡರು. ಯುಟ್ಯೂಬ್‌ನಲ್ಲಿದ್ದ ಆ ವಿಡಿಯೊ ತುಣುಕಿಗೆ ಉಲ್ಟಾ ಹೆಬ್ಬೆರಳಿನ ಚಿತ್ರ ಹಾಕಿ, ಮಲ್ಟಿಪಲ್ ಡಿಸ್‌ಲೈಕ್ ಮಾಡಿ, ಶೂನ್ಯ ರೇಟಿಂಗ್ ನೀಡಿ ಸಿಟ್ಟು ತೀರಿಸಿಕೊಂಡರು.

ವಿಜ್ಞಾನಿಗಳನ್ನು 'ಈ ಬಗ್ಗೆ ನೀವೇನಂತೀರಿ?' ಎಂದು ಕೇಳಿದಾಗ, 'ಉತ್ತರ ಧ್ರುವ ಭಾಗದ ಆರ್ಕಟಿಕ್ ಪ್ರದೇಶದ ಓಝೋನ್ ರಂಧ್ರ ಮುಚ್ಚಿರುವುದು ನಿಜ. ಆದರೆ ಅದು ಲಾಕ್‌ಡೌನ್ ಎಫೆಕ್ಟ್‌ನಿಂದ ಆದದ್ದಲ್ಲ' ಎಂದು ಸ್ಪಷ್ಟನೆ ನೀಡಿ, 'ಸದ್ಯಕ್ಕೆ ದೊಡ್ಡ ಗಂಡಾಂತರದಿಂದ ಪಾರಾಗಿದ್ದೇವೆ' ಎಂದರು. ಮುಚ್ಚುವಿಕೆ ಶಾಶ್ವತವೇನೂ ಅಲ್ಲ, ಅದು ಮತ್ತೆ ತೆರೆದುಕೊಳ್ಳದಂತೆ ಭೂಮಿಯ ಮೇಲೆ ನಮ್ಮ ಕೆಲಸಗಳನ್ನು ನಾಜೂಕಾಗಿ ನಡೆಸಬೇಕು. ನಿಜವಾದ ಆತಂಕ ಇರುವುದು ದಕ್ಷಿಣ ಧ್ರುವದ ಅಂಟಾರ್ಕ್ಟಿಕ ಭಾಗದ ವಾಯುಮಂಡಲದಲ್ಲಿರುವ ಓಝೋನ್ ಪದರದ ರಂಧ್ರದ ಕುರಿತು. ಅದು ಮುಚ್ಚಿಕೊಳ್ಳಬೇಕು. ಅದಕ್ಕೆ ಇನ್ನೂ ನಲವತ್ತು ವರ್ಷ ಕಾಯಬೇಕು ಎಂದು ತಜ್ಞರು ಎಚ್ಚರಿಸಿದರು.

ಸೂರ್ಯನಿಂದ ನುಗ್ಗಿ ಬರುವ ಕೆಲವು ಹಾನಿಕಾರಕ ವಿಕಿರಣಗಳಿಂದ ನಮ್ಮನ್ನು ರಕ್ಷಿಸುವ ಓಝೋನ್ ಅನಿಲ ಪದರವು ಭೂಮಿಯನ್ನು ತೆಳುವಾದ ಸೀರೆಯಂತೆ ಆವರಿಸಿಕೊಂಡಿದೆ. ಉತ್ತರ– ದಕ್ಷಿಣ ಧ್ರುವ ಮತ್ತು ಇತರ ಕಡೆ ಅಲ್ಲಲ್ಲಿ ಛಿದ್ರವಾಗಿದೆ. ಅದನ್ನು ಭೂಮಿಯ ಮೇಲಿರುವ ನಾವೇ ಮಾಡಿದ್ದೇವೆ. ಓಝೋನ್ ಎಂಬ ಪದ ಕಿವಿಗೆ ಬಿದ್ದ ತಕ್ಷಣ, ಅದರ ಬಗ್ಗೆ ಅಲ್ಪಸ್ವಲ್ಪ ಗೊತ್ತಿರುವ ನಾವೆಲ್ಲಾ ಒಮ್ಮೆ ಮೇಲೆ ನೋಡುತ್ತೇವೆ ಇಲ್ಲವೆ ಭೂಮಿಯನ್ನು ಆವರಿಸಿರುವ ಅದರ ಪದರಕ್ಕೆ ತೂತು ಬಿದ್ದಿದೆ ಎಂಬುದನ್ನು ನೆನಪಿಸಿಕೊಳ್ಳುತ್ತೇವೆ. ಆದರೆ ಓಝೋನ್ ನೆಲಮಟ್ಟದಲ್ಲಿಯೂ ನಮ್ಮ ಮಧ್ಯೆಯೂ ಇರುತ್ತದೆ ಎಂಬುದು ಅನೇಕರಿಗೆ ತಿಳಿದಿಲ್ಲ.

ಆಮ್ಲಜನಕದ ಅಣ್ಣನಂತಿರುವ ಓಝೋನ್ ನೆಲಮಟ್ಟದಲ್ಲಿದ್ದರೆ ಅಪಾಯಕಾರಿ ಮತ್ತು ಭೂಮಿಯ ಮೇಲೆ ಇಪ್ಪತ್ತು ಕಿ.ಮೀ.ನಷ್ಟು ಎತ್ತರದಲ್ಲಿದ್ದರೆ ಹೆಚ್ಚು ಉಪಕಾರಿ ಎಂಬ ವೈಜ್ಞಾನಿಕ ಸತ್ಯ ಅನೇಕರಿಗೆ ಗೊತ್ತಿಲ್ಲ. ಆದರೆ ವಾತಾವರಣ ವಿಜ್ಞಾನಿಗಳು ಮಾತ್ರ ಓಝೋನ್ ಪದರಕ್ಕೆ ಉಂಟಾದ ರಂಧ್ರವನ್ನು ಮುಚ್ಚುವುದರ ಕುರಿತು ಮೂವತ್ತೇಳು ವರ್ಷಗಳಿಂದ ಬಹಳಷ್ಟು ತಿಳಿವಳಿಕೆ ಸಂಪಾದಿಸಿ, ರಂಧ್ರವನ್ನು ಮುಚ್ಚಿಸುವಲ್ಲಿ ಭಾಗಶಃ ಯಶಸ್ವಿಯೂ ಆಗಿದ್ದಾರೆ.

ಬಸ್ಸು, ಕಾರು ಸೇರಿದಂತೆ ವಾಹನಗಳು ಉರಿಸುವ ಡೀಸೆಲ್‌ನಿಂದ ಹೊಮ್ಮುವ ಹೊಗೆ, ನೋವು ನಿವಾರಕ ಸ್ಪ್ರೇಗಳು, ಪೇಯಿಂಟ್, ಮನೆಯ ಫ್ರಿಜ್, ಎ.ಸಿ., ಸುಗಂಧ ಸೂಸುವ ಪರ್‌ಫ್ಯೂಮ್, ಡಿಯೋಡರೆಂಟ್ ಡಬ್ಬಿಗಳಲ್ಲೆಲ್ಲಾ ಬಳಕೆಯಾಗುವ ಕ್ಲೋರೊಫ್ಲೋರೊಕಾರ್ಬನ್ ರಾಸಾಯನಿಕಗಳು (ಸಿಎಫ್‌ಸಿ) ವಾತಾವರಣಕ್ಕೆ ಸೇರಿಕೊಂಡಾಗಲೆಲ್ಲ ಓಝೋನ್‌ನ ಉತ್ಪತ್ತಿ ಇಲ್ಲವೆ ಧ್ವಂಸ, ಎರಡೂ ಏಕಕಾಲಕ್ಕೆ ನಡೆಯುತ್ತವೆ. ಡೀಸೆಲ್ ಉರಿದಾಗ ಹುಟ್ಟುವ ನೈಟ್ರೋಜನ್ ಮಾನಾಕ್ಸೈಡ್ ಮತ್ತು ಮನೆಗಳ ಒಲೆಗಳಲ್ಲಿ ಉರಿಸುವ ಕಟ್ಟಿಗೆಯಿಂದ ಉದಿಸಿ ಆವಿಯಾಗುವ ಸಾವಯವ ಕಣಗಳಿಂದ ನೆಲಮಟ್ಟದಲ್ಲಿ ಓಝೋನ್ ತ್ವರಿತವಾಗಿ ಸೃಷ್ಟಿಯಾಗುತ್ತದೆ.

ಪೇಯಿಂಟ್, ರಸಗೊಬ್ಬರ, ವಾಹನಗಳ ಹೊಗೆಯಿಂದ ಹೊಮ್ಮುವ ಸಾರಜನಕದ ಆಕ್ಸೈಡ್‌ಗಳು ವಾತಾವರಣದಲ್ಲಿ ಲಭ್ಯವಾಗುವ ಆಮ್ಲಜನಕದ ಅಣುಗಳನ್ನು ಒಡೆಯುತ್ತವೆ. ಆಗ ಹುಟ್ಟುವ ಏಳಸು (O) ಆಮ್ಲಜನಕದ ಅಣು ಅಲ್ಲೇ ಇರುವ ಇನ್ನೊಂದು ಆಮ್ಲಜನಕದ ಪೂರ್ಣ ಅಣುವಿನೊಂದಿಗೆ ಸಂಯೋಗಗೊಂಡು ಓಝೋನ್ ತಯಾರಾಗುತ್ತದೆ. ಸಿಎಫ್‌ಸಿಗಳು ಸೂರ್ಯಕಿರಣಗಳೊಂದಿಗೆ ವರ್ತಿಸಿದಾಗ ಬಿಡುಗಡೆಯಾಗುವ ಕ್ಲೋರಿನ್ ಅಣು ಲಕ್ಷಾಂತರ ಓಝೋನ್ ಕಣಗಳನ್ನು ನಾಶ ಮಾಡುತ್ತದೆ. ಆಮ್ಲಜನಕಕ್ಕೆ (O_2) ಹೋಲಿಸಿದರೆ ಓಝೋನ್‌ನ (O_3) ಗುಣ ತದ್ವಿರುದ್ಧ. O_2 ಪ್ರಾಣ ಉಳಿಸಿದರೆ, ನೆಲಮಟ್ಟದಲ್ಲಿರುವ O_3 ಪ್ರಾಣ ತೆಗೆಯುತ್ತದೆ. ಓಝೋನ್ ನಮ್ಮ ಹತ್ತಿರವಿದ್ದಷ್ಟೂ ನಮಗೆ ಅಪಾಯ ಕಟ್ಟಿಟ್ಟ ಬುತ್ತಿ. ಉಸಿರಾಡಿದಾಗ ಶ್ವಾಸಕೋಶದ ಉರಿ ಹೆಚ್ಚಿ, ಕೆಮ್ಮು, ಉಬ್ಬಸ ಎಲ್ಲ ಏಕಕಾಲಕ್ಕೆ ಕಾಣಿಸಿಕೊಳ್ಳುತ್ತವೆ. ಬಿಸಿಲು ಹೆಚ್ಚಾಗಿದ್ದು, ಗಾಳಿಯ ಸಂಚಾರವಿಲ್ಲದಿದ್ದರೆ ಓಝೋನ್‌ನ ಪ್ರತಾಪ ವಿಪರೀತವಾಗುತ್ತದೆ. ಅಸ್ತಮಾ ರೋಗಿಗಳ ಪ್ರಥಮ ಶತ್ರು ಎನಿಸಿರುವ ಓಝೋನ್ ಕೆಲವೊಮ್ಮೆ ಪ್ರಾಣಹಾನಿಗೂ ಕಾರಣವಾಗುತ್ತದೆ. ನಾವು ಬಳಸುವ ಗೃಹೋಪಯೋಗಿ ವಸ್ತುಗಳಾದ ಡಿಟರ್ಜೆಂಟ್ ಪೌಡರ್, ಸಾಬೂನು, ದುರ್ವಾಸನೆ ದೂರವಿರಿಸುವ ದ್ರವ್ಯ, ನೀರಿನ ಶುದ್ಧೀಕರಣ ಘಟಕಗಳಲ್ಲಿ ಓಝೋನ್‌ನ ಬಳಕೆ ವ್ಯಾಪಕವಾಗಿದೆ.

ದಕ್ಷಿಣ ಧ್ರುವದ ಅಂಟಾರ್ಕ್ಟಿಕದ ಮೇಲಿನ ಭಾಗದ ವಾಯುಮಂಡಲದಲ್ಲಿರುವ ಓಝೋನ್ ಪದರ ತೂತಾಗಿದೆ ಎಂಬ ಮಾಹಿತಿ 1980ರಲ್ಲಿ ಮೊದಲ ಬಾರಿಗೆ ಸಿಕ್ಕಿತು. ಆಗ ತಕ್ಷಣ ಪದರದ ರಕ್ಷಣೆಯ ಕೆಲಸಗಳು ಶುರುವಾದವು. ಚಳಿಗಾಲದಲ್ಲಿ ಅಂಟಾರ್ಕ್ಟಿಕದ ಮೇಲಿನ ಭಾಗದಲ್ಲಿ ಉಷ್ಣಾಂಶ ತುಂಬಾ ಕಡಿಮೆ ಇರುತ್ತದೆ. ಹಿಮಯುಕ್ತ ಮೋಡಗಳ ಸಾಂದ್ರತೆ ಅಂಟಾರ್ಕ್ಟಿಕ ಭಾಗದ ಮೇಲೆ ಜಾಸ್ತಿ ಇರುವುದರಿಂದ, ಆ ಜಾಗದಲ್ಲೇ, ಮೊದಲು ರಂಧ್ರ ಇರುವುದು ಕಂಡುಬಂದಿತ್ತು. ತೂತಾದ ಜಾಗದಿಂದ ಸೂರ್ಯರಶ್ಮಿ ನೇರವಾಗಿ ನೆಲ ತಲುಪಿ ಸಕಲ ಜೀವಸಂಕುಲದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ತಿಳಿದದ್ದರಿಂದ ವಿಜ್ಞಾನಿಗಳು ಶೀಘ್ರವಾಗಿ ಸಿಎಫ್‌ಸಿಗಳ ಕಟ್ಟುನಿಟ್ಟಿನ ನಿಷೇಧಕ್ಕೆ ಸಲಹೆ ನೀಡಿದರು.

ಪರಿಸ್ಥಿತಿಯ ತೀವ್ರತೆಯನ್ನು ಅರಿತು ವಿಶ್ವಸಂಸ್ಥೆಯ ಮುಂದಾಳತ್ವದಲ್ಲಿ ವಿಶ್ವದ ಎಲ್ಲ ರಾಷ್ಟ್ರಗಳೂ ಒಮ್ಮನಸ್ಸಿನಿಂದ ಒಪ್ಪಿಗೆ ನೀಡಿ, 1987ರಲ್ಲಿ ಮಾಂಟ್ರಿಯಲ್ ಒಪ್ಪಂದಕ್ಕೆ ಸಹಿ ಹಾಕಿದವು. ಆಗ ಓಝೋನ್ ಪದರಕ್ಕೆ ಧಕ್ಕೆ ತರುವ ಕ್ಲೋರಿನ್, ಬ್ರೋಮಿನ್ ಮತ್ತು ಅವುಗಳನ್ನು ಒಳಗೊಳ್ಳುವ 40ಕ್ಕೂ ಹೆಚ್ಚು ರಾಸಾಯನಿಕ ವಸ್ತುಗಳನ್ನು ಸಂಪೂರ್ಣ ನಿಷೇಧಿಸಲಾಯಿತು ಮತ್ತು ಸಿಎಫ್‌ಸಿಗಳ ಬದಲಿಗೆ ಓಝೋನ್ ಪದರಕ್ಕೆ ಕಡಿಮೆ ಹಾನಿ ಮಾಡುವ ಹೈಡ್ರೋಕ್ಲೋರೊಫ್ಲೋರೊ ಕಾರ್ಬನ್‌ಗಳನ್ನು (ಎಚ್‌ಸಿಎಫ್‌ಸಿ) ಬಳಸಬೇಕೆಂದು ನಿರ್ಣಯವಾಯಿತು.

ಕೃಷಿ ಉತ್ಪನ್ನಗಳ ದಾಸ್ತಾನಿಗೆ ಬಳಸುವಂಥ ಬೃಹತ್ ಶೀತಲೀಕರಣ ವ್ಯವಸ್ಥೆ, ಮನೆಗಳಲ್ಲಿ ಬಳಸುವ ಎ.ಸಿ, ಫ್ರಿಜ್‌ಗಳಿಗೆ ಎಚ್‌ಸಿಎಫ್‌ಸಿ ಬೇಕೇಬೇಕು. ಎಚ್‌ಸಿಎಫ್‌ಸಿಗಳಿಂದಲೂ ಓಝೋನ್ ಪದರಕ್ಕೆ ತೊಂದರೆಯಿದೆ ಮತ್ತು ಭೂಮಿಯ ಬಿಸಿ ಏರಿಸುವಲ್ಲಿ ಕಾರ್ಬನ್ ಡೈ ಆಕ್ಸೈಡ್‌ಗಿಂತ ಎರಡು ಸಾವಿರ ಪಟ್ಟು ಹೆಚ್ಚು ಅಪಾಯಕಾರಿ ಎಂಬುದು ತಿಳಿಯಿತು. ಆಗ 2016ರಲ್ಲಿ ರುವಾಂಡದ ಕಿಗಳಿಯಲ್ಲಿ ಸಭೆ ಸೇರಿ, ಮಾಂಟ್ರಿಯಲ್ ಒಪ್ಪಂದಕ್ಕೆ ತಿದ್ದುಪಡಿ ತಂದು, ಎಚ್‌ಸಿಎಫ್‌ಸಿಗಳನ್ನು 2030ರವರೆಗೆ ಮಾತ್ರ ಬಳಸುವಂತೆ ಆದೇಶಿಸಲಾಯಿತು.

ಇನ್ನು ಇಪ್ಪತ್ತು ವರ್ಷಗಳಲ್ಲಿ ನಮ್ಮ ಎ.ಸಿ, ಫ್ರಿಜ್, ಆಹಾರ ಉತ್ಪನ್ನ ದಾಸ್ತಾನಿಗೆ ಬಳಸುವಂಥ ಬೃಹತ್ ಶೀತಲೀಕರಣ ವ್ಯವಸ್ಥೆಯ ಬೇಡಿಕೆ ಎಂಟು ಪಟ್ಟು ಹೆಚ್ಚಲಿದೆ ಎಂಬ ಕಾರಣಕ್ಕೆ ಕೇಂದ್ರ ಸರ್ಕಾರವು ಇಂಡಿಯಾ ಕೂಲಿಂಗ್ ಆ್ಯಕ್ಷನ್ ಪ್ಲ್ಯಾನ್ ಪ್ರಾರಂಭಿಸಿದೆ. ಎಚ್‌ಸಿಎಫ್‌ಸಿಯ ಸಂಪೂರ್ಣ ನಿಷೇಧಕ್ಕೆ ಹೆಚ್ಚಿನ ಸಮಯ ಬೇಕೇಬೇಕು ಎಂದು ಹೇಳಿದೆ. ವಿಶ್ವದ ಹವಾನಿಯಂತ್ರಕ ವ್ಯವಸ್ಥೆಯ ಬೇಡಿಕೆಯ ಶೇಕಡ 80ರಷ್ಟನ್ನು ಪೂರೈಸುತ್ತಿರುವ ಚೀನಾ ತನಗೂ ಸಮಯ ಬೇಕು ಎಂದಿದ್ದು, ಸಾಧ್ಯವಾದಷ್ಟೂ ಸಹಕರಿಸುತ್ತೇವೆ ಎಂಬ ಭರವಸೆ ನೀಡಿದೆ. ಅಂದಹಾಗೆ, ನಾಳೆ (ಸೆ.16) ವಿಶ್ವ ಓಝೋನ್ ದಿನ ಆಚರಿಸಲಿದ್ದೇವೆ.

ಚುರುಮುರಿ

ಸುಗಮ ಮಂಡಳಿ

• ಸಿ.ಎನ್.ರಾಜು

'ನಿಗಮಕ್ಕೋ ಮಂಡಳಿಗೋ ಅಧ್ಯಕ್ಷನಾಗುವ ಸುಗಮ ಅವಕಾಶ ಕೂಡಿಬಂದಿದೆ ಸಾರ್...' ಗುಡ್‌ನ್ಯೂಸ್ ತಂದ ಪುಟ್ಟಾಮಿ.

'ನಿನಗೆ ಅಂಥಾ ಸ್ಥಾನ ಕೊಡಿಸುವಂತಹ ಗಾಡ್‌ಫಾದರ್ ಯಾರಿದ್ದಾರೆ?' ಕೇಳಿದೆ.

'ಪಕ್ಷ ಕಟ್ಟಿ ಬೆಳೆಸಿದ ದುಡಿಮೆ ಇದೆ. ಚುನಾವಣೆಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ಗೆಲ್ಲಿಸಿದ ನನ್ನ ಋಣ ಶಾಸಕರ ಮೇಲಿದೆ. ನನ್ನ ಸೇವೆ ಮೆಚ್ಚಿರುವ ಶಾಸಕರು ಸರ್ಕಾರಿ ಸ್ಥಾನಮಾನ ಕೊಡುಸ್ತೀನಿ ಅಂತ ಮಾತು ಕೊಟ್ಟಿದ್ದಾರೆ'.

'ನೀನು ಮಾಡಿದ ಸಮಾಜಸೇವೆಯ ಫಲಾನುಭವಿ ಜನರ ಆಶೀರ್ವಾದವೂ ನಿನ್ನ ಮೇಲಿದೆ'.

'ಹೌದು ಸಾರ್, ಸ್ಕೂಲ್ ಮಕ್ಕಳಿಗೆ ನೋಟ್‌ಬುಕ್ಸ್ ಕೊಟ್ಟಿದ್ದೀನಿ, ಅನಾಥಾಶ್ರಮದಲ್ಲಿ ಊಟ, ಬಟ್ಟೆ ಹಂಚಿದ್ದೀನಿ, ಆರೋಗ್ಯ ಶಿಬಿರ, ರಕ್ತದಾನ ಶಿಬಿರ ಮಾಡಿದ್ದೀನಿ. ನೀವು ನನ್ನ ಹೆಲ್ತ್ ಕ್ಯಾಂಪಿಗೆ ಅತಿಥಿಯಾಗಿ ಬಂದು ಬಿ.ಪಿ. ಚೆಕ್ ಮಾಡಿಸಿಕೊಂಡಿದ್ದೀರಿ, ನಿಮ್ಮ ಆಶೀರ್ವಾದವೂ ನನ್ನ ಮೇಲಿದೆ...'

'ಪಕ್ಷದ ವಲಯದಲ್ಲಿ ರಿಮಾರ್ಕ್, ಬ್ಲ್ಯಾಕ್‌ಮಾರ್ಕ್ ಇಲ್ಲದಂತೆ ಎಚ್ಚರವಹಿಸು'.

'ಜೇನು ಕಿತ್ತಾಗ ಕೈ ನೆಕ್ಕಿ ಬ್ಲ್ಯಾಕ್‌ಮಾರ್ಕ್ ಮಾಡಿಕೊಂಡಿದ್ದೆ, ಈಗ ಎಲ್ಲವನ್ನೂ ತೊಳೆದುಕೊಂಡು ವೈಟ್ ಆ್ಯಂಡ್ ವೈಟ್ ಆಗಿದ್ದೀನಿ ಸಾರ್!'

'ಮಂತ್ರಿ ಸ್ಥಾನ ಸಿಗದ ಶಾಸಕರು ನಿಗಮ, ಮಂಡಳಿಗಳಿಗೆ ಟವೆಲ್ ಹಾಕಿದ್ದಾರಂತೆ, ಶಾಸಕರಿಗೆ ಮಣೆ ಹಾಕಿಬಿಟ್ಟರೆ ಪಕ್ಷಕ್ಕೆ ಮಣ್ಣು ಹೊತ್ತ ನಿನ್ನಂಥ ನಿಷ್ಠರಿಗೆ ಅನ್ಯಾಯವಾಗುತ್ತದೆ. ನಿನ್ನ ರಾಜಕೀಯ ಸ್ಥಾನಕ್ಕೆ ನಿಮ್ಮ ಶಾಸಕರೇ ಅಡ್ಡಿಯಾಗಿದ್ದಾರಂತೆ ಹುಷಾರ್!' ಎಚ್ಚರಿಸಿದೆ.

'ನಾನು ಬೆಳೆದರೆ ಮುಂದಿನ ಚುನಾವಣೆಗೆ ಪ್ರತಿಸ್ಪರ್ಧಿ ಆಗ್ತೀನಿ ಅನ್ನೋ ಭಯ ನಮ್ಮ ಶಾಸಕರಿಗಿದೆ ಸಾರ್. ಆದರೂ ಅವರು ನನ್ನ ದಾರಿಗೆ ಅಡ್ಡ ಬರುವುದಿಲ್ಲ. ಅವರ ಚರಿತ್ರೆಯ ಪೆನ್‌ಡ್ರೈವ್ ನನ್ನಲ್ಲಿದೆ ಅನ್ನೋದು ಶಾಸಕರಿಗೆ ಗೊತ್ತಿದೆ!' ಎಂದು ಕುಹಕ ನಗೆ ನಕ್ಕ ಪುಟ್ಟಾಮಿ.

ಸಂಗತ

ಸಂವಿಧಾನ ಓದು: ಮೌಲ್ಯ ಅರಿಯೋಣ

ಸಂವಿಧಾನದಲ್ಲಿರುವ ಸಾಮಾಜಿಕ ಮೌಲ್ಯಗಳು ಮತ್ತು ಸೂಕ್ಷ್ಮ ಸಂವೇದನೆಯ ಆಲೋಚನೆಗಳು ಯುವಸಮೂಹವನ್ನು ತಲುಪಬೇಕಾಗಿರುವುದು ಇಂದಿನ ಅಗತ್ಯ

• ನಾ.ದಿವಾಕರ

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು (ಸೆ. 15) ದೊಡ್ಡ ಮಟ್ಟದಲ್ಲಿ ಆಚರಿಸಲು ಕರ್ನಾಟಕ ಸರ್ಕಾರ ಮುಂದಾಗಿದೆ. ಜನಸಮೂಹದ ನಡುವೆ ಸಂವಿಧಾನದ ಪೀಠಿಕೆಯನ್ನು ಓದುವ ಈ ಕಾರ್ಯಕ್ರಮ ರಾಜ್ಯದಾದ್ಯಂತ ನಡೆಯಲಿದೆ. ಸಂವಿಧಾನ ಪೀಠಿಕೆಯ ಪ್ರಾಮುಖ್ಯ ಹಾಗೂ ಅದರ ಆಶಯಗಳ ಹಿಂದಿರುವ ಸಾಮಾಜಿಕ ಕಾಳಜಿ, ಕಳಕಳಿಯನ್ನು ತಳಮಟ್ಟದವರೆಗೂ ತಲುಪಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿ ಆಗಬಹುದು. ಸಂವಿಧಾನದ ಅರಿವೇ ಇಲ್ಲದ ಯುವ ಸಮೂಹಕ್ಕೆ ಭಾರತದ ಸಂವಿಧಾನ ಅಪೇಕ್ಷಿಸುವ ಬಹುತ್ವ ಸಂಸ್ಕೃತಿ, ಸೋದರತ್ವ, ಸಹಬಾಳ್ವೆ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಮುಟ್ಟಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶ ಎಂದು ಭಾವಿಸಬಹುದು.

ಆದರೆ ಸರ್ಕಾರ ಕೈಗೊಂಡಿರುವ ಅಭಿಯಾನ ಮತ್ತು ಆಚರಣೆಗಳಿಂದಾಚೆಗೂ ವಿಶಾಲ ಸಮಾಜಕ್ಕೆ ತನ್ನದೇ ಆದ ಕರ್ತವ್ಯಗಳು ಇರುವುದನ್ನು ಮನಗಾಣದೇ ಹೋದರೆ ಇದು ಮತ್ತೊಂದು ಸಂಭ್ರಮದ ಉತ್ಸವವಾಗಿ ಪರ್ಯವಸಾನ ಗೊಳ್ಳುತ್ತದೆ. ಇಂದು ಯುವಸಮುದಾಯವನ್ನು ತಲುಪಬೇಕಿರುವುದು ಗ್ರಾಂಥಿಕ ಸಂವಿಧಾನವಲ್ಲ. ಈ ಗ್ರಂಥದಲ್ಲಿ ಅಡಗಿರುವ ಸಾಮಾಜಿಕ ಮೌಲ್ಯಗಳು, ಸೂಕ್ಷ್ಮ ಸಂವೇದನೆಯ ಆಲೋಚನೆಗಳು, ಮನುಜ ಸಂಬಂಧಗಳನ್ನು ಬೆಸೆಯಬಹುದಾದ ಮಾನವೀಯ ಚಿಂತನೆಗಳು, ಅಮಾನುಷವಾದ ಆಚರಣೆ ಮತ್ತು ಸಂಪ್ರದಾಯಗಳನ್ನು ತೊಡೆದುಹಾಕುವ ಕ್ರಾಂತಿಕಾರಕ ಚಿಂತನೆಗಳನ್ನು ಮೌಲಿಕವಾಗಿಯೇ ಜನಸಾಮಾನ್ಯರಿಗೆ ಮುಟ್ಟಿಸುವುದು ನಮ್ಮ ಆದ್ಯತೆಯಾಗಬೇಕಿದೆ. ಪಠಣ ಮತ್ತು ಮನನ ಇವೆರಡರ ನಡುವೆ ಇರುವ ಸೂಕ್ಷ್ಮ ವ್ಯತ್ಯಾಸವನ್ನು ಅರಿತುಕೊಂಡರೆ, ನಾವು ಎಲ್ಲಿ ಎಡವುತ್ತಿದ್ದೇವೆ ಎನ್ನುವುದು ಅರ್ಥವಾಗುತ್ತದೆ.

ಇಂದು ಭಾರತದ ಸಂವಿಧಾನ ಸುರಕ್ಷಿತವಾಗಿದೆ. ಈ ಸಂವಿಧಾನ ರೂಪಿಸಿದ ಪ್ರಜಾಪ್ರಭುತ್ವ ವ್ಯವಸ್ಥೆಯೂ ಸುಸ್ಥಿತಿಯಲ್ಲಿದೆ ಎಂದು ಮೇಲ್ನೋಟಕ್ಕೆ ಅನ್ನಿಸುತ್ತದೆ. ಆದರೆ ಆಡಳಿತಾತ್ಮಕ ಚೌಕಟ್ಟಿನಿಂದ ಹೊರನಿಂತು ನೋಡಿದಾಗ, ನಮ್ಮ ಸುತ್ತಲಿನ ಸಮಾಜ ಪ್ರತಿಯೊಂದು ಹೆಜ್ಜೆಯಲ್ಲೂ ಸಂವಿಧಾನದ ಆಶಯಗಳನ್ನು ಅಪಮೌಲ್ಯಗೊಳಿಸುತ್ತಿರುವುದನ್ನು ಗಮನಿಸಬಹುದು. ಒಕ್ಕೂಟ ವ್ಯವಸ್ಥೆಯ ತತ್ವಗಳು ಶಿಥಿಲವಾಗುತ್ತಿರುವಂತೆಯೇ, ಚುನಾವಣಾ ರಾಜಕಾರಣದಲ್ಲಿ ಇರಬೇಕಾದ ಸಾಂವಿಧಾನಿಕ ಪ್ರಜ್ಞೆ ಕ್ರಮೇಣ ನಶಿಸಿಹೋಗುತ್ತಿರುವುದನ್ನೂ ಗಮನಿಸಬೇಕಿದೆ. ಭಾರತದ ಸಂವಿಧಾನ ಆಶಿಸುವ ಆಚರಣೆಯ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ನೆಲೆಗಳು ಆಡಳಿತ ವ್ಯವಸ್ಥೆಯ ಅಥವಾ ಪಟ್ಟಭದ್ರ ಹಿತಾಸಕ್ತಿಗಳ ಇಚ್ಛೆಗನುಸಾರವಾಗಿ ಶಿಥಿಲವಾಗುತ್ತಿರುವುದನ್ನು ಗಮನಿಸುತ್ತಲೇ ಬಂದಿದ್ದೇವೆ. ಆದರೆ ಇಡೀ ಸಮಾಜವನ್ನು ಅಡ್ಡಡ್ಡಲಾಗಿ ಸೀಳಿರುವ ಅಸ್ಮಿತೆಯ ರಾಜಕಾರಣ ಮತ್ತು ಸಾಂಸ್ಕೃತಿಕ ರಾಜಕಾರಣದ ಹಿತಾಸಕ್ತಿಗಳು, ಈ ಅಸಾಂವಿಧಾನಿಕ ನಿಲುವುಗಳನ್ನು ಸಮರ್ಥಿಸುವ ಬೃಹತ್ ಸಂಖ್ಯೆಯ ಜನಸಮೂಹಗಳನ್ನು ಸೃಷ್ಟಿಸಿ ತಮ್ಮ ಹಿಡಿತದಲ್ಲಿ ಇರಿಸಿಕೊಂಡಿವೆ.

ಮತನಿರಪೇಕ್ಷತೆ, ಜಾತ್ಯತೀತತೆಯಂತಹ ಪದಪುಂಜಗಳು ತಮ್ಮ ಮೂಲ ಅರ್ಥವನ್ನೇ ಕಳೆದುಕೊಂಡಿದ್ದು, ಅಧಿಕಾರ ರಾಜಕಾರಣದ ವ್ಯಾಪ್ತಿಯಲ್ಲಿ ಅಪ್ರಸ್ತುತ ಎನಿಸುವಂತಾಗಿವೆ. ರಾಜಕೀಯ ಶಕ್ತಿಗಳು ತಮ್ಮ ಅಸ್ತಿತ್ವದ ರಕ್ಷಣೆಗಾಗಿ ಈ ಅಮೂಲ್ಯ ಚಿಂತನೆಗಳನ್ನು ರಕ್ಷಾ ಕವಚಗಳಂತೆ ಬಳಸುತ್ತಿವೆ. ಅಷ್ಟೇ ಅಲ್ಲದೆ ತಮ್ಮ ನಿತ್ಯ ಬದುಕಿನಲ್ಲಿ ವ್ಯಕ್ತಿಗತ ಜೀವನ-ಜೀವನೋಪಾಯಕ್ಕಾಗಿ ಶ್ರಮಿಸುವ ಕೋಟ್ಯಂತರ ಜನರ ನಡುವೆ ಜಾತಿ, ಮತ, ಧರ್ಮ, ಭಾಷೆಯ ಮುಳ್ಳುಬೇಲಿಗಳನ್ನು ನಿರ್ಮಿಸಿರುವ ಮತೀಯ-ಸಾಂಸ್ಕೃತಿಕ ರಾಜಕಾರಣವು ಸಾಮಾನ್ಯ ಜನರ ನಡುವೆ ಈಗಾಗಲೇ ಇರುವ ಅಂತರವನ್ನು ಮತ್ತಷ್ಟು ಹಿಗ್ಗಿಸುತ್ತಿದೆ. ಹಸಿವು, ಬಡತನ, ದಾರಿದ್ರ್ಯ, ನಿರುದ್ಯೋಗದಂತಹ ಜ್ವಲಂತ ಸಮಸ್ಯೆಗಳಿಗೆ ಆಡಳಿತ ನೀತಿಗಳನ್ನು, ಆರ್ಥಿಕ ಮಾದರಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕಾದ ಜನತೆ, ಮತ್ತೊಂದು ಕೋಮಿನ ಅಥವಾ ಜಾತಿಯ ಜನರನ್ನು ದೂಷಿಸುವ ಒಂದು ವಿಕೃತ ಸಾಮಾಜಿಕ ಮಾದರಿಯನ್ನು ಅಪ್ಪಿಕೊಂಡಿದೆ.

ಸಂವಿಧಾನ ಅಪೇಕ್ಷಿಸುವ ವೈಚಾರಿಕತೆ, ವೈಜ್ಞಾನಿಕ ಮನೋಭಾವ, ಸೋದರತ್ವದ ಭಾವನೆ, ಸಹಬಾಳ್ವೆಯ ಮನಃಸ್ಥಿತಿಯು ತಳಮಟ್ಟದವರೆಗೂ ವ್ಯಾಪಿಸಬೇಕೆಂದಾದರೆ, ಈ ಸಾಂವಿಧಾನಿಕ ಮೌಲ್ಯಗಳ ಹಿಂದಿರುವ ಚಾರಿತ್ರಿಕ ಪರಂಪರೆ ಮತ್ತು ಬಹುಸಾಂಸ್ಕೃತಿಕ ನೆಲೆಗಳನ್ನು ಜನಸಾಮಾನ್ಯರಿಗೆ ಮನದಟ್ಟು ಮಾಡಿಕೊಡಬೇಕಾಗುತ್ತದೆ.

ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ, ಅಸ್ಪೃಶ್ಯತೆ, ಸಾಮಾಜಿಕ ಬಹಿಷ್ಕಾರವನ್ನು ತಮಗೆ ಸಂಬಂಧಿಸದ ವಿದ್ಯಮಾನಗಳು ಎಂದು ಭಾವಿಸುವ ಒಂದು ಬೃಹತ್ ಜನಸಮೂಹವನ್ನು ನಾವು ನೋಡುತ್ತಲೇ ಬಂದಿದ್ದೇವೆ. ಈ ಜನಸಮೂಹದಲ್ಲಿ ವ್ಯವಸ್ಥೆಯ ಫಲಾನುಭವಿಗಳು ಇರುವಷ್ಟೇ ಪ್ರಮಾಣದಲ್ಲಿ ವ್ಯವಸ್ಥೆಯಿಂದ ನೊಂದ ಜೀವಿಗಳೂ ಇರಲು ಸಾಧ್ಯ. ಆದರೆ ಈ ನೊಂದ ಜೀವಿಗಳ ನೋವು, ಯಾತನೆಯನ್ನು ಮರೆಮಾಚುವ ಧಾರ್ಮಿಕ ಹೊದಿಕೆಗಳು, ಜಾತಿಯ ಕವಚಗಳು ಅಥವಾ ಆರ್ಥಿಕ ಸವಲತ್ತುಗಳು ಭಾರತದ ಸಂವಿಧಾನದ ಮೌಲ್ಯಗಳನ್ನು ಶಿಥಿಲಗೊಳಿಸುವ ಅಸ್ತ್ರಗಳಾಗಿ ಪರಿಣಮಿಸಿವೆ. ಇದರ ವಿರುದ್ಧ ಹೋರಾಡುವುದೇ ಆದರೆ, ಸಂವಿಧಾನ ಪೀಠಿಕೆಯ ಓದು ರೂಢಿಗತ ಆಚರಣೆಯಾಗದೆ ನಿತ್ಯ ಬದುಕಿನ ಒಂದು ಭಾಗವಾಗಬೇಕಿದೆ.

ವಾಚಕರ ವಾಣಿ

ಬರ ಘೋಷಣೆ: ಸಕಾಲದಲ್ಲಿ ತಲುಪಲಿ ಪರಿಹಾರ

ರಾಜ್ಯ ಸರ್ಕಾರವು 195 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಣೆ ಮಾಡಿರುವುದರಿಂದ ರೈತರು ಕೊಂಚ ನಿಟ್ಟುಸಿರುಬಿಡುವಂತಾಗಿದೆ. ಈ ಮೂಲಕ ಸರ್ಕಾರದಿಂದ ಸಹಾಯಧನ ದೊರೆಯಲಿದೆ ಎನ್ನುವ ಭರವಸೆ ರೈತರಲ್ಲಿ ಮೂಡಿದೆ. ಆದರೆ ಸರ್ಕಾರದ ಘೋಷಣೆ ಬರೀ ಘೋಷಣೆಯಾಗದೆ ರೈತರ ಪಾಲಿಗೆ ವರವಾಗಬೇಕಿದೆ. ಕೇಂದ್ರಕ್ಕೆ ಬೇಗ ವರದಿ ಸಲ್ಲಿಸಿ, ಮಾರ್ಗಸೂಚಿ ಅನುಸಾರ ರಾಜ್ಯ ಮತ್ತು ಕೇಂದ್ರದಿಂದ ಬರಪೀಡಿತ ತಾಲ್ಲೂಕುಗಳಿಗೆ ಬರ ಬೇಕಾದ ಪರಿಹಾರವು ಸಕಾಲದಲ್ಲಿ ಮುಟ್ಟುವಂತೆ ನೋಡಿಕೊಳ್ಳುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕಾಗಿದೆ. ಆಗ ಸರ್ಕಾರದ ಮೇಲಿನ ರೈತರ ವಿಶ್ವಾಸ, ನಂಬಿಕೆ ದ್ವಿಗುಣಗೊಳ್ಳುತ್ತದೆ.

ಜಗದೀಶ ಎಸ್. ಗಿರಡ್ಡಿ, ಗೊರಬಾಳ, ಇಳಕಲ್

ಅಡ್ಡದಾರಿಯಲ್ಲಿ ಹಣ ಗಳಿಸುವ ಹಪಹಪಿ ಏಕೆ?

ಪ್ರತಿಭಾವಂತ ವಿದ್ಯಾರ್ಥಿಗಳು, ಯುವಕರು ದೇಶದ ಆಸ್ತಿ ಎನ್ನಲಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವರ ಪ್ರತಿಭೆಯು ಆತಂಕಕಾರಿ ವಿಷಯಗಳಿಗೆ ಬಳಕೆಯಾಗುತ್ತಿರುವುದು ವಿಪರ್ಯಾಸ. ಭವಿಷ್ಯದ ಯುವಪೀಳಿಗೆಯ ಚಿತ್ತ ಎತ್ತ ಸಾಗುತ್ತಿದೆ ಎಂಬುದರ ಬಗ್ಗೆ ಪ್ರಜ್ಞಾವಂತ ಸಮಾಜ ಯೋಚಿಸಬೇಕಾದ ಅಗತ್ಯವಿದೆ. ಉನ್ನತ ತಂತ್ರಜ್ಞಾನ (ಐಐಟಿ) ಪದವೀಧರನೊಬ್ಬ ಸಣ್ಣ ವಯಸ್ಸಿನಲ್ಲಿಯೇ ಸುಲಭವಾಗಿ ಹಣ ಗಳಿಸುವ ದುರುದ್ದೇಶದಿಂದ ಬ್ಯಾಂಕ್ ಮತ್ತಿತರ ಸಂಸ್ಥೆಗಳ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿ ಕೋಟ್ಯಂತರ ರೂಪಾಯಿ ದುರ್ಬಳಕೆ ಮಾಡಿಕೊಂಡಿರುವ ಆರೋಪ ಕೇಳಿಬಂದಿರುವುದು (ಪ್ರ.ವಾ., ಸೆ. 13) ಸಣ್ಣ ಸಂಗತಿಯಲ್ಲ. ಒಬ್ಬ ಉತ್ತಮ ವೈದ್ಯ, ಎಂಜಿನಿಯರ್, ಶಿಕ್ಷಕರಂತಹ ವೃತ್ತಿಪರರನ್ನು ಸಿದ್ಧಗೊಳಿಸಲು ಸರ್ಕಾರ ಏನೆಲ್ಲ ಪ್ರಯತ್ನ ಮಾಡುತ್ತಿದೆ. ಇದಕ್ಕಾಗಿ ಎಷ್ಟೊಂದು ಸಂಸ್ಥೆಗಳು ಕೆಲಸ ಮಾಡುತ್ತಿವೆ. ಹೀಗಿರುವಾಗ, ಪದವಿ ಪಡೆದ ನಂತರ ಇವರು ಸದೃಢ ರಾಷ್ಟ್ರ ನಿರ್ಮಾಣಕ್ಕೆ ಉತ್ತಮ ಬುನಾದಿ ಹಾಕುವಂತೆ ಆಗಬೇಕಿದೆ.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ವಿವಾದ ಶಾಶ್ವತ: ದಿನಗೂಲಿಯಂಥ ಪರಿಹಾರ!

ಮತ್ತೆ ಕಾವೇರಿ ನದಿ ನೀರಿನ ಸಂಕಷ್ಟ ಎದುರಾಗಿರುವ ಕುರಿತ ವರದಿ (ಪ್ರ.ವಾ., ಸೆ. 13) ಓದಿ ಮನಸ್ಸಿಗೆ ಖೇದವುಂಟಾಯಿತು. ಸ್ವಾತಂತ್ರ್ಯ ಬಂದು ಏಳೂವರೆ ದಶಕಗಳೇ ಕಳೆದರೂ ರಾಷ್ಟ್ರದಲ್ಲಿ ಅಂತರರಾಜ್ಯ ಜಲವಿವಾದ, ಗಡಿವಿವಾದ, ಭಾಷಾವಿವಾದ, ವಲಸಿಗರ ವಿವಾದ, ಒತ್ತುವರಿಯಂತಹ ಹಲವಾರು ವಿವಾದಗಳು ಎಂದೆಂದಿಗೂ ಪರಿಹಾರ ಕಾಣದೆ ಶಾಶ್ವತವಾಗಿ ಉಳಿದು, ಜನರಿಗೆ ವ್ಯವಸ್ಥೆಯ ಬಗ್ಗೆ ಭ್ರಮನಿರಸನ ಉಂಟಾಗುವಂತೆ ಮಾಡಿವೆ. ಈ ಬೇಗುದಿಗೆ ಮೂಲಕಾರಣ– ಇಚ್ಛಾಶಕ್ತಿರಹಿತ ಹೊಂದಾಣಿಕೆ ರಾಜಕಾರಣ ಎಂದೇ ಹೇಳಬಹುದು. ಸಮಸ್ಯೆಗಳಿಗೆ ತಾತ್ಕಾಲಿಕ ಪರಿಹಾರವನ್ನಷ್ಟೇ ಒದಗಿಸುತ್ತಿರುವುದು, ಆ ಹೊತ್ತಿನ ಊಟಕ್ಕೆ ಸಂಪಾದಿಸಿದ ದಿನಗೂಲಿಯಂತಾಗಿದೆ. ಹೀಗಾಗಿ ಇಂದಿಗೂ ಜಲವಿವಾದಗಳು ಜೀವಂತವಾಗಿವೆ. ಇಂತಹ ವಿವಾದಗಳಿಂದಾಗಿ ದೇಶದಲ್ಲಿನ ಸಾಮಾಜಿಕ ವ್ಯವಸ್ಥೆ ತನ್ನ ದಿವಾಳಿತನವನ್ನು ಆಗಾಗ ಪ್ರದರ್ಶಿಸುತ್ತಲೇ ಇದೆ. ರಾಜಕೀಯ ಪಕ್ಷಗಳು ಇಂತಹ ವಿವಾದಗಳನ್ನು ಅಧಿಕಾರದ ಏಣಿಯಾಗಿ ಬಳಸಿಕೊಳ್ಳುತ್ತಿವೆ.

ರಮೇಶ್, ಬೆಂಗಳೂರು

ಬಡತನ ಇರಬಹುದು, ಆದರೆ...

ರಾಷ್ಟ್ರಪತಿಯಾಗಿದ್ದ ಡಾ. ರಾಜೇಂದ್ರ ಪ್ರಸಾದ್ ಅವರು ಬೆಳಗಾವಿ ಜಿಲ್ಲೆಯ ಘಟಪ್ರಭಾ ಗ್ರಾಮದ ಕರ್ನಾಟಕ ಆರೋಗ್ಯಧಾಮಕ್ಕೆ ಭೇಟಿ ನೀಡಿದ್ದರು. ಭಾರತ ಸೇವಾದಳದ ಸಂಸ್ಥಾಪಕ, ರಾಜ್ಯಸಭೆಯ ಸದಸ್ಯರಾಗಿದ್ದ ನಾ.ಸು. ಹರ್ಡಿಕರ್ ಅಲ್ಲಿಯೇ ವಾಸವಾಗಿದ್ದರು. ರಾಷ್ಟ್ರಪತಿ ಊಟಕ್ಕೆ ಗೋವಿನ ಜೋಳದ ರೊಟ್ಟಿ, ನುಚ್ಚು, ಮಜ್ಜಿಗೆ ವ್ಯವಸ್ಥೆ ಮಾಡಿದ್ದರು. ಯಾವ ವಿಶೇಷ ಖಾದ್ಯಗಳನ್ನೂ ಅವರು ಮಾಡಿಸಿರಲಿಲ್ಲ. ಯಾರು ಎಷ್ಟೇ ಆಗ್ರಹಪಡಿಸಿದರೂ ಅವರು ವಿಶೇಷ ಖಾದ್ಯ ಸಿದ್ಧಪಡಿಸಲು ಒಪ್ಪಲಿಲ್ಲ. ಸ್ಥಳೀಯರು ಊಟ ಮಾಡುವ ಸಾದಾ ಆಹಾರವನ್ನೇ ರಾಷ್ಟ್ರಪತಿ ಊಟ ಮಾಡಲಿ, ಅವರ ತೊಂದರೆಗಳನ್ನು ನೋಡಲಿ ಎಂಬುದು ಹರ್ಡಿಕರ್ ಅವರ ಉದ್ದೇಶವಾಗಿತ್ತು. ರಾಷ್ಟ್ರಪತಿ ಹಾಗೂ ಅವರೊಂದಿಗೆ ಆಗಮಿಸಿದ್ದ ರಾಜ್ಯದ ಗಣ್ಯರು ಊಟ ಮಾಡಿದರು. ನಂತರ ಹರ್ಡಿಕರ್ 'ನಮ್ಮದು ಬಡವರ ಊಟ. ನಾವು ಇಲ್ಲಿ ಗೋವಿನ ಜೋಳ ಮಾತ್ರ ಬೆಳೆಯುತ್ತೇವೆ. ಅದೇ ನಮ್ಮ ಊಟ. ತಮಗೂ ಅದನ್ನೇ ಬಡಿಸಿದ್ದೇವೆ' ಎಂದು ಹೇಳಿದರು. 'ಊಟ ತುಂಬ ರುಚಿಯಾಗಿತ್ತು, ಅದರೊಂದಿಗೆ ಪ್ರೀತಿಯೂ ತುಂಬಿತ್ತು' ಎಂದು ರಾಜೇಂದ್ರ ಪ್ರಸಾದ್ ಪ್ರತಿಕ್ರಿಯೆ ನೀಡಿದ್ದರು. ಇದೇ ಸಂದರ್ಭವನ್ನು ಬಳಸಿಕೊಂಡು 'ಇದು ಒಣ ಬೇಸಾಯದ ಪ್ರದೇಶ. ಇಲ್ಲಿಯ ಜನರಿಗೆ ನೆರವಾಗುವುದಕ್ಕೆ ಘಟಪ್ರಭಾ ನದಿಗೆ ಹಿಡಕಲ್ ಬಳಿ ಜಲಾಶಯ ನಿರ್ಮಿಸಿ ನೀರಾವರಿ ಸೌಲಭ್ಯ ಒದಗಿಸಬೇಕು' ಎಂದು ಹರ್ಡಿಕರ್ ಮನವಿ ಮಾಡಿದರು. ರಾಷ್ಟ್ರಪತಿ ಹಾಗೂ ಅಲ್ಲಿ ಉಪಸ್ಥಿತರಿದ್ದ ರಾಜ್ಯದ ಪ್ರಮುಖರು ಹಿಡಕಲ್ ಜಲಾಶಯ ನಿರ್ಮಾಣದ ಬೇಡಿಕೆ ಸೂಕ್ತವಾಗಿದೆ ಎಂದು ಹೇಳಿದರು. ಕೆಲವೇ ವರ್ಷಗಳಲ್ಲಿ ಡ್ಯಾಮ್ ನಿರ್ಮಾಣವಾಯಿತು. ನೀರಾವರಿ ಸೌಲಭ್ಯ ದೊರೆತು ಜನರ ಆರ್ಥಿಕ ಅಭಿವೃದ್ಧಿಗೆ ನೆರವಾಯಿತು.

ಈಚೆಗೆ ದೆಹಲಿಯಲ್ಲಿ ನಡೆದ ಜಿ20 ಶೃಂಗಸಭೆಯ ಸಂದರ್ಭದಲ್ಲಿ ರಾಜಧಾನಿಯ ಸೌಂದರ್ಯೀಕರಣದ ನೆಪದಲ್ಲಿ ಸುತ್ತಮುತ್ತಲಿನ ಕೊಳೆಗೇರಿಗಳನ್ನು ತೆರವು ಮಾಡಲಾಗಿತ್ತು ಮತ್ತು ಕೆಲವು ಕೊಳೆಗೇರಿಗಳಿಗೆ 20 ಅಡಿ ಎತ್ತರದ ಪರದೆ ಹೊದಿಸಲಾಗಿತ್ತು ಎಂಬ ವರದಿಗಳನ್ನು ಓದಿದಾಗ, ಹರ್ಡಿಕರ್ ಅವರ ಮಾದರಿ ನಡೆ ನೆನಪಾಯಿತು. ಕೊಳೆಗೇರಿ ಜನರನ್ನು ಏಕಾಏಕಿ ಸ್ಥಳಾಂತರಿಸಿದ್ದರಿಂದ ಅವರು ಅನುಭವಿಸಿದ ನೋವು, ಸಂಕಟ ಅಷ್ಟಿಷ್ಟಲ್ಲ. ಕೆಲವು ಕೊಳೆಗೇರಿಗಳು ಕಾಣದಂತೆ ಪರದೆ ಹೊದಿಸಿ ಮುಚ್ಚಿಡುವ ಪ್ರಯತ್ನ ಮಾಡಿದ್ದು ಕೂಡ ಸರಿಯಲ್ಲ. ಬಡತನವನ್ನು ಮುಚ್ಚಿಡುವುದು, ಬಡತನ ಅಪಮಾನವೆಂದು ಭಾವಿಸುವುದು ಸರಿಯಲ್ಲ. ಪರಿಹಾರಕ್ಕೆ ಸೂಕ್ತ ಮಾರ್ಗದಲ್ಲಿ ಪ್ರಯತ್ನಿಸುವುದು, ಅವರ ಬದುಕು ಉನ್ನತೀಕರಿಸುವುದು ಸರಿಯಾದ ನಡೆಯಾಗಿದೆ. ಬಡತನ ಇರಬಹುದು, ಆದರೆ ಅದನ್ನು ಉಳಿಸಿಕೊಂಡು ಹೋಗುವ ವ್ಯವಸ್ಥೆ ಕೆಟ್ಟದ್ದು ಎಂದು ಸಮಾಜ ಚಿಂತಕರು ಹೇಳುವ ಮಾತನ್ನು ನಾಯಕರು ಅರಿಯಬೇಕು.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಎಂಥಾ ಕಾಲ?!

ನಕಲಿ ದಾಖಲೆಗಳನ್ನು
ಸೃಷ್ಟಿಸಿದವರ ಕಂಡಿದ್ದೇವೆ
ನಕಲಿ ನೋಟುಗಳ
ಠಂಕಿಸಿದವರ ನೋಡಿದ್ದೇವೆ
ಆದರೆ...
ನಕಲಿ ನಾಯಕರನ್ನೇ ಸೃಷ್ಟಿಸುವ
ಕಲೆಗಾರರು ಪ್ರತ್ಯಕ್ಷರಾಗಿದ್ದಾರಂತೆ!

ಎಚ್.ಕೆ.ಕೊಟ್ರಪ್ಪ, ಹರಿಹರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಾವಲಿಗಳು ಎಲ್ಲೆಡೆ ಇದ್ದರೂ ಕೇರಳದಲ್ಲಷ್ಟೇ ಏಕೆ ನಿಪಾ?

ಕೇರಳದಲ್ಲಿ ನಿಪಾ ವೈರಾಣು ಈಗ ನಾಲ್ಕನೇ ಬಾರಿಗೆ ಕಾಣಿಸಿಕೊಂಡಿದೆ. ಈ ಹಿಂದಿಗಿಂತ ಹೆಚ್ಚು ಕಠಿಣವಾದ ನಿಯಂತ್ರಣ ಕ್ರಮಗಳನ್ನು ತೆಗೆದುಕೊಂಡಿರುವ ಕಾರಣ, ಬೆರಳೆಣಿಕೆಯ ಮಂದಿಗಷ್ಟೇ ನಿಪಾ ಹರಡಿದ್ದು, ಸಾವಿನ ಪ್ರಮಾಣವೂ ಕಡಿಮೆ ಇದೆ. ಹಣ್ಣು ತಿನ್ನುವ ಬಾವಲಿಗಳ ಪ್ರಭೇದಕ್ಕೆ ಸೇರಿದ 'ಫ್ಲೈಯಿಂಗ್ ಫಾಕ್ಸ್' ಬಾವಲಿಗಳಲ್ಲಿ ಈ ವೈರಾಣು ಇರುತ್ತದೆ ಮತ್ತು ಆ ಬಾವಲಿಗಳಿಂದಲೇ ಇದು ಹರಡುತ್ತದೆ ಎಂಬುದು ಈಗಾಗಲೇ ಪತ್ತೆಯಾಗಿದೆ. ಭಾರತದ ಬಹುತೇಕ ಕಡೆ ಇಂತಹ ಬಾವಲಿಗಳಿದ್ದರೂ ಕೇರಳದಲ್ಲಿ ಮಾತ್ರ ನಿಪಾ ಹರಡುತ್ತಿರುವುದು ಇಂಥದ್ದೇ ಕಾರಣಕ್ಕೆ ಎಂಬುದನ್ನು ಪತ್ತೆ ಮಾಡಲು ಸಾಧ್ಯವಾಗಿಲ್ಲ. ನಿಪಾ ವೈರಾಣು ಕಾಣಿಸಿಕೊಂಡಾಗಲೆಲ್ಲಾ ರಾಷ್ಟ್ರೀಯ ವೈರಾಣು ವಿಜ್ಞಾನ ಸಂಸ್ಥೆಯ ತಂಡ ಕೇರಳಕ್ಕೆ ಭೇಟಿ ಅಧ್ಯಯನ ನಡೆಸುತ್ತದೆ. ಆದರೆ, ಈ ಸಂಬಂಧ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ

ಪ್ರಜಾವಾಣಿ ವಾರ್ತೆ

ಕೇರಳದ ಕೋಯಿಕ್ಕೋಡ್‌ನ ಸೂಪ್ಪಿಕ್ಕಡ ಬಳಿಯ ಗ್ರಾಮವೊಂದರಲ್ಲಿ 2018ರ ಮೇನಲ್ಲಿ ನಿಪಾ ವೈರಾಣು ಕಾಣಿಸಿಕೊಂಡಿತ್ತು. ಆಗ ನಿಪಾಗೆ 17 ಮಂದಿ ಬಲಿಯಾಗಿದ್ದರು. ಮೊದಲು ವೈರಾಣು ಕಾಣಿಸಿಕೊಂಡಿದ್ದ ಮಹಿಳೆಯ ಹಲವು ದಿನಗಳ ದಿನಚರಿಯನ್ನು ಅಧ್ಯಯನ ಮಾಡಿದ ನಂತರ, ಆಕೆ ಬಾವಲಿಯೊಂದನ್ನು ಬರಿಗೈನಿಂದ ಮುಟ್ಟಿದ್ದರು ಎಂಬುದು ಗೊತ್ತಾಗಿತ್ತು. ಅವರಲ್ಲಿದ್ದ ವೈರಾಣು ಮತ್ತು ಆ ಜಾತಿಯ ಬಾವಲಿಗಳಲ್ಲಿನ ಮಾದರಿಗಳನ್ನು ಅಧ್ಯಯನ ಮಾಡಿದಾಗ, ನಿಪಾ ವೈರಾಣು ಆ ಬಾವಲಿಯಿಂದಲೇ ಬಂದಿದ್ದು ಎಂಬುದು ಪತ್ತೆಯಾಗಿತ್ತು. ಕೇರಳದಲ್ಲಿ 2019ರಲ್ಲಿ, 2021ರಲ್ಲೂ ನಿಪಾ ವೈರಾಣು ಕಾಣಿಸಿಕೊಂಡಿತ್ತು. ಇಷ್ಟೂ ವರ್ಷಗಳ ಅವಧಿಯಲ್ಲಿ ನಿಪಾ ವೈರಾಣು ಬಗ್ಗೆ ಕೇರಳದ ವಿವಿಧ ಸಂಸ್ಥೆಗಳು ಅಧ್ಯಯನ ನಡೆಸುತ್ತಲೇ ಇದ್ದವು. ರಾಷ್ಟ್ರೀಯ ವೈರಾಣು ವಿಜ್ಞಾನ ಸಂಸ್ಥೆ ಸಹ ಕೇರಳದ ಹಲವೆಡೆ ಬಾವಲಿಗಳಲ್ಲಿ ವೈರಾಣುಗಳ ಮಾದರಿಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸಿತ್ತು. ಕೇರಳದಲ್ಲಿರುವ ಫ್ಲೈಯಿಂಗ್ ಫಾಕ್ಸ್ ಬಾವಲಿಗಳಲ್ಲಿ ನಿಪಾ ವೈರಾಣು ಇದ್ದು, ಇದು ಇಡೀ ಕೇರಳದಲ್ಲಿ ಹರಡುವ ಸಾಧ್ಯತೆ ಇದೆ ಎಂದು ಹೇಳಿತ್ತು. ಆದರೆ, ಕೇರಳದ ಕೋಯಿಕ್ಕೋಡ್ ಮತ್ತು ಮಲ್ಲಪ್ಪುರ ಜಿಲ್ಲೆಯ ಕೆಲವು ಗ್ರಾಮಗಳಲ್ಲಷ್ಟೇ ನಿಪಾ ವೈರಾಣು ಕಾಣಿಸಿಕೊಳ್ಳುತ್ತಿದೆ. ವೈರಾಣು ಕಾಣಿಸಿಕೊಂಡ ಗ್ರಾಮಗಳೆಲ್ಲವೂ ಹತ್ತಾರು ಕಿ.ಮೀ. ದೂರದ ವ್ಯಾಪ್ತಿಯಲ್ಲಿಯೇ ಇವೆ ಎಂಬುದು ವಿಜ್ಞಾನಿಗಳ ಗಮನ ಸೆಳೆದ ಅಂಶ.

2019ರಲ್ಲಿ ತಿರುವನಂತಪುರದ ಸರ್ಕಾರಿ ವೈದ್ಯಕೀಯ ಕಾಲೇಜಿನ ಅಂಟುರೋಗ ವಿಭಾಗವು ನಿಪಾ ವೈರಾಣು ಬಗ್ಗೆ ಅಧ್ಯಯನ ನಡೆಸಿತ್ತು. ತ್ರಿಶ್ಶೂರ್‌ನ ಹವಾಮಾನ ಬದಲಾವಣೆ ಮತ್ತು ಪರಿಸರ ವಿಜ್ಞಾನ ಕಾಲೇಜು ಸಹ ಈ ಅಧ್ಯಯನದಲ್ಲಿ ಜತೆಯಾಗಿತ್ತು. ನಿಪಾ ವೈರಾಣು ಫ್ಲೈಯಿಂಗ್ ಫಾಕ್ಸ್ ಬಾವಲಿಗಳಲ್ಲಿ ಸದಾ ಇದ್ದೇ ಇರುತ್ತವೆ. ಆದರೆ, ಅವು ಬಾವಲಿಗಳ ದೇಹದಿಂದ ಹೊರಗೆ ಬೀಳುವುದಿಲ್ಲ. ಹೊರಗೆ ಬಿದ್ದಾಗ ಮಾತ್ರ ಅವು ಬೇರೆ ಪ್ರಾಣಿಗಳಿಗೆ ಮತ್ತು ಮನುಷ್ಯನಿಗೆ ಹರಡುವ ಅಪಾಯವಿರುತ್ತದೆ ಎಂಬುದು ಅಧ್ಯಯನದಿಂದ ಗೊತ್ತಾಗಿತ್ತು. ಹಾಗಿದ್ದಲ್ಲಿ, ಯಾವ ಸಂದರ್ಭದಲ್ಲಿ ನಿಪಾ ವೈರಾಣು ಬಾವಲಿಗಳ ಮಲ-ಮೂತ್ರ ಮತ್ತು ಜೊಲ್ಲಿನ ಮೂಲಕ ಹೊರಬರುತ್ತವೆ ಎಂಬುದನ್ನು ಪತ್ತೆ ಮಾಡುವತ್ತ ವಿಜ್ಞಾನಿಗಳ ತಂಡ ಗಮನ ಕೇಂದ್ರೀಕರಿಸಿತ್ತು.

2018 ಮತ್ತು 2019ರಲ್ಲಿ ನಿಪಾ ವೈರಾಣು ಕಾಣಿಸಿಕೊಂಡಿದ್ದು ಏಪ್ರಿಲ್-ಮೇ ತಿಂಗಳಿನಲ್ಲಿ. ಫ್ಲೈಯಿಂಗ್ ಫಾಕ್ಸ್ ಬಾವಲಿಗಳ ಸಂತಾನೋತ್ಪತ್ತಿ ಅವಧಿ ಡಿಸೆಂಬರ್-ಮೇ. ಈ ಅವಧಿಯಲ್ಲಿ ಈ ಬಾವಲಿಗಳ ದೈನಂದಿನ ಚಟುವಟಿಕೆಗಳು ಅತ್ಯಂತ ಒತ್ತಡದಿಂದ ಕೂಡಿರುತ್ತವೆ. ಈ ಬಾವಲಿಗಳ ಮೇಲೆ ಒತ್ತಡ ಹೆಚ್ಚಾದಾಗ ನಿಪಾ ವೈರಾಣು ಅವುಗಳ ದೇಹದಿಂದ ಹೊರಗೆ ಬೀಳುತ್ತದೆ ಎಂಬ ತೀರ್ಮಾನಕ್ಕೆ ಬರಲಾಗಿತ್ತು. ಆದರೆ, ಹಾಗಿದ್ದಲ್ಲಿ ಅಂತಹ ಬಾವಲಿಗಳು ಇರುವೆಡೆಯೆಲ್ಲಾ, ಅವುಗಳ ಸಂತಾನೋತ್ಪತ್ತಿ ಅವಧಿಯಲ್ಲಿ ನಿಪಾ ವೈರಾಣು ಹರಡಬೇಕಿತ್ತು. ಆದರೆ, ಬೇರೆ ಕಡೆ ಹಾಗಾಗುತ್ತಿಲ್ಲ. ಜತೆಗೆ 2021ರಲ್ಲಿ ನಿಪಾ ವೈರಾಣು ಕಾಣಿಸಿಕೊಂಡಿದ್ದು ಸೆಪ್ಟೆಂಬರ್ ತಿಂಗಳಿನಲ್ಲಿ. ಹೀಗಾಗಿ ಈ ಬಾವಲಿಗಳ ದೇಹದಿಂದ ನಿಪಾ ವೈರಾಣು ಹೊರಬೀಳುವುದು ಸಂತಾನೋತ್ಪತ್ತಿ ಅವಧಿಯ ಒತ್ತಡದಿಂದ ಮಾತ್ರವಲ್ಲ. ಬದಲಿಗೆ ಬಾಹ್ಯ ಒತ್ತಡಗಳೂ ಇದನ್ನು ಪ್ರಭಾವಿಸುತ್ತಿವೆ. ಹಾಗಿದ್ದಲ್ಲಿ ನಿಪಾ ವೈರಾಣು ಹೊರಬೀಳುವಂತೆ ಮಾಡುತ್ತಿರುವ ಬಾಹ್ಯ ಒತ್ತಡ ಯಾವುದು ಎಂಬುದರತ್ತಲೂ ವಿಜ್ಞಾನಿಗಳ ತಂಡ ಗಮನ ನೀಡಿತು.

ಈ ಅಧ್ಯಯನವು ಇನ್ನೂ ನಡೆಯುತ್ತಿದ್ದು, ನಿಪಾ ವೈರಾಣು ಯಾವ ಸಂದರ್ಭದಲ್ಲಿ ಬಾವಲಿಗಳಿಂದ ಹೊರಬೀಳಬಹುದು ಎಂಬುದಕ್ಕೆ ಬೇರೆ ಸಾಧ್ಯತೆಗಳನ್ನು ಊಹಿಸಿದೆ. ಕೇರಳದಲ್ಲಿ ಈವರೆಗೆ ನಾಲ್ಕು ಬಾರಿ ನಿಪಾ ಕಾಣಿಸಿಕೊಂಡಿರುವ ಗ್ರಾಮಗಳು ಜಾನಕಿಕ್ಕಾಡ್ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡೇ ಇವೆ. ಕಲ್ಲಾಡ, ಸೂಪ್ಪಿಕ್ಕಡ, ಪಳೂರು ಗ್ರಾಮಗಳು ಈ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡೇ ಇದ್ದು, ಈ ಎಲ್ಲಾ ಗ್ರಾಮಗಳ ಭೌಗೋಳಿಕ ಲಕ್ಷಣಗಳು ಒಂದೇ ತೆರನಾಗಿವೆ. ಒಂದೆಡೆ ಅರಣ್ಯ ಪ್ರದೇಶ, ಮತ್ತೊಂದೆಡೆ ನದಿಯಿದೆ. ಅಡಿಕೆ ತೋಟಗಳು, ಮಾವಿನ ಮರಗಳು, ಅರಳೀ ಮರಗಳು ಈ ಪ್ರದೇಶದಲ್ಲಿ ಹೇರಳವಾಗಿವೆ. ಇಲ್ಲಿ ಫ್ಲೈಯಿಂಗ್ ಫಾಕ್ಸ್ ಬಾವಲಿಗಳು ಹೇರಳವಾಗಿವೆ. ಈ ಪ್ರದೇಶದಲ್ಲಿ ಅತಿಯಾದ ಉಷ್ಣಾಂಶ, ಅತಿಯಾದ ಮಳೆಯಂತಹ ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ ನಿಪಾ ವೈರಸ್ ಕಾಣಿಸಿಕೊಂಡಿದೆ. 2018 ಮತ್ತು 2019ರಲ್ಲಿ ಅತಿಯಾದ ಮಳೆ, 2021 ಮತ್ತು 2023ರಲ್ಲಿ ಮಳೆ ಕೊರತೆಯುಂಟಾದಾಗ ನಿಪಾ ಕಾಣಿಸಿಕೊಂಡಿದೆ. ಅಂದರೆ ಫ್ಲೈಯಿಂಗ್ ಫಾಕ್ಸ್ ಬಾವಲಿಗಳು ಇರುವ ಪರಿಸರದಲ್ಲಿ ಬದಲಾವಣೆ ಉಂಟಾದಾಗ ಅವು ವಿಚಲಿತವಾಗುತ್ತವೆ ಮತ್ತು ಅಂತಹ ಸಂದರ್ಭದಲ್ಲಿ ಅವುಗಳ ದೇಹದಿಂದ ನಿಪಾ ವೈರಾಣು ಹೊರಬೀಳುತ್ತದೆ ಎಂದು ವಿಜ್ಞಾನಿಗಳು ಊಹಿಸಿದ್ದಾರೆ. ಈ ಪ್ರತಿಪಾದನೆಯು ಇನ್ನೂ ಪ್ರಾಥಮಿಕ ಹಂತದಲ್ಲಿದ್ದು, ಇದನ್ನು ದೃಢಪಡಿಸಿಕೊಳ್ಳಲು ಇನ್ನಷ್ಟು ಅಧ್ಯಯನದ ಅವಶ್ಯಕತೆ ಇದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.



ಮಲೇಷ್ಯಾ-ಸಿಂಗಪುರ-ಬಾಂಗ್ಲಾದೇಶ-ಭಾರತ

1999ರಲ್ಲಿ ಮಲೇಷ್ಯಾದಲ್ಲಿ ಮೊದಲ ಬಾರಿಗೆ ನಿಪಾ ವೈರಾಣು ಕಂಡುಬಂದಿತು. ಸುಂಗೈ ನಿಪಾ ಎನ್ನುವ ಗ್ರಾಮದಲ್ಲಿ ಹಂದಿ ಸಾಕಣಿಕೆಯಲ್ಲಿ ತೊಡಗಿದ್ದ ವ್ಯಕ್ತಿಯೊಬ್ಬರಲ್ಲಿ ಈ ವೈರಾಣು ಕಾಣಿಸಿತು. ನಿಪಾ ಎನ್ನುವ ಗ್ರಾಮದಲ್ಲಿ ಈ ವೈರಾಣು ಮೊದಲ ಬಾರಿಗೆ ಕಾಣಿಸಿಕೊಂಡಿದ್ದರಿಂದ ಇದಕ್ಕೆ 'ನಿಪಾ' ಎಂದೇ ನಾಮಕರಣ ಮಾಡಲಾಯಿತು.

ಫ್ಲೈಯಿಂಗ್ ಫಾಕ್ಸ್ ಬಾವಲಿಗಳು ತಿಂದು ಬಿಟ್ಟ ಹಣ್ಣುಗಳನ್ನು ತಿಂದ ಹಂದಿಗಳಲ್ಲಿ ವೈರಾಣು ಹರಡಿ, ಹಂದಿಗಳ ಸಾಕಣಿಕೆಯಲ್ಲಿ ತೊಡಗಿದ್ದ ಮನುಷ್ಯರಲ್ಲಿಯೂ ಸೋಂಕು ಕಾಣಿಸಿಕೊಂಡಿತು. ಮಲೇಷ್ಯಾದ ಹಲವು ಭಾಗಗಳಲ್ಲಿ ಇರುವ ಹಂದಿಗಳಲ್ಲೂ ನಿಪಾ ಬಹುಬೇಗ ಕಾಣಿಸಿಕೊಳ್ಳತೊಡಗಿತು ಮತ್ತು ಈ ಮೂಲಕ ಹಂದಿಗಳ ಸಂಪರ್ಕಕ್ಕೆ ಬಂದ ಮನುಷ್ಯರನ್ನೂ ತಗುಲಿತು. ಇದೇ ವೇಳೆಗೆ ಸಿಂಗಪುರದ ಕುದುರೆಗಳಿಗೂ ನಿಪಾ ಹರಡಿ, ಕುದುರೆಗಳನ್ನು ತಿನ್ನುವ ಮನುಷ್ಯರಿಗೂ ಹಬ್ಬಿತು. ಮಲೇಷ್ಯಾದಲ್ಲಿ ಸುಮಾರು 300 ನಿಪಾ ಪ್ರಕರಣಗಳು ವರದಿಯಾಗಿ, ಸುಮಾರು 105 ಮಂದಿ ಮೃತಪಟ್ಟಿದ್ದರು. ಅಲ್ಲಿನ ಸರ್ಕಾರವು ಕ್ಷಿಪ್ರ ಕಾರ್ಯ ನಡೆಸಿ, ವೈರಾಣು ತಡೆಗಟ್ಟಲು ಹಲವು ಕ್ರಮಗಳನ್ನು ಕೈಗೊಂಡಿತು. ದೇಶದಲ್ಲಿ ಇದ್ದ ಸುಮಾರು 850 ಹಂದಿ ಸಾಕಣಿಕೆ ಕೇಂದ್ರವನ್ನು ತೀವ್ರ ನಿಗಾವಣೆಯಲ್ಲಿ ಇರಿಸಿ, ಈ ಸೋಂಕು ಹತ್ತಿದ್ದ ಹಂದಿಗಳನ್ನು ಸಾಮೂಹಿಕವಾಗಿ ಕೊಲ್ಲುವ ನಿರ್ಧಾರ ತೆಗೆದುಕೊಂಡಿತು. ಎರಡು ಹಂತಗಳಲ್ಲಿ ಸುಮಾರು 11 ಲಕ್ಷ ಹಂದಿಗಳನ್ನು ಸರ್ಕಾರ ಹತ್ಯೆ ಮಾಡಿತು. 1999ರಿಂದ ಈಚೆಗೆ ಮಲೇಷ್ಯಾದಲ್ಲಿ ನಿಪಾ ಸೋಂಕು ಕಾಣಿಸಿಕೊಂಡಿಲ್ಲ ಮತ್ತು ಇದಕ್ಕೆ ಕಾರಣವು ಇನ್ನುವರೆಗೂ ತಿಳಿದಿಲ್ಲ.

2001ರ ಹೊತ್ತಿಗೆ ಬಾಂಗ್ಲಾದೇಶದಲ್ಲಿ ನಿಪಾ ಪತ್ತೆಯಾಯಿತು. ಮಲೇಷ್ಯಾದಲ್ಲಿ ಕಾಣಿಸಿಕೊಂಡ ನಿಪಾ ತಳಿಗಿಂತ ಇದು ಭಿನ್ನವಾಗಿತ್ತು. ಇದೇ ವರ್ಷದಲ್ಲಿ ಭಾರತದ ಪಶ್ಚಿಮ ಬಂಗಾಳದ ಸಿಲಿಗುರಿಯಲ್ಲಿ ನಿಪಾ ಕಂಡುಬಂತು. ಬಾಂಗ್ಲಾದೇಶದ ನಿಪಾ ತಳಿಗೂ ಸಿಲಿಗುರಿಯಲ್ಲಿ ಕಾಣಿಸಿಕೊಂಡ ತಳಿಯೊಂದಿಗೆ ಸಾಮ್ಯತೆ ಇತ್ತು. ಫ್ಲೈಯಿಂಗ್ ಫಾಕ್ಸ್ ಬಾವಲಿಗಳು ಕೂರುವ ತಾಳೆ ಮರದಲ್ಲಿನ ತಾಳೆ ಹೆಂಡವನ್ನು ಕುಡಿದು ಬಾಂಗ್ಲಾದೇಶದಲ್ಲಿ ಮನುಷ್ಯನಿಗೆ ನಿಪಾ ಹರಡಿತು. ಬಾಂಗ್ಲಾದೇಶಕ್ಕೆ ಸಿಲಿಗುರಿ ಹತ್ತಿರ ಇರುವ ಕಾರಣ ಇಲ್ಲೂ ಸೋಂಕು ಹರಡಿಕೊಂಡಿತು. ಮಲೇಷ್ಯಾದಲ್ಲಿ ಮತ್ತೆಂದೂ ಸೋಂಕು ಕಾಣಿಸಿಕೊಳ್ಳದಿದ್ದರೂ ಭಾರತ ಹಾಗೂ ಬಾಂಗ್ಲಾದೇಶದಲ್ಲಿ ಪ್ರತಿ ವರ್ಷವೂ ನಿಪಾ ಸೋಂಕಿನ ಪ್ರಕರಣಗಳು, ಸೋಂಕಿನಿಂದ ಸಾವಿನ ಪ್ರಕರಣಗಳೂ ವರದಿಯಾಗುತ್ತಲೇ ಇದೆ.

ಮಲೇಷ್ಯಾದಲ್ಲಿ ಬಾವಲಿಗಳಿಂದ ಹಂದಿಗಳಿಗೆ ಹರಡಿತು. ಆದ್ದರಿಂದ, ಸೋಂಕು ಹರಡಿದ್ದ ಎಲ್ಲ ಹಂದಿಗಳನ್ನು ಸರ್ಕಾರ ಹತ್ಯೆ ಮಾಡಿತು. ಹಂದಿ ಸಾಕಣಿಕೆಯಲ್ಲಿ ತೊಡಗಿದ್ದ ಹಾಗೂ ಹಂದಿಗಳನ್ನು ಹತ್ಯೆ ಮಾಡಿದ ಸೈನಿಕರಿಗೆ, ಪ್ರಯೋಗಾಲಯದ ಕೆಲವರಿಗೆ ಹಾಗೂ ಮರಣೋತ್ತರ ಪರೀಕ್ಷೆ ನಡೆಸಿದ ಕೆಲವು ವ್ಯಕ್ತಿಗಳಲ್ಲಿ ಮಾತ್ರ ಸೋಂಕು ಕಾಣಿಸಿಕೊಂಡಿತ್ತು. ಆದ್ದರಿಂದ ಮಲೇಷ್ಯಾದಲ್ಲಿ ಹಂದಿಗಳಿಂದ ಮನುಷ್ಯರಿಗೆ ನಿಪಾ ಹರಡಿತು ಮತ್ತು ಇಲ್ಲಿ ಮನುಷ್ಯರಿಂದ ಮನುಷ್ಯರಿಗೆ ಸೋಂಕು ಹರಡಲೇ ಇಲ್ಲ. ಆದರೆ, ಭಾರತ ಹಾಗೂ ಬಾಂಗ್ಲಾದೇಶದಲ್ಲಿ ಮಾತ್ರ ಮನುಷ್ಯರಿಂದ ಮನುಷ್ಯರಿಗೆ ಸೋಂಕು ಹರಡುತ್ತಿದೆ. ಇದೇ ಕಾರಣದಿಂದಲೇ ವೈರಾಣುವನ್ನು ನಿಯಂತ್ರಿಸುವುದು ದೊಡ್ಡ ಸವಾಲಾಗಿದೆ.

ಆಧಾರ: ರಾಷ್ಟ್ರೀಯ ವೈರಾಣುವಿಜ್ಞಾನ ಸಂಸ್ಥೆಯ ಅಧ್ಯಯನ ವರದಿಗಳು, ವಿಶ್ವ ಆರೋಗ್ಯ ಸಂಸ್ಥೆಯ ನಿಪಾ ಕೈಪಿಡಿ, ರಾಯಿಟರ್ಸ್, ಪಿಟಿಐ, ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್ ಸಂಸ್ಥೆಯ ವರದಿಗಳು

ಸಿನಿ ಬಿಟ್ಸ್

'ಪರಿಶುದ್ಧಂ'ನಲ್ಲಿ ಸ್ಪರ್ಶ ರೇಖಾ

ನಟಿ ಸ್ಪರ್ಶ ರೇಖಾ ಮುಖ್ಯಭೂಮಿಕೆಯಲ್ಲಿರುವ 'ಪರಿಶುದ್ಧಂ' ಚಿತ್ರ ಬಿಡುಗಡೆಗೆ ಸಿದ್ಧಗೊಂಡಿದೆ. ಆರೋನ್ ಕಾರ್ತಿಕ್ ವೆಂಕಟೇಶ್ ಕಥೆ ಬರೆದು ನಿರ್ದೇಶಿಸಿದ್ದಾರೆ. ರೋಹನ್ ಕಿಡಿಯಾರ್ ಬಂಡವಾಳ ಹೂಡಿ ನಾಯಕರಾಗಿ ಕಾಣಿಸಿಕೊಂಡಿದ್ದಾರೆ.

'ಮದುವೆ ಎಂಬ ಪದ್ಧತಿ ಪರಿಶುದ್ಧವಾಗಿದ್ದು. ಗಂಡಹೆಂಡತಿ ಸಂಬಂಧದಲ್ಲಿ ಮೂರನೇ ವ್ಯಕ್ತಿ ಪ್ರವೇಶ ಆಗಬಾರದೆಂದು ಸಂದೇಶ ಚಿತ್ರದಲ್ಲಿದೆ. ಸ್ಪರ್ಶ ರೇಖಾ ನಟ ಕಲ್ಪನಾರನ್ನು ನೆನಪಿಸುವಂತಹ ಒಂದು ಪಾತ್ರ ನಿಭಾಯಿಸಿದ್ದಾರೆ' ಎನ್ನುತ್ತಾರೆ ನಿರ್ದೇಶಕರು.

ಬೆಂಗಳೂರು, ಮಂಗಳೂರು, ತುಮಕೂರು, ಬ್ಯಾಂಕಾಕ್‌ನಲ್ಲಿ ಚಿತ್ರೀಕರಣ ನಡೆಸಲಾಗಿದೆ. ಚಿತ್ರದಲ್ಲಿ ಇಂಗ್ಲಿಷ್ ಗೀತೆಯೊಂದು ಇರಲಿದ್ದು, ಇದನ್ನು ಗ್ರ್ಯಾಮಿ ಪ್ರಶಸ್ತಿಗೆ ಕಳುಹಿಸಲಾಗಿದೆ. ಎರಡೇ ಸ್ವರಗಳಲ್ಲಿ 'ಕ' ಅಕ್ಷರದೊಂದಿಗೆ ಈ ಹಾಡನ್ನು ರಚಿಸಲಾಗಿದ್ದು ಎಂ.ಡಿ.ಪಲ್ಲವಿ ಧ್ವನಿಯಾಗಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ.

ನಿರ್ದೇಶಕ ಕಾರ್ತಿಕ್ ವೆಂಕಟೇಶ್ ಅವರೇ ಸಂಗೀತ ಸಂಯೋಜಿಸಿದ್ದಾರೆ. ಎಂ.ಡಿ. ಕೌಶಿಕ್, ದಿಶಾಪೂವಯ್ಯ, ಯತಿರಾಜ್ ಮೊದಲಾದವರು ಚಿತ್ರದಲ್ಲಿದ್ದಾರೆ.

ಸ್ಪರ್ಶ ರೇಖಾ

ಹೊರಬಂತು 'ಸೂರ್ಯ' ಟೀಸರ್

ಬಹುತೇಕ ಹೊಸಬರೆ ಸೇರಿ ನಿರ್ಮಿಸಿರುವ 'ಸೂರ್ಯ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪ್ರೀತಿಯ ಜೊತೆಗೆ ಆ್ಯಕ್ಷನ್ ಕಥೆಯನ್ನು ಹೊಂದಿರುವ ಚಿತ್ರವನ್ನು ಸಾಗರ್ ನಿರ್ದೇಶಿಸಿದ್ದಾರೆ. ಯುವನಟ ಪ್ರಶಾಂತ್, ಹರ್ಷಿತಾ ಜೋಡಿಯಾಗಿ ನಟಿಸಿರುವ ಚಿತ್ರಕ್ಕೆ ಬಸವರಾಜ್ ಬೆಣ್ಣೆ ಹಾಗೂ ರವಿ ಬೆಣ್ಣೆ ಸಹೋದರರು ಬಂಡವಾಳ ಹೂಡಿದ್ದಾರೆ.

'ಬಿ.ಸುರೇಶ ಅವರ ಜೊತೆ ಸಹನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದಾಗ ಒಂದು ಕಥೆ ಮಾಡಿಟ್ಟುಕೊಂಡಿದ್ದೆ. 'ಸೂರ್ಯ' ನಾಯಕನ ಹೆಸರು. ಆತ ತನ್ನ ಪ್ರೀತಿಗೋಸ್ಕರ ಸಮರ ಸಾರಿ ಅದನ್ನು ಹೇಗೆ ಉಳಿಸಿಕೊಳ್ಳುತ್ತಾನೆ ಎನ್ನುವುದೇ ಚಿತ್ರದ ಕಥೆ. 2 ಸಾಂಗ್ ಹಾಗೂ ಸಾಹಸ ದೃಶ್ಯದ ಚಿತ್ರೀಕರಣವಷ್ಟೇ ಬಾಕಿಯಿದೆ' ಎಂದರು ನಿರ್ದೇಶಕ ಸಾಗರ್.

ಆರ್ಮುಗಂ ರವಿಶಂಕರ್, ಶ್ರುತಿ, ಪ್ರಮೋದ್ ಶೆಟ್ಟಿ, ಟಿ.ಎಸ್. ನಾಗಾಭರಣ, ಬಲ ರಾಜವಾಡಿ ಮೊದಲಾದವರು ಚಿತ್ರದಲ್ಲಿದ್ದಾರೆ. ಚಿತ್ರದ 5 ಹಾಡುಗಳಿಗೆ ಶ್ರೀಶಾಸ್ತ ಸಂಗೀತ ಸಂಯೋಜನೆ ಮಾಡಿದ್ದು, ಬಹದ್ದೂರ್ ಚೇತನ್, ಯೋಗರಾಜ ಭಟ್ ಸಾಹಿತ್ಯ ರಚಿಸಿದ್ದಾರೆ. ಮನುರಾಜ್ ಛಾಯಾಗ್ರಾಹಣವಿದೆ.

ಹರ್ಷಿತಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

156 ಗ್ರಾಂ ಎಂದು ಬರೆದಿರುವ ಚಿಕ್ಕ ಬೋರ್ಡ್ ಇರುವ ಗಾಜಿನ ಪೆಟ್ಟಿಗೆ ಒಳಗೆ ಪ್ರಧಾನಿ ನರೇಂದ್ರ ಮೋದಿ ಅವರ ಚಿನ್ನದ ಪುತ್ಥಳಿ ಇರುವ ಫೋಟೊವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. 'ಜನರು ಮೇಣದಿಂದ ಪುತ್ಥಳಿಗಳನ್ನು ಮಾಡುತ್ತಾರೆ. ಆದರೆ, ಮುಸ್ಲಿಂ ದೇಶವಾದ ಸೌದಿ ಅರೇಬಿಯಾದಲ್ಲಿ ಮೋದಿ ಅವರ ಚಿನ್ನದ ಪುತ್ಥಳಿಯನ್ನು ಮಾಡಿ, ಪ್ರತಿಷ್ಠಾಪಿಸಲಾಗಿದೆ. ಎಷ್ಟು ಶೇರ್ ಮಾಡಬೇಕು ಎಂದರೆ, ಕೆಲವರಿಗೆ ಉರಿ ಆಗುತ್ತಿರುವ ಅನುಭವವಾಗಬೇಕು' ಎಂಬ ಬರಹವನ್ನೂ ಫೋಟೊದೊಂದಿಗೆ ಬರೆದುಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಈ ಚಿನ್ನದ ಪುತ್ಥಳಿಯ ಕುರಿತು 'ಭಾರತ್ 24', 'ಇಂಡಿಯನ್ ಎಕ್ಸ್‌ಪ್ರೆಸ್' ಹಾಗೂ 'ಎನ್‌ಡಿಟಿವಿ' 2023ರ ಜನವರಿಯಲ್ಲಿ ವರದಿ, ಸಂದರ್ಶನಗಳನ್ನು ಪ್ರಕಟಿಸಿವೆ. ಈ ಪುತ್ಥಳಿಯನ್ನು ತಯಾರಿಸಿದವರು ಬಸಂತ್ ಬೋರಾ ಎನ್ನುವ ಚಿನ್ನದ ವ್ಯಾಪಾರಿ. ಇವರ ಮೂಲ ಊರು ರಾಜಸ್ಥಾನ. ಆದರೆ, ಕಳೆದ 20 ವರ್ಷಗಳಿಂದ ಗುಜರಾತ್‌ನಲ್ಲಿ ನೆಲೆಸಿದ್ದಾರೆ. ಮೋದಿ ಅವರ ದೊಡ್ಡ ಅಭಿಮಾನಿಯಾದ ಇವರು, ಗುಜರಾತ್ ವಿಧಾನಸಭೆಗೆ ಕಳೆದ ಬಾರಿ ನಡೆದ ಚುನಾವಣೆಯಲ್ಲಿ ಬಿಜೆಪಿಯು 156 ಸ್ಥಾನಗಳನ್ನು ಗೆದ್ದಿರುವ ಖುಷಿಯನ್ನು ಚಿನ್ನದ ಪುತ್ಥಳಿ ತಯಾರಿಸುವ ಮೂಲಕ ಹಂಚಿಕೊಂಡಿದ್ದಾರೆ. ಆದ್ದರಿಂದ, ಸೌದಿ ಅರೇಬಿಯಾದಲ್ಲಿ ಮೋದಿ ಅವರ ಚಿನ್ನದ ಪುತ್ಥಳಿಯನ್ನು ಸ್ಥಾಪಿಸಲಾಗಿಲ್ಲ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಸೆಪ್ಟೆಂಬರ್ 15, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಅಮಾವಾಸ್ಯೆ ಗಂ. 07-10 ನಕ್ಷತ್ರ: ಉತ್ತರಫಲ್ಗುನಿ ಅಹೋರಾತ್ರ ಯೋಗ: ಶುಭ ಗಂ. 27-42, ಕರಣ: ನಾಗ ಗಂ. 07-10, ಸಿಂಹ ಮಾಸದ 29 ನೇ ದಿನ, ಮಳೆನಕ್ಷತ್ರ: ಉತ್ತರ ಫಲ್ಗುಣಿ 1. ರಾಹುಕಾಲ : ಬೆಳಿಗ್ಗೆ 10-30 – 12-00, ಸೂರ್ಯೋದಯ : 06-23 ಸೂರ್ಯಾಸ್ತ : 06-29 ಮುಸ್ಲಿಂ ದಿನಾಂಕ : 29 ಸಫರ್, ದಿನ ವಿಶೇಷ : ಜೈನ್ ಹಬ್ಬ ಅದೃಷ್ಟ ಸಂಖ್ಯೆ : 9, 4

ಮೇಷ: ಆಫೀಸಿನಲ್ಲಿ ನಡೆಯುವ ವಿಚಾರಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು ನಿಮ್ಮ ಪರವಾಗಿಯೇ ಇರುತ್ತಾರೆ. ಸೌಂದರ್ಯವರ್ಧಕ ವಸ್ತುಗಳ ಮಾರಾಟಗಳಿಂದಾಗಿ ಆದಾಯ ಬರಲಿದೆ. ಹಸಿರು ಬಣ್ಣ ಅದೃಷ್ಟ ತರುವುದು.

ವೃಷಭ: ಸಂಗೀತಗಾರರಿಗೆ ಪ್ರತಿಭೆ ಹೊರಹಾಕಲು ಹಾಗೂ ಜನಪ್ರಿಯರಾಗಲು ಉತ್ತಮ ವೇದಿಕೆ ಸಿಗಲಿದೆ. ಎಂಜಿನಿಯರ್‌ಗಳು ಹೊರ ರಾಜ್ಯವೊಂದರಲ್ಲಿ ಕೆಲಸ ನಿರ್ವಹಿಸಬೇಕಾಗುವುದು. ಅತಿಯಾದ ಆತ್ಮವಿಶ್ವಾಸ ಸರಿಯಲ್ಲ.

ಮಿಥುನ: ಉದ್ಯೋಗದ ಆಕಾಂಕ್ಷೆ ಹೊಂದಿದವರು ಸಂದರ್ಶನ ಎದುರಿಸಲು ಬೇಕಾದ ತಯಾರಿ ನಡೆಸಿಕೊಳ್ಳಿ. ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಹೆಚ್ಚಿನ ಆದಾಯ ಲಭಿಸುತ್ತದೆ. ಉನ್ನತ ಸರ್ಕಾರಿ ನೌಕರರಿಗೆ ಸುಯೋಗದ ದಿನ.

ಕರ್ಕಾಟಕ: ಕಂಪನಿಯ ರಾಜಕೀಯ ಸನ್ನಿವೇಶಗಳು ನಿಮಗನುಕೂಲವಾಗಿದೆ, ಸ್ವಲ್ಪ ಜಾಣತನ ಪ್ರದರ್ಶಿಸಿ. ಮಗನ ತಾಂತ್ರಿಕ ವಿದ್ಯಾಭ್ಯಾಸಕ್ಕೆ ಯಾವುದೇ ಅಡ್ಡಿ ಆತಂಕಗಳು ಬಾರದಂತೆ ತಾಯಿ ಶ್ರೀ ಶಾರದಾ ದೇವಿಯನ್ನು ಪ್ರಾರ್ಥಿಸಿ.

ಸಿಂಹ: ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಹೆಂಡತಿಯ ಕುಶಲ ಮತಿಯು ಉಪಯೋಗಕ್ಕೆ ಬರುತ್ತದೆ. ತಲುಪಬೇಕಾದ ಗುರಿಯನ್ನು ತಲುಪಬೇಕಾಗಿದ್ದಲ್ಲಿ ತುಸು ಹೆಚ್ಚೇ ಪರಿಶ್ರಮ ಪಡಬೇಕಾದೀತು.

ಕನ್ಯಾ: ಹಳೆಯ ಕಹಿ ಘಟನೆಗಳಿಂದ ಕಲಿತ ಪಾಠವು, ಬಡತನದಿಂದ ಕಲಿತ ಪಾಠವು ಇಂದು ಉತ್ತಮ ರೀತಿಯಲ್ಲಿ ಉಪಯೋಗಕ್ಕೆ ಬರಲಿದೆ. ಕೆಲಸಗಳು ತೀವ್ರಗತಿಯಲ್ಲಿ ಸಾಗುತ್ತಿರುವುದು ತುಸು ಸಂತಸವೆನಿಸುವುದು.

ತುಲಾ: ರಾಜಕೀಯದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ನಿಮಗೆ ಸದ್ಯದ ಪರಿಸ್ಥಿತಿ ಅನುಕೂಲಕರವಾಗಿದೆ. ಮೇಲಧಿಕಾರಿಗಳಿಂದ ಅಚ್ಚರಿಯ ಸಂಗತಿಯೊಂದು ಕೇಳಿ ಬರಲಿದೆ. ಧ್ಯಾನ ಭಜನೆಗಳತ್ತ ಮನಸ್ಸು ನಿಲ್ಲುವುದು.

ವೃಶ್ಚಿಕ: ಸ್ವತ್ತು ಖರೀದಿಯ ವ್ಯವಹಾರಗಳಲ್ಲಿ ಸಮರ್ಥನೀಯ ತೀರ್ಮಾನ ಕೈಗೊಳ್ಳುವುದು ಅತೀ ಮುಖ್ಯ ಕೆಲಸವಾಗಿರುತ್ತದೆ. ಕುಟುಂಬದ ಹಿಂದಿನ ವಿಚಾರ ತಿಳಿಯಲು ದಾಯಾ ದಿಗಳಿಂದ ಅನುಕೂಲವಾಗಲಿದೆ.

ಧನು: ಧಾರ್ಮಿಕ ಕೆಲಸದಲ್ಲಿ ಆಸಕ್ತಿ ಮೂಡುವುದು. ವೃಥಾ ತಿರುಗಾಟದಿಂದ ಧನಹಾನಿಯಾದರೂ ಬಂಧುಗಳ ಜತೆಯಲ್ಲಿನ ಸಂಭ್ರಮ ಸಿಗಲಿದೆ. ಮಕ್ಕಳಿಂದ ಅಹಿತಕರ ಕಾರ್ಯಗಳು ನಡೆದು ಮಾನಸಿಕ ಚಿಂತೆ ಉಂಟಾಗಬಹುದು.

ಮಕರ: ವೈದ್ಯರ ಸಲಹೆಯಂತೆ ಮನಸ್ಸಿನ ಸಂಯಮಕ್ಕಾಗಿ ಯೋಗ, ಧ್ಯಾನದತ್ತ ಗಮನ ಹರಿಸಿ. ವೃತ್ತಿ ಬರಹಗಾರರಿಗೆ ವಿಪುಲ ಅವಕಾಶಗಳು ದೊರೆಯಲಿದೆ. ಮಗನ ಕಾಲೇಜಿನ ಸೀಟಿಗಾಗಿ ಅಧಿಕಾರಿಯ ನೆರವು ಪಡೆಯಲು ಪ್ರಯತ್ನಿಸಿ.

ಕುಂಭ: ಕುಟುಂಬದ ಸತ್ಕಾರ್ಯಗಳಲ್ಲಿ ಬಂಧುಗಳ ಸಕ್ರಿಯ ಪಾತ್ರವು ನಿಮ್ಮ ಜವಾಬ್ದಾರಿಯನ್ನು ಕಡಿಮೆ ಮಾಡಲಿದೆ. ಲೆಕ್ಕಪತ್ರ ಪರಿಶೋಧಕ ವೃತ್ತಿಯವರಿಗೆ ಉದ್ಯೋಗದಲ್ಲಿ ಒತ್ತಡ ಹೆಚ್ಚಲಿದೆ. ಮಾನಸಿಕವಾಗಿ ಹೆಚ್ಚು ಧೃಢರಾಗಿರುವಿರಿ.

ಮೀನ: ವ್ಯವಹಾರದಲ್ಲೂ, ಸಂಬಂಧದಲ್ಲೂ ಧನಾತ್ಮಕ ಮನೋಭಾವವೇ ನಿಮ್ಮ ಹಿಂದಿನ ಸೋಲುಗಳಿಗೆ ಕಾರಣವೆಂಬುವುದನ್ನು ಮರೆಯದಿರಿ. ಪುಣ್ಯ ಸಂಪಾದನೆಗೆ ತೀರ್ಥಯಾತ್ರೆ ಕೈಗೊಳ್ಳುವ ಬಗ್ಗೆ ಮನಸ್ಸಾಗಲಿದೆ.

ನುಡಿ ಬೆಳಗು

ವಿನಯವಿದ್ದವರಿಗಷ್ಟೇ ವಿದ್ಯೆ ವಿವೇಕ


ಪ್ರೊ. ಎಂ. ಕೃಷ್ಣೇಗೌಡ

ರಾಮಾಯಣದ ಮಹಾಯುದ್ಧ ಮುಗಿದಿತ್ತು. ರಾಮಬಾಣವನ್ನು ಎದೆಯಲ್ಲಿ ನಾಟಿಸಿಕೊಂಡಿದ್ದ ರಾವಣ ಲಂಕೆಯ ಅರಮನೆಯಲ್ಲಿ ಮರಣಶಯ್ಯೆಯಲ್ಲಿದ್ದ. ಇತ್ತ ಯುದ್ಧಭೂಮಿಯಲ್ಲಿ ರಾಮ ಒಂದು ಬಂಡೆಯ ಮೇಲೆ ಕೆನ್ನೆಗೈಯಾಗಿ ಕುಳಿತಿದ್ದ. ಮನಸ್ಸು ವಿಷಣ್ಣಕ್ಕೆ ಬಿದ್ದಿತ್ತು. ಮುಖದ ಮೇಲೆ ದುಃಖ ದುಮುಗುಡುತ್ತಿತ್ತು.

ರಾಮನ ಈ ವಿಷಣ್ಣತೆಗೆ ಕಾರಣವೇನು ಗೊತ್ತೆ? ಅವನು ಯೋಚಿಸುತ್ತಿದ್ದ. 'ಅಲ್ಲ, ಶತ್ರುತ್ವವಿದ್ದುದು ನನಗೆ ರಾವಣನಿಗೆ ಅಷ್ಟೆ. ಆದರೆ ನಾವು ಯುದ್ಧದ ನೆಪದಲ್ಲಿ ಎಷ್ಟೊಂದು ಜನರ ಪ್ರಾಣ ತೆಗೆದೆವಲ್ಲ, ಎಷ್ಟೋ ವರ್ಷಗಳಿಂದ ಎಷ್ಟೋ ಕಲಾವಿದರು, ಶಿಲ್ಪಿಗಳು, ತಂತ್ರಜ್ಞರಿಂದ ನಿರ್ಮಿತವಾದ ಈ ಸುಂದರ ಲಂಕೆಯನ್ನು ನಾಶಮಾಡಿಬಿಟ್ಟೆವಲ್ಲ, ಎಂಥ ಅನ್ಯಾಯ? ಈ ಯುದ್ಧವೆಂಬುದು ಅದೆಷ್ಟು ಅನರ್ಥಕಾರಿ, ಅಪಾಯಕಾರಿ. ಅಷ್ಟಲ್ಲದೆ ರಾವಣ ಕೂಡಾ ಕಡಿಮೆ ವಿದ್ಯಾವಂತನೇನಲ್ಲ. ಆ ಅಗಾಧ ಜ್ಞಾನ ಸಂಪನ್ಮೂಲವನ್ನು ನಾವೇ ಸಾವಿಗೆ ದೂಡಿದೆವಲ್ಲ... ಇದೆಲ್ಲಾ ಎಂಥ ಅನ್ಯಾಯ...' ಹೀಗೆಲ್ಲಾ ಆಲೋಚಿಸಿ ಲಕ್ಷ್ಮಣನನ್ನು ಕರೆದು 'ತಮ್ಮಾ ಲಕ್ಷ್ಮಣ, ಇದೀಗಲೇ ರಾವಣನ ಅರಮನೆಗೆ ಹೋಗು, ಅವನ ಬಳಿ ಅತ್ಯಂತ ವಿನಯದಿಂದ ನಿಂತು ನಾಲ್ಕು ವಿವೇಕದ ಮಾತು ಕೇಳಿ ತಿಳಿದುಕೊಂಡು ಬಾ' ಅಂದ.

ಲಕ್ಷ್ಮಣ ಅರಮನೆಗೆ ಹೋಗಿ ಅಂತಃಪುರದ ಹಂಸತೂಲಿಕಾ ತಲ್ಪದಲ್ಲಿ, ಮರಣಾಸನ್ನನಾಗಿರುವ ರಾವಣನ ತಲೆಯ ಬಳಿ ಹೋಗಿ ಕೈಮುಗಿದು ನಿಂತು, ಕಿವಿಯ ಹತ್ತಿರಕ್ಕೆ ಮುಖ ಬಾಗಿಸಿ, 'ರಾವಣೇಶ್ವರಾ, ಶ್ರೀರಾಮಚಂದ್ರನ ತಮ್ಮ ನಾನು ಲಕ್ಷ್ಮಣ ಬಂದಿದ್ದೇನೆ. ನನಗೊಂದಿಷ್ಟು ವಿವೇಕ ಹೇಳಿಕೊಡಿ...'

ಲಕ್ಷ್ಮಣ ಎಷ್ಟು ಕೂಗಿದರೂ ರಾವಣ ಕಣ್ಣು ತೆರೆಯಲಿಲ್ಲ, ಮಾತಾಡಲೂ ಇಲ್ಲ.

ನಿರಾಶೆಯ ಮುಖಹೊತ್ತು ಲಕ್ಷ್ಮಣ ಮರಳಿ ರಾಮನಲ್ಲಿಗೆ ಬಂದ. ನಡೆದದ್ದನ್ನು ಲಕ್ಷ್ಮಣ ಹೇಳಿದ. ಆಗ ವಿವೇಕಿಯಾದ ರಾಮ, ಲಕ್ಷ್ಮಣನನ್ನು ಕೇಳಿದ- 'ನೀನು ಎಲ್ಲಿ ನಿಂತು ಹೇಗೆ ಕೇಳಿದೆ ಹೇಳು'

ಲಕ್ಷ್ಮಣ ಹೇಳಿದ- 'ನಾನು ರಾವಣನ ತಲೆಯ ಬಳಿಗೇ ಹೋಗಿ, ಕಿವಿಯ ಬಳಿಗೇ ಬಾಗಿ, ಜೋರಾಗಿ ಕೂಗಿ ಕೇಳಿದೆ ಅಣ್ಣ'.

ಅದಕ್ಕೆ ರಾಮ ಹೇಳಿದ- 'ಯುದ್ಧ ಗೆದ್ದವನಾದ್ದರಿಂದ, ಆ ಅಹಂಕಾರ ನಿನಗೆ ಗೊತ್ತಿಲ್ಲದೆ ನಿನ್ನೊಳಗೆ ತುಂಬಿಕೊಂಡಿದ್ದರಿಂದ ನೀನವನ ಪಾದಗಳ ಬಳಿ ನಿಂತು ಕೇಳಲಾಗಲಿಲ್ಲ. ಲಕ್ಷ್ಮಣಾ ನಿನ್ನ ಅಹಂಕಾರ ನಿನಗೆ ಅವನ ತಲೆಯನ್ನು ಮಾತ್ರ ತೋರಿಸಿತು...ವಿದ್ಯೆ, ವಿವೇಕ ಸಿಗುವುದು ವಿನಯದಿಂದ ಕೇಳುವವರಿಗೆ, ಕಲಿಯುವವರಿಗೆ ಮಾತ್ರ...'

ಪದಬಂಧ 5442

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3. ನಡುವೆ ತಾಪವಿದ್ದಾಗ ಸಲ್ಲದ ವ್ಯವಹಾರವೇ? (4)
5. ಯಜಮಾನನ ಹುಟ್ಟುಗುಣ! (4)
6. ಕೊಂಕಿದ ಧಾರೆಯುಳ್ಳ ಧಾನ್ಯ ಕುಯ್ಯುವ ಸಾಧನ (4)
8. ಬಟ್ಟೆಗಳನ್ನು ಮಡಿ ಮಾಡುವ ಅಗಸ (4)
12. ನಸುಕಿನಲ್ಲಿ ಕಾಣುತ್ತಿರುವ ಕಾಡು ಹೂ (4)
14. ಬಿಗುಮಾನ ಬಿಟ್ಟು ತೋರಿಸುತ್ತಿರುವ ಆತ್ಮ ಪ್ರತಿಷ್ಠೆ !(4)
15. ಅವನು ತೋರಿಸುತ್ತಿರುವ ಸಹಾನುಭೂತಿ (4)
16. ಗರತಿ ಸೇರಿರುವ ವರ್ಗ! (4)

ಮೇಲಿಂದ ಕೆಳಕ್ಕೆ

1. ಶತ್ರುವೇ ಹುಟ್ಟಿಲ್ಲದವನು! (5)
2. ಸಮಾಧಾನದಿಂದ ಸೇರುವಿಕೆ! (4)
3. ಕುಳ್ಳ ಕೊಡುತ್ತಿರುವ ತೊಂದರೆ (4)
4. ನೆಕ್ಕಲು ಬಂದವನದ್ದು ವಿಚಿತ್ರ ವರ್ತನೆ! (3)
7. ಲಗೋರಿ ಆಡಿದ್ದು, ಹಣ ಹೂಳುವ ಸ್ಥಳದಲ್ಲಿ (2)
9. ಕುಳ್ಳ ಇಲ್ಲಿ ಕಾಣುತ್ತಿದ್ದಾನಲ್ಲಾ? (3)
10. ಶಾಖವನ್ನು ಅಳೆಯುವ ಸಾಧನ (5)
11. ಸಭಿಕನಿಗೆ ಕಾಣುತ್ತಿರುವ ಹೊಕ್ಕಳು! (2)
12. ಸಸ್ಯಗಳಿಂದ ತೆಗೆದಿರುವ ಜಿಡ್ಡು (4)
13. ಮಡಿವಂತನು ನೀಡಿರುವ ಪ್ರತ್ಯುತ್ತರ (4)
14. ಅಮೃತವೆಂದಿರುವುದು ಬರೀ ಸುಳ್ಳು! (3)



5441ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಭೂತಿ 3.ನಾಮಧೇಯ 5.ಪ್ರಸಾದ 7.ಸಮ 9.ನಾಳ 10.ಸಂಕಲ್ಪ 11.ಕಾಡು 12.ಣಗ 14.ಜನನ 16.ಯಜಮಾನ 17.ರಸಾಯನ

ಮೇಲಿಂದ ಕೆಳಕ್ಕೆ:
1.ಅರಸ 2.ತಿಪ್ರ 3.ನಾದ 4.ಯಮಳ 6.ಸಾಮೂಹಿಕಭೋಜನ 8.ಮರಳುಗಾಡು 9.ನಾಮಕರಣ 11.ಕಾಷಾಯ 13.ಗಗನ 14.ಜನ 15.ನರ

ಸುಡೊಕು 5828

	4				7		8	3
8			1	3				7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5827 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ಷೇರುಪೇಟೆ ವಹಿವಾಟು ▲ 52



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,070
ಇಂದಿನ ಅಂತ್ಯ	20,103
▲	33
ದಿನದ ಗರಿಷ್ಠ	20,167

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1810 (1770)
ಸೋಯಾ (ರಿಫೈನ್ಡ್)	₹890 (880)
ಸೂರ್ಯಕಾಂತಿ (ರಿಫೈನ್ಡ್)	₹885 (892)
ಪಾಮೋಲಿನ್	₹820 (820)

ವಿನಿಮಯ ದರ

$ ಡಾಲರ್	83.03
£ ಪೌಂಡ್	103.57
€ ಯುರೊ	89.07
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹8000-8000
ತುಮಕೂರು	---
ತುರುವೇಕೆರೆ	₹8200-8400

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143.50
ಆರ್‌ಎಸ್‌ಎಸ್-5	₹137.50
ಗುಡ್ ಲಾಟ್	₹125.50

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹321-525
ದ್ವಿತಳಿ (ಬಿ.ವಿ)	₹340-595

ಸುಧಾ, ಮಯೂರ ಓದಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ ಸುಂದರಮ್ಮ 15–09–2017
ಶ್ರೀ ಕೆ. ಚಿಕ್ಕಣ್ಣ 15–05–1982

ಇಂದ
ಸುಂದರ್ ಕುಮಾರ್ (ಬಿಳಿಯಣ್ಣ) ಮತ್ತು ಕುಟುಂಬ

ಮೂರನೇ ವರ್ಷದ ಪುಣ್ಯಸ್ಮರಣೆ
ದಿನಾಂಕ: 15.09.2023

ಶ್ರೀ ಕೆ. ರಾಮಚಂದ್ರ (ಚಲ್ಲಘಟ್ಟ)
(ನಿಧನ: 15.09.2020)
ಇಂತಿ ನಿಮ್ಮನ್ನು ಸದಾ ಸ್ಮರಿಸುವ:
ಆರ್. ವೆಂಕಟೇಶ್ ಮತ್ತು ಕುಟುಂಬದವರು.

ವಾಹನ ವಿತರಕರು ಗುಜರಿ ಸೌಲಭ್ಯ ಆರಂಭಿಸಿ: ಗಡ್ಕರಿ

ನವದೆಹಲಿ (ಪಿಟಿಐ): ಹಳೆಯ ವಾಹನಗಳನ್ನು ಗುಜರಿಗೆ ಹಾಕುವ ಸೌಲಭ್ಯವನ್ನು ಆರಂಭಿಸುವಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ವಾಹನ ವಿತರಕರಿಗೆ ಸಲಹೆ ನೀಡಿದ್ದಾರೆ.

ಆಟೊ ರಿಟೇಲ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, 'ವಾಹನಗಳನ್ನು ಗುಜರಿಗೆ ಹಾಕುವ ಸೌಲಭ್ಯ ಆರಂಭಿಸಲು ವಾಹನ ವಿತರಕರಿಗೆ ಸರ್ಕಾರವು ಅನುಮತಿ ನೀಡಲಿದೆ' ಎಂದು ತಿಳಿಸಿದ್ದಾರೆ.

ಪರ್ಯಾಯ ಇಂಧನ ಮತ್ತು ಜೈವಿಕ ಇಂಧನ ಬಳಕೆಗೆ ಭಾರತವು ಉತ್ತೇಜನ ನೀಡುತ್ತಿದೆ. ಭಾರತವು ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಪ್ರಮುಖ ಆರ್ಥಿಕತೆಯಾಗಿದ್ದು, ಭಾರತದ ಆರ್ಥಿಕತೆಯ ಗಾತ್ರವನ್ನು 5 ಟ್ರಿಲಿಯನ್ ಡಾಲರ್‌ಗೆ (₹ 415 ಲಕ್ಷ ಕೋಟಿ) ತಲುಪಿಸುವಲ್ಲಿ ವಾಹನ ವಿತರಕರು ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂದು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

14-9-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1820(1780)
ಒಂದು ವಾರದ ಡೆಲಿವರಿ	1815(1775)
ಸೋಯಾ ಕಚ್ಚಾ	845(829)
ಪಾಮ್ ವಾರದ ಡೆಲಿವರಿ	818(818)
ಸೂರ್ಯಕಾಂತಿ ಎಣ್ಣೆ ಕಚ್ಚಾ	800(827)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 58,350 (58,600)
ಬೆಳ್ಳಿ ಕೆ.ಜಿ 70,200 (70,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬೆಲೆ ಏರಿಕೆ ನಿಯಂತ್ರಿಸಲು ಸರ್ಕಾರದ ಕ್ರಮ: ಆಹಾರ ಕಾರ್ಯದರ್ಶಿ ಚೋಪ್ರಾ

ಗೋಧಿ ದಾಸ್ತಾನು ಮಿತಿ ಇನ್ನಷ್ಟು ಇಳಿಕೆ

ನವದೆಹಲಿ (ಪಿಟಿಐ): ಗೋಧಿ ಬೆಲೆಯು ಏರಿಕೆ ಕಾಣುತ್ತಿರುವುದರಿಂದ ಕೇಂದ್ರ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ಗೋಧಿ ದಾಸ್ತಾನು ಮಿತಿಯನ್ನು ಇನ್ನಷ್ಟು ತಗ್ಗಿಸಿದೆ. ದಾಸ್ತಾನು ಮಿತಿಯನ್ನು ಕಡಿಮೆ ಮಾಡಿಕೊಳ್ಳಲು ಒಂದು ತಿಂಗಳ ಕಾಲಾವಕಾಶ ನೀಡಲಾಗಿದೆ.

ವರ್ತಕರು, ಸಗಟು ವ್ಯಾಪಾರಿಗಳು ಮತ್ತು ದೊಡ್ಡ ಪ್ರಮಾಣದಲ್ಲಿ ವಹಿವಾಟು ನಡೆಸುವ ಮಳಿಗೆಗಳಿಗೆ ಗೋಧಿ ದಾಸ್ತಾನಿಗೆ ವಿಧಿಸಿದ್ದ 3 ಸಾವಿರ ಟನ್ ಮಿತಿಯನ್ನು 2 ಸಾವಿರ ಟನ್‌ಗೆ ಇಳಿಕೆ ಮಾಡಲಾಗಿದೆ.

ಗೋಧಿ ಬೆಲೆಯಲ್ಲಿ ಈಚೆಗೆ ಆಗಿರುವ ಏರಿಕೆಯನ್ನು ಗಮನದಲ್ಲಿ ಇಟ್ಟುಕೊಂಡು ದಾಸ್ತಾನು ಮಿತಿಯನ್ನು 2 ಸಾವಿರ ಟನ್‌ಗಳಿಗೆ ಇಳಿಕೆ ಮಾಡಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ತಿಳಿಸಿದ್ದಾರೆ.

> ಕೆಲವರು ಅಗತ್ಯಕ್ಕಿಂತಲೂ ಹೆಚ್ಚು ಗೋಧಿ ದಾಸ್ತಾನು ಹೊಂದುವ ಮೂಲಕ ಕೃತಕ ಅಭಾವ ಸೃಷ್ಟಿಸುತ್ತಿದ್ದಾರೆ. ಇದರಿಂದಾಗಿ ಅನಗತ್ಯವಾಗಿ ಬೆಲೆ ಏರಿಕೆ ಆಗುತ್ತಿದೆ
>
> **ಸಂಜೀವ್ ಚೋಪ್ರಾ,** ಕೇಂದ್ರ ಆಹಾರ ಕಾರ್ಯದರ್ಶಿ

ರಿಟೇಲ್ ದರವು ಸದ್ಯ ಕೆ.ಜಿಗೆ ₹30ರಷ್ಟು ಇದೆ. ಆದರೆ, ಎನ್‌ಸಿಡಿ-ಎಎಕ್ಸ್‌ನಲ್ಲಿ ಗೋಧಿ ಬೆಲೆಯು ಒಂದು ತಿಂಗಳಿನಲ್ಲಿ ಶೇ 4ರಷ್ಟು ಹೆಚ್ಚಾಗಿದ್ದು ಕ್ವಿಂಟಲ್‌ಗೆ ₹2,550ಕ್ಕೆ ಏರಿಕೆ ಆಗಿದೆ. ಇದರ ಪರಿಣಾಮವು ರಿಟೇಲ್ ಮಾರುಕಟ್ಟೆಯ ಮೇಲೆ ಆಗುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

ಗೋಧಿ ದಾಸ್ತಾನು ವಿವರ (ಲಕ್ಷ ಟನ್‌ಗಳಲ್ಲಿ)

255 ಆಗಸ್ಟ್ 31ರವರೆಗೆ ಇರುವ ದಾಸ್ತಾನು

202 ದೇಶಿ ಬೇಡಿಕೆ

ಅಡುಗೆ ಎಣ್ಣೆ ಆಮದು

37 ಲಕ್ಷ ಟನ್ ಈ ವರ್ಷ ಆಮದು ಮಾಡಿಕೊಂಡಿರುವ ಅಡುಗೆ ಎಣ್ಣೆ ಪ್ರಮಾಣ

27 ಲಕ್ಷ ಟನ್ ಕಳೆದ ವರ್ಷದ ಆಮದು ಪ್ರಮಾಣ

'ಹಬ್ಬದ ಋತುವಿನಲ್ಲಿ ತೀವ್ರ ಹೆಚ್ಚಳ ಇಲ್ಲ'

ದೇಶದಲ್ಲಿ ಆಹಾರ ಉತ್ಪನ್ನಗಳ ಪೂರೈಕೆ ಸಾಕಷ್ಟು ಪ್ರಮಾಣದಲ್ಲಿ ಇದೆ. ದಾಸ್ತಾನುದಾರರ ಮೇಲೆ ಕೇಂದ್ರ ಸರ್ಕಾರ ನಿಗಾ ಇಟ್ಟಿದೆ. ಹೀಗಾಗಿ ಅಕ್ಕಿ, ಗೋಧಿ, ಸಕ್ಕರೆ ಮತ್ತು ಅಡುಗೆ ಎಣ್ಣೆಯ ರಿಟೇಲ್ ಮಾರಾಟ ದರವು ಮುಂಬರುವ ಹಬ್ಬದ ಋತುವಿನಲ್ಲಿ ತೀವ್ರ ಏರಿಕೆ ಕಾಣುವ ಸಾಧ್ಯತೆ ಕಡಿಮೆ ಎಂದು ಚೋಪ್ರಾ ಹೇಳಿದ್ದಾರೆ.

ದೇಶದಲ್ಲಿ ಸಕ್ಕರೆ ದಾಸ್ತಾನು ಪ್ರಮಾಣವು 85 ಲಕ್ಷ ಟನ್ ಇದ್ದು, ಮೂರರಿಂದ ಮೂರೂವರೆ ತಿಂಗಳವರೆಗೆ ಬಳಕೆಗೆ ಸಾಕಾಗುತ್ತದೆ. ಹಬ್ಬದ ಋತುವಿಗೆ ಸರ್ಕಾರ ಸಜ್ಜಾಗಿದೆ. 25 ಲಕ್ಷ ಟನ್ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ. ಆಗಸ್ಟ್‌ನಲ್ಲಿ 2 ಲಕ್ಷ ಟನ್‌ನಷ್ಟು ಹೆಚ್ಚುವರಿಯಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಅಕ್ಕಿ ಬೆಲೆಯ ಮೇಲೆ ನಿಗಾ ಇಡಲಾಗಿದೆ. ಅಕ್ಕಿ ಬೆಲೆಯು ಶೇ 10ರಷ್ಟು ಏರಿಕೆ ಕಂಡಿರುವುದು ಆತಂಕ ಮೂಡಿಸಿದೆ. ಮುಂಗಾರು ಈ ವರ್ಷ ಉತ್ತಮವಾಗಿ ಇಲ್ಲ. ಹೀಗಾಗಿ ಉತ್ಪಾದನೆಯ ಕಡಿಮೆ ಆಗಲಿದೆ ಎನ್ನುವ ಭಾವನೆ ಸೃಷ್ಟಿಸಲಾಗುತ್ತಿದೆ. ಅಕ್ಕಿ ಬೆಲೆ ಏರಿಕೆಗೆ ಇದು ಪ್ರಮುಖ ಕಾರಣವಾಗಿದೆ ಎಂದು ಅವರು ಹೇಳಿದ್ದಾರೆ.

ಎಕ್ಸ್‌ಷೋರೂಂ ಬೆಲೆ ₹8.10 ಲಕ್ಷದಿಂದ ಆರಂಭ: ಶೈಲೇಶ್ ಚಂದ್ರ

ಮಾರುಕಟ್ಟೆ ಪ್ರವೇಶಿಸಿದ ಹೊಸ ನೆಕ್ಸಾನ್

● ಖಲೀಲ ಅಹ್ಮದ ಶೇಖ

ನವದೆಹಲಿ: ಟಾಟಾ ಮೋಟಾರ್ಸ್ ಕಂಪನಿಯು ಎರಡು ಹೊಸ ನೆಕ್ಸಾನ್ ಮಾದರಿಗಳನ್ನು ಗುರುವಾರ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಟಾಟಾ ಮೋಟರ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಶೈಲೇಶ್ ಚಂದ್ರ ಅವರು, ಟಾಟಾ ನೆಕ್ಸಾನ್ ಫೇಸ್‌ಲಿಫ್ಟ್ (ಪೆಟ್ರೋಲ್ ಮತ್ತು ಡೀಸೆಲ್) ಮತ್ತು ನೆಕ್ಸಾನ್.ಇವಿ ಮಾದರಿಗಳನ್ನು ಮಾರುಕಟ್ಟೆಗೆ ಪರಿಚಯಿಸಿದರು.

'ನೆಕ್ಸಾನ್ ಫೇಸ್‌ಲಿಫ್ಟ್ ವಾಹನಗಳಿಗೆ ಹೊಸ ರೂಪ, ನವೀಕರಣದ ನೀಡಲಾಗಿದೆ. ಇದರ ಎಕ್ಸ್‌ಷೋರೂಂ ಬೆಲೆ ₹8.10 ಲಕ್ಷದಿಂದ ಆರಂಭವಾಗುತ್ತದೆ' ಎಂದು ತಿಳಿಸಿದರು.

'ಇದರ ಡ್ಯಾಶ್‌ಬೋರ್ಡ್‌ನಲ್ಲಿ 10.5 ಇಂಚಿನ ಪರದೆಯ ಮಲ್ಟಿಮೀಡಿಯಾ ಸಿಸ್ಟಂ ಅಳವಡಿಸಲಾಗಿದೆ. ಆ್ಯಂಡ್ರಾಯ್ಡ್ ಆಟೊ, ಆ್ಯಪಲ್ ಕಾರ್‌ಪ್ಲೇ ವ್ಯವಸ್ಥೆಗಳಿವೆ. ನ್ಯಾವಿಗೇಷನ್, ಕಾಲ್ ಮೆಸೇಜ್ ನಿರ್ವಹಣೆ ಉತ್ತಮವಾಗಿದೆ. ಟರ್ನ್ ಇಂಡಿಕೇಟರ್ ಕ್ಯಾಮೆರಾ ಮತ್ತು 360 ಡಿಗ್ರಿ ಕ್ಯಾಮೆರಾಗಳ ಡಿಸ್ ಪ್ಲೇ ಆಗಿಯೂ ಇದು ಕೆಲಸ ಮಾಡಲಿದೆ. ಜತೆಗೆ 6 ಏರ್‌ಬ್ಯಾಗ್‌ಗಳು, ಪಾರ್ಕಿಂಗ್ ಸೆನ್ಸರ್ ಸೇರಿದಂತೆ ಸಾಕಷ್ಟು ಸುರಕ್ಷತಾ ವೈಶಿಷ್ಟ್ಯಗಳನ್ನು ಹೊಂದಿದೆ' ಎಂದು ತಿಳಿಸಿದರು.

ಹೊಸ ನೆಕ್ಸಾನ್‌ಇವಿ ವಾಹನ ಬಿಡುಗಡೆ ಸಮಾರಂಭದಲ್ಲಿ ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಹಳೆಯ ನೆಕ್ಸಾನ್ ಇ.ವಿ.ಗಿಂತ ಹೊಸ ನೆಕ್ಸಾನ್.ಇವಿ ವಿನ್ಯಾಸದಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ. ಇದು ಸಂಪೂರ್ಣ ಮರುವಿನ್ಯಾಸಗೊಳಿಸಲಾದ ಮುಂಭಾಗ ಮತ್ತು ಹಿಂಭಾಗವನ್ನು ಹೊಂದಿದೆ.

'ಟಾಟಾ ನೆಕ್ಸಾನ್.ಇವಿ ಫೇಸ್‌ಲಿಫ್ಟ್‌ನ ಮಧ್ಯಮ ಶ್ರೇಣಿಯ ಮಾದರಿಯು ಒಂದು ಬಾರಿ ಚಾರ್ಜ್ ಮಾಡಿದರೆ 325 ಕಿ.ಮೀ ಕ್ರಮಿಸುತ್ತದೆ. ನೆಕ್ಸಾನ್.ಇವಿ ಲಾಂಗ್‌ರೇಂಜ್ ಮಾದರಿಯು 465 ಕಿ.ಮೀವರೆಗೆ ಸಾಗಲಿದೆ' ಎಂದು ತಿಳಿಸಿದರು.

(ಕಂಪನಿಯ ಆಹ್ವಾನದ ಮೇರೆಗೆ ಪ್ರತಿನಿಧಿ ನವದೆಹಲಿಗೆ ತೆರಳಿದ್ದರು)

'ಸ್ವಿಗ್ಗಿ' ಏಳು ಪಟ್ಟಣಗಳಿಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಂಡಿ–ತಿನಿಸುಗಳನ್ನು ರೆಸ್ಟೊರೆಂಟ್‌ಗಳಿಂದ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಸ್ವಿಗ್ಗಿ ಕಂಪನಿಯು, ಬಳ್ಳಾರಿ, ವಿಜಯಪುರ, ಚಿಕ್ಕಮಗಳೂರು, ಕಲಬುರ್ಗಿ, ಹಾವೇರಿ, ಶಿರಸಿ, ಕುಂದಾಪುರ–ಕೋಟೇಶ್ವರಕ್ಕೆ ತನ್ನ ಸೇವೆಯನ್ನು ವಿಸ್ತರಿಸಿದೆ.

'ಸ್ಥಳೀಯರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದಕ್ಕೆ ನಾವು ಉತ್ಸುಕರಾಗಿದ್ದೇವೆ' ಎಂದು ಕಂಪನಿಯ ಆಹಾರ ಮಾರುಕಟ್ಟೆ ವಿಭಾಗದ ರಾಷ್ಟ್ರೀಯ ಬ್ಯುಸಿನೆಸ್ ಹೆಡ್ ಸಿದ್ಧಾರ್ಥ ಭಾಕೂ ಹೇಳಿರುವುದಾಗಿ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಆಗಸ್ಟ್‌ನಲ್ಲಿ ಸಗಟು ಹಣದುಬ್ಬರ ಅಲ್ಪ ಏರಿಕೆ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರ ಪ್ರಮಾಣವು ಸತತ ಐದನೆಯ ತಿಂಗಳಲ್ಲಿಯೂ ಶೂನ್ಯಕ್ಕಿಂತ ಕಡಿಮೆ ಮಟ್ಟದಲ್ಲಿ ಇದೆ. ಆಗಸ್ಟ್‌ನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇಕಡ (–)0.52 ಆಗಿದೆ. ಆದರೆ ಜುಲೈನಲ್ಲಿ ದಾಖಲಾಗಿದ್ದ ಸಗಟು ಹಣದುಬ್ಬರ ಪ್ರಮಾಣಕ್ಕೆ ಹೋಲಿಸಿದರೆ ಇದು ತುಸು ಹೆಚ್ಚು.

ತರಕಾರಿಗಳು, ಈರುಳ್ಳಿ ಮತ್ತು ಬೇಳೆಕಾಳುಗಳ ಬೆಲೆಯಲ್ಲಿ ಆಗಿರುವ ಏರಿಕೆಯು ಆಗಸ್ಟ್‌ನಲ್ಲಿ ಸಗಟು ಹಣದುಬ್ಬರ ತುಸು ಹೆಚ್ಚಾಗಲು ಕಾರಣ. ಏಪ್ರಿಲ್‌ನಿಂದಲೂ ಸಗಟು ಹಣದುಬ್ಬರ ಪ್ರಮಾಣವು ಶೂನ್ಯಕ್ಕಿಂತ ಕಡಿಮೆ ಮಟ್ಟದಲ್ಲಿ ಇದೆ.

ಆಗಸ್ಟ್‌ನಲ್ಲಿ ಹಣದುಬ್ಬರ

48.69% ತರಕಾರಿ ಬೆಲೆ ಏರಿಕೆ ಪ್ರಮಾಣ

31.42% ಈರುಳ್ಳಿ ಬೆಲೆ ಏರಿಕೆ ಪ್ರಮಾಣ

ಹಿಂದಿನ ವರ್ಷದ ಆಗಸ್ಟ್‌ನಲ್ಲಿ ಇದು ಶೇ 12.48ರಷ್ಟು ಆಗಿತ್ತು. ಈ ವರ್ಷದ ಆಗಸ್ಟ್‌ನಲ್ಲಿ ಆಹಾರ ವಸ್ತುಗಳ ಸಗಟು ಹಣದುಬ್ಬರ ಪ್ರಮಾಣವು ಶೇ 10.60ರಷ್ಟು ಆಗಿದೆ.

'ಮುಂದಿನ ಕೆಲವು ತಿಂಗಳವರೆಗೆ ಸಗಟು ಹಣದುಬ್ಬರವು ಶೂನ್ಯಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರಲಿದೆ ಎಂಬುದು ನಮ್ಮ ನಿರೀಕ್ಷೆ. ಇದರ ಪರಿಣಾಮವಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಮುಂದಿನ ಎರಡು ತ್ರೈಮಾಸಿಕಗಳವರೆಗೆ ಶೇ 5.5ರಿಂದ ಶೇ 6.5ರ ನಡುವೆ ಇರುವ ಅಂದಾಜು ಮಾಡಲಾಗಿದೆ' ಎಂದು ಅಕ್ಯುಟೆ ರೇಟಿಂಗ್ಸ್ ಆ್ಯಂಡ್ ರಿಸರ್ಚ್‌ನ ಮುಖ್ಯ ಅರ್ಥಶಾಸ್ತ್ರಜ್ಞ ಸುಮನ್ ಚೌಧರಿ ಹೇಳಿದ್ದಾರೆ.

ಹಾರುವ ತಟ್ಟೆ: ನಾಸಾ ವರದಿ ಬಿಡುಗಡೆ

ಕೇಪ್ ಕೆನವೆರಾಲ್(ಅಮೆರಿಕ)(ಎಪಿ): ಹಾರುವ ತಟ್ಟೆಗಳ ಕುರಿತ ಅಧ್ಯಯನಕ್ಕೆ ಅತ್ಯಾಧುನಿಕ ಉಪಗ್ರಹಗಳು ಸೇರಿದಂತೆ ಹೊಸ ವೈಜ್ಞಾನಿಕ ತಂತ್ರಗಳ ಅಗತ್ಯವಿದೆ ಎಂದು ನಾಸಾ ಗುರುವಾರ ಹೇಳಿದೆ.

ಹಾರುವ ತಟ್ಟೆಗಳ (ಯುಎಫ್‌ಒ) ಕುರಿತ ವರ್ಷಗಟ್ಟಲೆ ಅಧ್ಯಯನ ನಡೆಸಿದ ನಂತರ ನಾಸಾ, 33 ಪುಟಗಳ ವರದಿಯನ್ನು ಬಿಡುಗಡೆ ಮಾಡಿದೆ.

ಈ ಅಧ್ಯಯನಕ್ಕಾಗಿ ನಾಸಾ, 16 ಸದಸ್ಯರನ್ನು ಒಳಗೊಂಡ ಸ್ವತಂತ್ರ ತಂಡವೊಂದನ್ನು ರಚಿಸಿತ್ತು.

'ಹಾರುವ ತಟ್ಟೆಗಳ ಕುರಿತ ಗ್ರಹಿಕೆಯನ್ನು ಬದಲಿಸುವ ಅಗತ್ಯವೂ ಇದೆ. ಇವುಗಳ ಕುರಿತಂತೆ ಇರುವ ನಕಾರಾತ್ಮಕ ಗ್ರಹಿಕೆಯು ದತ್ತಾಂಶ ಸಂಗ್ರಹಕ್ಕೆ ದೊಡ್ಡ ಅಡ್ಡಿಯಾಗಲಿದೆ' ಎಂದೂ ವರದಿಯಲ್ಲಿ ಹೇಳಲಾಗಿದೆ.

'ಯುಎಫ್‌ಒಗಳನ್ನು ಗುರುತಿಸುವುದಕ್ಕೆ ಕೃತಕ ಬುದ್ಧಿಮತ್ತೆ ಹಾಗೂ ಮಷಿನ್ ಲರ್ನಿಂಗ್ ನೆರವು ಅವಶ್ಯ. ಈ ವಿಚಾರದಲ್ಲಿ ನಾಸಾ ಮಹತ್ವದ ಪಾತ್ರ ವಹಿಸಬಲ್ಲದು' ಎಂದೂ ತಂಡವು ಹೇಳಿದೆ.

'ಹಾರುವ ತಟ್ಟೆಗಳ ವಿಚಾರವಾಗಿ ಅನೇಕ ಅಭಿಪ್ರಾಯಗಳಿದ್ದು, ಯಾವುದೇ ವೈಜ್ಞಾನಿಕ ನಿರ್ಣಯಕ್ಕೆ ಬರಲು ಸಾಧ್ಯವಿಲ್ಲ' ಎಂದು ನಾಸಾ ಪ್ರತಿಕ್ರಿಯಿಸಿದೆ.

ಆಧುನಿಕ ತಂತ್ರಜ್ಞಾನ ನೆರವು–ದಕ್ಷಿಣ ಕೊರಿಯಾ ಆತಂಕ

ಕಳವಳ ಹೆಚ್ಚಿಸಿದ ಕಿಮ್ –ಪುಟಿನ್ ಭೇಟಿ

ಸೋಲ್ (ಎ.ಪಿ): ಉತ್ತರ ಕೊರಿಯಾದ ನಾಯಕ ಕಿಮ್ ಜಾಂಗ್ ಉನ್ ಮತ್ತು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಬುಧವಾರ ಭೇಟಿಯಾಗಿ ಸೇನಾ ಸಹಕಾರ ಸೇರಿ ಹಲವು ವಿಷಯಗಳನ್ನು ಚರ್ಚಿಸಿರುವುದಕ್ಕೆ ದಕ್ಷಿಣ ಕೊರಿಯಾ ತೀವ್ರ ಕಳವಳ ವ್ಯಕ್ತಪಡಿಸಿದೆ.

ಅಣ್ವಸ್ತ್ರಸಜ್ಜಿತ ಎರಡೂ ದೇಶಗಳ ನಾಯಕರ ನಡುವಿನ ಚರ್ಚೆ ಅಮೆರಿಕ ಜೊತೆಗಿನ ಸಂಘರ್ಷ ಹೆಚ್ಚಿಸುವ ಸೂಚನೆ ಎಂದು ಹೇಳಲಾಗಿದೆ. ಅಮೆರಿಕ ಕೂಡ ಉಭಯ ನಾಯಕರ ಭೇಟಿ ಪರಿಣಾಮವಾಗಿ ರಷ್ಯಾಗೆ ಹೆಚ್ಚಿನ ಶಸ್ತ್ರಾಸ್ತ್ರಗಳ ಪೂರೈಕೆ ಆಗಬಹುದು ಎಂದು ಅಂದಾಜಿಸಿದೆ.

'ಶಸ್ತ್ರಾಸ್ತ್ರ ಪೂರೈಕೆಗೆ ಪ್ರತಿಯಾಗಿ ಉತ್ತರ ಕೊರಿಯಾವು ಸೇನಾ ಕಣ್ಗಾವಲು ಸ್ಯಾಟಲೈಟ್‌ಗಳು ಸೇರಿ ಆಧುನಿಕ ಶಸ್ತ್ರಾಸ್ತ್ರಗಳ ತಂತ್ರಜ್ಞಾನವನ್ನು ಪಡೆಯಬಹುದು' ಎಂದು ದಕ್ಷಿಣ ಕೊರಿಯಾ ವಿದೇಶಾಂಗ ಸಚಿವಾಲಯದ ವಕ್ತಾರ ಲಿಮ್ ಸೂ ಸುಕ್ ಕಳವಳ ವ್ಯಕ್ತಪಡಿಸಿದ್ದಾರೆ.

ಖಂಡಾಂತರ ಕ್ಷಿಪಣಿ ತಂತ್ರಜ್ಞಾನ ಕುರಿತ ಅಣ್ವಸ್ತ್ರ ಮತ್ತು ಕ್ಷಿಪಣಿ ಅಭಿವೃದ್ಧಿಗಾಗಿ ನೀಡುವ ಯಾವುದೇ ರೀತಿಯ ವಿಜ್ಞಾನ ಹಾಗೂ ತಂತ್ರಜ್ಞಾನದ ನೆರವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯಕ್ಕೆ ವಿರುದ್ಧವಾದುದಾಗಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಪ್ರತಿಪಾದಿಸಿದರು.

ಉತ್ತರ ಕೊರಿಯಾ ಜೊತೆಗಿನ ಬಾಂಧವ್ಯವು ಹಲವು ನಕಾರಾತ್ಮಕ ಪರಿಣಾಮಗಳನ್ನು ಬೀರಲಿದೆ ಎಂಬುದನ್ನು ರಷ್ಯಾವು ಅರ್ಥ ಮಾಡಿಕೊಳ್ಳಬೇಕು ಎಂದೂ ಅವರು ಎಚ್ಚರಿಸಿದರು.

ಉತ್ತರ ಕೊರಿಯಾಗೆ ಅಮೆರಿಕ ಎಚ್ಚರಿಕೆ

ಅಮೆರಿಕದ ರಾಷ್ಟ್ರೀಯ ಭದ್ರತಾ ಮಂಡಳಿಯ ವಕ್ತಾರರಾದ ಜಾನ್ ಕಿರ್ಬಿ, ರಷ್ಯಾಗೆ ಯಾವುದೇ ರೀತಿಯ ಶಸ್ತ್ರಾಸ್ತ್ರಗಳನ್ನು ಉತ್ತರ ಕೊರಿಯಾ ಪೂರೈಸಿದರೆ ಅದರ ಪರಿಣಾಮಗಳನ್ನು ಎದುರಿಸಬೇಕಾದಿತು ಎಂದು ಎಚ್ಚರಿಸಿದರು. 'ಉಕ್ರೇನ್‌ನಲ್ಲಿ ಅಮಾಯಕರನ್ನು ಕೊಲ್ಲುವುದಕ್ಕಾಗಿ ಪುಟಿನ್ ಅವರಿಗೆ ಯಾವುದೇ ದೇಶ ನೆರವು ನೀಡಬಾರದು' ಎಂದು ಅವರು ಪ್ರತಿಪಾದಿಸಿದರು. 'ಶಸ್ತ್ರಾಸ್ತ್ರ ಪೂರೈಕೆಯಾದಲ್ಲಿ ಅಮೆರಿಕವು ಅದನ್ನು ಸೂಕ್ತ ರೀತಿಯಲ್ಲಿ ಎದುರಿಸಲಿದೆ' ಎಂದು ಸ್ಪಷ್ಟಪಡಿಸಿದರು.

ಪುಟಿನ್‌ಗೆ ಸ್ವಾಗತ: ಉತ್ತರ ಕೊರಿಯಾದ ಅಧಿಕೃತ ಸುದ್ದಿ ಸಂಸ್ಥೆಯು, 'ಸೂಕ್ತ ಸಮಯ'ದಲ್ಲಿ ಉತ್ತರ ಕೊರಿಯಾಗೆ ಭೇಟಿ ನೀಡುವಂತೆ ಪುಟಿನ್ ಅವರಿಗೆ ಕಿಮ್ ಆಹ್ವಾನ ನೀಡಿದ್ದಾರೆ' ಎಂದು ವರದಿ ಮಾಡಿದೆ. ರಷ್ಯಾ ಮಾನವೀಯ ಆಧಾರದಲ್ಲಿ ಅಗತ್ಯವಿರುವ ನೆರವನ್ನು ನೀಡಲಿದೆ ಎಂದು ತಿಳಿಸಿದ್ದಾರೆ. ಆದರೆ, ಉಭಯ ರಾಷ್ಟ್ರಗಳ ನಡುವೆ ಸೇನಾ ಸಹಕಾರ ಕುರಿತಂತೆ ಅವರು ಪ್ರತಿಕ್ರಿಯಿಸಿಲ್ಲ. 'ಉತ್ತರ ಕೊರಿಯಾದಿಂದ ಶಸ್ತ್ರಾಸ್ತ್ರಗಳನ್ನು ಖರೀದಿಸುವುದಕ್ಕೆ ಸಂಬಂಧಿಸಿದಂತೆ ಇರುವ ನಿರ್ಬಂಧಗಳಿಗೆ ರಷ್ಯಾ ಬದ್ಧವಾಗಿದೆ' ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಿಂಗಪುರದ ನೂತನ ಅಧ್ಯಕ್ಷರಾಗಿ ಥರ್ಮನ್ ಪ್ರಮಾಣ

ಸಿಂಗಪುರ(ಪಿಟಿಐ): ಭಾರತ ಮೂಲದ ಅರ್ಥಶಾಸ್ತ್ರಜ್ಞ ಥರ್ಮನ್ ಷಣ್ಮುಗರತ್ನಂ ಸಿಂಗಪುರದ ಒಂಬತ್ತನೇ ಅಧ್ಯಕ್ಷರಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

'ಇಸ್ತಾನಾ'ದಲ್ಲಿ ಭಾರತ ಮೂಲದ ಮುಖ್ಯ ನ್ಯಾಯಮೂರ್ತಿ ಸುಂದರೇಶ್ ಮೆನನ್ ಅವರು ಥರ್ಮನ್ ಅವರಿಗೆ ಪ್ರಮಾಣವಚನ ಬೋಧಿಸಿದರು.

ಸಮಾರಂಭದಲ್ಲಿ ಪ್ರಧಾನಿ ಲೀ ಸಿಯೆನ್ ಲೂಂಗ್, ಸಂಪುಟ ಸದಸ್ಯರು ಪಾಲ್ಗೊಂಡಿದ್ದರು. ಥರ್ಮನ್ ಅವರ ಅಧಿಕಾರಾವಧಿ 6 ವರ್ಷ. ಸಿಂಗಪುರದಲ್ಲೇ ಜನಿಸಿದವರು.

ಜಾಹ್ನವಿ ಸಾವು: ಕ್ರಮದ ಭರವಸೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಸಿಯಾಟಲ್‌ನಲ್ಲಿ ಪೊಲೀಸ್ ಗಸ್ತು ವಾಹನ ಹರಿದು ಭಾರತದ ವಿದ್ಯಾರ್ಥಿನಿ ಜಾಹ್ನವಿ ಕಂದುಲ ಮೃತಪಟ್ಟ ಪ್ರಕರಣದ ತನಿಖೆಯನ್ನು ಚುರುಕುಗೊಳಿಸುವುದಾಗಿ ಅಮೆರಿಕ ಭರವಸೆ ನೀಡಿದೆ. ಅಲ್ಲದೆ ಇದಕ್ಕೆ ಕಾರಣರಾದ ಪೊಲೀಸರ ವಿರುದ್ಧ ಕ್ರಮಕೈಗೊಳ್ಳುವುದಾಗಿಯೂ ಹೇಳಿದೆ.

ಈ ಪ್ರಕರಣ ಕುರಿತು ಅಮೆರಿಕದಲ್ಲಿನ ಭಾರತದ ರಾಯಭಾರಿ ತರಣ್‌ಜಿತ್ ಸಿಂಗ್ ಸಂಧು ಅವರು ಉನ್ನತ ಮಟ್ಟದ ಅಧಿಕಾರಿಗಳ ಜೊತೆ ಚರ್ಚಿಸಿ, ಜಾಹ್ನವಿ ಅವರ ಸಾವಿಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ ಬಳಿಕ ಅಮೆರಿಕದ ಹಿರಿಯ ಆಡಳಿತಾಧಿಕಾರಿ ಈ ಭರವಸೆ ನೀಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	630
ಅಡಿಕೆ	
ಬಂಟ್ವಾಳ	
ಕೋಕ	13000-25000
ಹೊಸತು	28000-45000
ಹಳತು	46000-48500
ಕಾರ್ಕಳ	
ಹೊಸತು	30000-45000
ಹಳತು	40000-48500
ಕುಮಟಾ	
ಚಿಪ್ಪು	27199-34689
ಕೋಕ	17099-33699
ಹಳೆಚಾಲಿ	36009-39099
ಹೊಸಚಾಲಿ	36099-40399
ಸಾಗರ	
ಬಿಳಿಗೋಟು	21219-33409
ಕೋಕ	20888-34399
ಚಾಲಿ	34399-39099
ಕೆಂಪುಗೋಟು	28199-36989
ರಾಶಿ	37199-49889
ಸಿಪ್ಪೆಗೋಟು	12119-22009
ಶಿವಮೊಗ್ಗ	
ಬೆಟ್ಟೆ	43400-53669
ಗೋರಬಾಳು	18009-39599
ರಾಶಿ	33000-50431
ಸರಕು	54069-83496
ಸಿದ್ದಾಪುರ	
ಬಿಳಿಗೋಟು	32199-35500
ಕೋಕ	30119-33699
ಚಾಲಿ	37809-41199
ಕೆಂಪುಗೋಟು	30189-33089
ರಾಶಿ	47299-49299
ತಟ್ಟಿಬೆಟ್ಟೆ	38099-44099
ಶಿರಸಿ	
ಬೆಟ್ಟೆ	32199-46699
ಬಿಳಿಗೋಟು	26399-36306
ಚಾಲಿ	37000-42099
ರಾಶಿ	46398-50566
ಕೆಂಪುಗೋಟು	27199-35319
ಯಲ್ಲಾಪುರ	
ಬಿಳಿಗೋಟು	26099-35612
ಕೋಕ	18161-32099
ಚಾಲಿ	36699-41580
ಕೆಂಪುಗೋಟು	34199-37210
ರಾಶಿ	45899-53911
ತಟ್ಟಿಬೆಟ್ಟೆ	38210-44899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12400	12550	-	152 ಸೆಂಟ್ಸ್
ಎಸಿ	6860	6200	-	
ಆರ್‌ಪಿ	10100	10000	10000	ಲಂಡನ್
ಆರ್‌ಸಿ	5830	234	5900	2430 ಡಾಲರ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel

ಚೈತನ್ಯದಾಯಕ ವಿಶೇಷ ಪ್ರವಾಸಗಳು: ಹೈಮಾಚಲ ಚಾರ್ ಧಾಮ್ 06.10.2023 ರಿಂದ 14 ದಿನಗಳು. ಕುಟ್ರಾಲಂಫಾಲ್ಸ್ ಕನ್ಯಾಕುಮಾರಿ ಟ್ರವೇಂಡ್ರಮ್ ಮುನ್ನಾರ್,ಅಲೆಪ್ಪಿ 7 ದಿನಗಳು. ದಾಂಡೇಲಿ,ಸೌದತ್ತಿ ಗೋಕಾಕ್ ಫಾಲ್ಸ್ ಬಿಜಾಪುರ ಬಾದಾಮಿ,ಹಂಪಿ 6 ದಿನಗಳು 21.10.2023 26.10.2023 ರಿಂದ. ಸೋಮನಾಥ್,ದ್ವಾರಕಾ ಮಾತೃಗಯಾ ಉಜ್ಜಯಿನಿ,ಓಂಕಾರೇಶ್ವರ 16.11.2023 30.11.2023 ರಿಂದ 15/10 ದಿನಗಳು. ವಿಜಯವಾಡ,ಭದ್ರಾಚಲಂ ವಾಸವಿಪೆನುಗೊಂಡ ಸಿಂಹಾಚಲಂ 30.10.2023 ರಿಂದ 9 ದಿನಗಳು. ಸಂಪರ್ಕಿಸಿ 26508925 9980993631 ಶ್ರೀಚೈತನ್ಯ ಟ್ರಾವೆಲ್ಸ್ ಚಾಮರಾಜಪೇಟೆ ಬೆಂಗಳೂರು.18

10.10.2023ಮತ್ತು 10.11.2023 6ದಿನಗಳು ವಿಮಾನದಲ್ಲಿ ಅಲಹಾಬದ್,ಕಾಶಿ, ಗಯಾ,ಅಯೋಧ್ಯ (ಕೆಲವೇ ಸೀಟುಗಳಿವೆ)24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Land_Package15000/ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ರೈಲು/ AC ಬಸ್ಸಿನಲ್ಲಿ 08.10.2023 26.10.2023 ಚಾರ್‌ಧಾಮ್ ಸಮೇತ ಪ್ರವಾಸ. 19.10.2023 ಅಲಹಾಬಾದ್,ಕಾಶಿ,ಬುದ್ಧಗಯಾ 26.10.2023 ನೇಪಾಳ,ಮುಕ್ತಿನಾಥ ಪೋಕ್ರ,ಲುಂಬಿನಿ. 17.11.2023 ಸೋಮನಾಥ್,ದ್ವಾರಕ ಮಹಾಕಾಳೇಶ್ವರ,ಓಂಕಾರೇಶ್ವರ ನಿಷ್ಕಳಂಕ ಮಹಾದೇವ ದಕ್ಷಿಣ/ ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131, 8431888138 7204173686 9686708171

ದಸರಾ ವಿಶೇಷ ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸ: 7ದಿನಗಳ ಸಿಂಗಾಪುರ್ ಮತ್ತು ಮಲೇಶಿಯಾ. 8 ದಿನಗಳ ಮುಕ್ತಿನಾಥ ಪ್ರವಾಸ ನೇಪಾಳ. 5ದಿನಗಳ ಕಾಶ್ಮೀರ್. 9 ದಿನಗಳ ವಿಯೆಟ್ನಾಂ,ಕಾಂಬೋಡಿಯ. 6ದಿನಗಳ ದುಬೈ,ಅಬುದಾಬಿ,ಶಾರ್ಜಾ. ಹಾಗು ಇತರೆ ಪ್ರವಾಸಗಳಿಗೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9900080793 9880079588

7 ದಿನಗಳ ಶ್ರೀಲಂಕಾ, 6 ದಿನಗಳ ಬಾಲಿ, 10 ದಿನಗಳ ಕಾಂಬೋಡಿಯಾ & ವಿಯಟ್ನಾಂ, 7/11 ದಿನಗಳ ಸಿಂಗಪುರ, ಮಲೇಷ್ಯಾ & ಥೈಲ್ಯಾಂಡ್, 7 ದಿನಗಳ ಜಪಾನ್ ಭಟ್ ಟ್ರಾವೆಲ್ಸ್ :9844037295

Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 25/10 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ ಪ್ಯಾಕೇಜ್. 22/10 ಹೈದರಾಬಾದ್ 4 ದಿನಗಳ ಪ್ಯಾಕೇಜ್ 9591017782, 9880621353

ಉದ್ಯೋಗಾವಕಾಶ
General

ಬೇಕಾಗಿದ್ದಾರೆ: ರಾಜ್ಯಾದ್ಯಂತ ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500–47,000/–. PUC Degree. 8861041526, 9945791526

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್,ಟಯೋಟಾ, ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 8105161292

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Drivers
ಆಟೋ ಚಾಲಕರು ಬೇಕಾಗಿದ್ದಾರೆ ಇಲೆಕ್ಟ್ರಿಕ್ ಆಟೋ ಬಾಡಿಗೆಗೆ ಲಭ್ಯವಿದೆ 'ಬ್ಯಾಟರಿ ವೆಚ್ಚ ಕಂಪನಿ ಬರಿಸುತ್ತದೆ' ಪಾರ್ಟ್ ಟೈಮ್ /ಫುಲ್ ಟೈಮ್ ಹಾಗು ನೈಟ್ ಶಿಫ್ಟ್ ಲಭ್ಯವಿದೆ ಆಕರ್ಷಕ ಸಂಬಳ 20000/- ವರೆಗೂ ಪಡೆಯಿರಿ ಕೂಡಲೇ ಸೇರಿಕೊಳ್ಳೋವವರಿಗೆ ಆಕರ್ಷಕ ಬೋನಸ್ ನೀಡಲಾಗುವುದು ಆಸಕ್ತಿಯುಳ್ಳವರು ಮಿಸ್ ಕಾಲ್ ನೀಡಿ 08068960971 / 8496991633

ಭವಿಷ್ಯ
Astrology
★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806

DH DECCAN HERALD Classifieds More value, more impact
ಪ್ರಜಾವಾಣಿ
JOB HUNT
JOB
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 |
+91 9900428036 | +91 9731810277 |
+91 9901641752 | 080-45557163/164

ಕಾಂಗ್ರೆಸ್– ಬಿಜೆಪಿ ಜಟಾಪಟಿ

ದಬ್ಬಾಳಿಕೆ ನಡೆಸಲೆಂದೇ ಮೈತ್ರಿಕೂಟ ರಚನೆ: ನಡ್ಡಾ

ನವದೆಹಲಿ(ಪಿಟಿಐ): ಸನಾತನ ಸಂಸ್ಕೃತಿ ಮೇಲೆ ದಾಳಿ ಮತ್ತು ಮಾಧ್ಯಮಗಳ ಮೇಲೆ ದಬ್ಬಾಳಿಕೆ ನಡೆಸುವ ಏಕೋದ್ದೇಶದ ಮೇಲೆ ವಿರೋಧ ಪಕ್ಷಗಳು 'ಇಂಡಿಯಾ' ಮೈತ್ರಿಕೂಟ ರಚಿಸಿಕೊಂಡಿವೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಗುರುವಾರ ಆರೋಪಿಸಿದ್ದಾರೆ.

ವಿರೋಧ ಪಕ್ಷಗಳಲ್ಲಿ ತುರ್ತುಪರಿಸ್ಥಿತಿ ಕಾಲದ ಮನಸ್ಥಿತಿ ಇನ್ನೂ ಜೀವಂತವಾಗಿದೆ ಎಂದು ನಡ್ಡಾ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹೇಳಿಕೆ ಹಂಚಿಕೊಂಡು, 'ಇಂಡಿಯಾ' ಮೈತ್ರಿಕೂಟದ ವಿರುದ್ಧ ವಾಗ್ದಾಳಿ ಮಾಡಿದ್ದಾರೆ.

'ಐ.ಎನ್.ಡಿ.ಐ.ಎ. ಮೈತ್ರಿಕೂಟವು ತಮ್ಮ ಹುನ್ನಾರಗಳನ್ನು ತಕ್ಷಣ ನಿಲ್ಲಿಸಬೇಕು. ಬದಲಿಗೆ ರಚನಾತ್ಮಕ ಕೆಲಸ ಮತ್ತು ಜನರ ಸೇವೆಗೆ ಒತ್ತು ನೀಡಬೇಕು. ಇಲ್ಲವಾದಲ್ಲಿ ಅದು ಸಾಗುತ್ತಿರುವ ಅಸ್ಪಷ್ಟತೆಯ ಹಾದಿ ಇನ್ನಷ್ಟು ಸ್ಪಷ್ಟವಾಗುತ್ತದೆ' ಎಂದು ನಡ್ಡಾ ಹೇಳಿದ್ದಾರೆ.

'ಇತ್ತೀಚಿನ ದಿನಗಳಲ್ಲಿ ಈ ಮೈತ್ರಿಕೂಟವು ಸನಾತನ ಸಂಸ್ಕೃತಿ ಮೇಲೆ ದಾಳಿ ಮತ್ತು ಮಾಧ್ಯಮಗಳ ಮೇಲೆ ದಬ್ಬಾಳಿಕೆಯನ್ನು ನಡೆಸುವ ಎರಡು ಕೆಲಸಗಳನ್ನು ಮಾತ್ರ ಮಾಡುತ್ತಿದೆ. ಮಾಧ್ಯಮಗಳನ್ನು ಬೆದರಿಸುವ ಮತ್ತು ಭಿನ್ನ ಅಭಿಪ್ರಾಯದವರನ್ನು ಮೌನವಾಗಿಸುವಂತಹ ಅನೇಕ ನಿದರ್ಶನಗಳ ಇತಿಹಾಸವನ್ನು ಕಾಂಗ್ರೆಸ್ ಹೊಂದಿದೆ. ಪತ್ರಕರ್ತರ ಮೇಲೆ ವೈಯಕ್ತಿಕವಾಗಿ ಎಫ್‌ಐಆರ್ ದಾಖಲಿಸುವುದು, ನಾಜಿ ಶೈಲಿಯಲ್ಲಿ ಯಾರನ್ನು ಗುರಿಯಾಗಿಸಬೇಕೆಂದು ಪಟ್ಟಿ ಮಾಡುವ ಮೂಲಕ ಮಾಧ್ಯಮಗಳನ್ನು ಕಾಂಗ್ರೆಸ್ ಬೆದರಿಸುತ್ತಿದೆ' ಎಂದು ನಡ್ಡಾ ಆರೋಪಿಸಿದ್ದಾರೆ.

ಸುದ್ದಿವಾಹಿನಿಗಳ ಪೈಕಿ ಯಾವ ನಿರೂಪಕರು ನಡೆಸಿಕೊಡುವ ಕಾರ್ಯಕ್ರಮಗಳಿಗೆ 'ಇಂಡಿಯಾ'ದ ಅಂಗಪಕ್ಷಗಳ ಪ್ರತಿನಿಧಿಗಳನ್ನು ಕಳುಹಿಸಬಾರದು ಎಂಬುದರ ಬಗ್ಗೆ ನಿರ್ಧರಿಸುವ ಅಧಿಕಾರವನ್ನು ಮಾಧ್ಯಮ ಕುರಿತ ಉಪಸಮಿತಿಗೆ ನೀಡಲು ಸಮನ್ವಯ ಸಮಿತಿ ನಿರ್ಧರಿಸಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿಕೆ ನೀಡಿದ ಬೆನ್ನಲ್ಲೇ ನಡ್ಡಾ ಅವರು ಈ ವಾಗ್ದಾಳಿ ನಡೆಸಿದ್ದಾರೆ.

ಮೋದಿ ಹೇಳಿಕೆ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

ನವದೆಹಲಿ: 'ಇಂಡಿಯಾ' ಮೈತ್ರಿಕೂಟವನ್ನು 'ಘಮಂಡಿಯಾ' ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯನ್ನು ಕಾಂಗ್ರೆಸ್ ಗುರುವಾರ ಖಂಡಿಸಿದೆ.

'ವಿರೋಧ ಪಕ್ಷಗಳನ್ನು ಟೀಕಿಸುವುದಕ್ಕಾಗಿ ಸರ್ಕಾರಿ ಕಾರ್ಯಕ್ರಮವನ್ನು ಮೋದಿ ಬಳಸಿಕೊಂಡಿದ್ದಾರೆ' ಎಂದು ಟೀಕಿಸಿದೆ.

'ಮತ್ತೊಬ್ಬರನ್ನು ಅವಮಾನಿಸುವುದರಲ್ಲಿ ಪ್ರಧಾನಿ ನಿಸ್ಸೀಮರು. 'ಇಂಡಿಯಾ' ಮೈತ್ರಿಕೂಟದ ಪಕ್ಷಗಳನ್ನು ಘಮಂಡಿಯಾ ಪಕ್ಷಗಳು ಎಂದು ಮೂದಲಿಸುವ ಮೂಲಕ ಈಗ ಅದೇ ಚಾಳಿಯನ್ನು ಮುಂದುವರಿಸಿದ್ದಾರೆ' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಸರ್ಕಾರಿ ಕಾರ್ಯಕ್ರಮದಲ್ಲಿ ವಿರೋಧ ಪಕ್ಷಗಳನ್ನು ಟೀಕಿಸುವ ಪ್ರಧಾನಿ ಎಂಥಹ ಕೀಳುಮಟ್ಟಕ್ಕೂ ಇಳಿಯಬಲ್ಲರು ಎನ್ನುವುದಕ್ಕೆ 'ಜಿಎ-ಎನ್‌ಡಿಎ' ಅಂದರೆ, 'ಗೌತಮ್ ಅದಾನಿ- ಎನ್‌ಡಿಎ' ಮುಖ್ಯಸ್ಥ ಎಂದು ಯಾರಾದರೂ ಹೇಳಬಲ್ಲರು' ಎಂದು ಕುಟುಕಿದ್ದಾರೆ. ಸನಾತನ ಧರ್ಮ ಕುರಿತು ಡಿಎಂಕೆ ನಾಯಕರ ಹೇಳಿಕೆಯಿಂದ ಸೃಷ್ಟಿಯಾಗಿದ್ದ ವಿವಾದದ ಬಗ್ಗೆ 'ಇಂಡಿಯಾ'ದ ಅಂಗಪಕ್ಷಗಳ ನಾಯಕರು ಎಚ್ಚರಿಕೆಯ ಪ್ರತಿಕ್ರಿಯೆ ನೀಡುತ್ತಾ ಬಂದಿದ್ದಾರೆ.

ಮಧ್ಯಪ್ರದೇಶ, ಛತ್ತೀಸಗಢ ಹಾಗೂ ರಾಜಸ್ಥಾನ ವಿಧಾನಸಭೆಗಳಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ನೇರ ಎದುರಾಳಿ ಬಿಜೆಪಿಯಾಗಿದೆ. ಆದರೆ, ಈ ರಾಜ್ಯಗಳಲ್ಲಿ ದಕ್ಷಿಣ ಭಾರತದ, ಅದರಲ್ಲೂ ವಿಶೇಷವಾಗಿ ತಮಿಳುನಾಡು ಮೂಲದ ಮತದಾರರು ನಿರ್ಣಾಯಕವೆನಿಸಲಾರರು. ಈ ಕಾರಣಕ್ಕೆ, ಕಾಂಗ್ರೆಸ್ ಪಕ್ಷವು, ವಿವಾದಾತ್ಮಕ ವಿಷಯದ ಬದಲು ಮೋದಿ ಅವರನ್ನು ಗುರಿಯಾಗಿಸಿ ವಾಗ್ದಾಳಿ ನಡೆಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಎತ್ತಿನ ಪೂಜೆ

ಪೊಲಾ ಹಬ್ಬದ ಅಂಗವಾಗಿ ನಾಗ್ಪುರದಲ್ಲಿ ಮಹಿಳೆಯೊಬ್ಬರು ಎತ್ತುಗಳಿಗೆ ಗುರುವಾರ ಪೂಜೆ ಸಲ್ಲಿಸಿದರು –ಪಿಟಿಐ ಚಿತ್ರ

'ದಾಸ್ಯಕ್ಕೆ ತಳ್ಳಲು 'ಇಂಡಿಯಾ' ಯತ್ನ'

ಒಂದನೇ ಪುಟದಿಂದ...

'ಮಹಾತ್ಮ ಗಾಂಧಿ ಅವರು ಸನಾತನ ಧರ್ಮದಿಂದಲೇ ಸ್ಫೂರ್ತಿ ಪಡೆದಿದ್ದರು. ಅವರು ಕೈಗೊಂಡಿದ್ದ ಸ್ವಾತಂತ್ರ್ಯ ಹೋರಾಟವು ಕೂಡ ಸನಾತನ ಧರ್ಮ ಕೇಂದ್ರಿತವಾಗಿತ್ತು. ಅವರು ತಮ್ಮ ಬದುಕಿನುದ್ದಕ್ಕೂ ಸನಾತನ ಧರ್ಮವನ್ನೇ ಪಾಲಿಸುತ್ತಿದ್ದರು. ಅವರು ಹೇಳಿದ ಕೊನೆಯ ಪದ ಕೂಡ 'ಹೇ ರಾಮ್' ಆಗಿತ್ತು' ಎನ್ನುವ ಮೂಲಕ ಮೋದಿ ಅವರು ಸನಾತನ ಧರ್ಮ ಟೀಕಿಸಿದವರ ವಿರುದ್ಧದ ತಮ್ಮ ವಾಗ್ದಾಳಿಯನ್ನು ಹರಿತಗೊಳಿಸಿದರು.

'ವಿರೋಧ ಪಕ್ಷಗಳ ನಾಯಕರು ಸನಾತನ ಧರ್ಮದ ವಿರುದ್ಧ ಬಹಿರಂಗವಾಗಿಯೇ ಮಾತನಾಡಲು ಆರಂಭಿಸಿದ್ದು, ನಮ್ಮ ಮೇಲಿನ ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಲಿದ್ದಾರೆ. ಹೀಗಾಗಿ, ದೇಶದೆಲ್ಲೆಡೆ ಇರುವ ಸನಾತನ ಧರ್ಮ ಪಾಲಿಸುವ ವ್ಯಕ್ತಿಗಳು ಹಾಗೂ ದೇಶವನ್ನು ಪ್ರೀತಿಸುವವರು ಈ ಬಗ್ಗೆ ಜಾಗೃತರಾಗಿರಬೇಕು' ಎಂದು ಮೋದಿ ಹೇಳಿದರು.

ವಾಗ್ದಾಳಿ ಈಗ ತೀವ್ರ: ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್, ಡಿ.ರಾಜಾ ಅವರು ಸನಾತನ ಧರ್ಮ ಕುರಿತು ನೀಡಿದ್ದ ವಿವಾದಾತ್ಮಕ ಹೇಳಿಕೆಗಳಿಂದ ಸೃಷ್ಟಿಯಾಗಿರುವ ವಿವಾದದ ಕುರಿತು ಮೋದಿ ಅವರು ಇದೇ ಮೊದಲ ಬಾರಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, 'ಇಂಡಿಯಾ' ಗುರಿಯಾಗಿಸಿ ಈ ಟೀಕಾಪ್ರಹಾರ ನಡೆಸಿದ್ದಾರೆ.

ಭಾರತವು ಜಿ20 ಶೃಂಗಸಭೆಯ ಆತಿಥ್ಯ ವಹಿಸಿದ್ದ ಕಾರಣಕ್ಕಾಗಿ, ಈ ವಿವಾದ ಕುರಿತು ಪ್ರಾರಂಭದಲ್ಲಿ ಬಿಜೆಪಿ ಪ್ರತಿಕ್ರಿಯೆ ನೀಡುವುದಕ್ಕೆ ಮುಂದಾಗಿರಲಿಲ್ಲ. ಈಗ, ಈ ವಿಚಾರವನ್ನು ಮುಂದಿಟ್ಟುಕೊಂಡು ಪಕ್ಷವು ವಾಗ್ದಾಳಿಯನ್ನು ತೀವ್ರಗೊಳಿಸಿದೆ.

ಜಿ20 ಶೃಂಗಸಭೆಗೂ ಮುನ್ನ ಮಂತ್ರಿಗಳ ಪರಿಷತ್ತಿನ ಸಭೆ ನಡೆಸಿದ್ದ ಮೋದಿ, ಸನಾತನ ಧರ್ಮ ಕುರಿತ ವಿಚಾರವಾಗಿ 'ಸೂಕ್ತ ಉತ್ತರ' ನೀಡುವಂತೆ ಸಚಿವರಿಗೆ ಹೇಳಿದ್ದರು.

'ಜಿ20 ಯಶಸ್ಸಿನ ಶ್ರೇಯ ಜನರಿಗೆ ಸೇರಿದ್ದು': ದೆಹಲಿಯಲ್ಲಿ ಇತ್ತೀಚೆಗೆ ನಡೆದ ಜಿ20 ಶೃಂಗಸಭೆಯನ್ನು ಪ್ರಸ್ತಾಪಿಸಿದ ಮೋದಿ, 'ಈ ಶೃಂಗಸಭೆಯ ಯಶಸ್ಸಿನ ಶ್ರೇಯ ಮೋದಿಗೆ ಸೇರದು, ಬದಲಾಗಿ ದೇಶದ 140 ಕೋಟಿ ಜನರಿಗೆ ಸಲ್ಲುತ್ತದೆ. ಈ ಯಶಸ್ಸಿನಿಂದಾಗಿ ದೇಶದ ಜನರು ಹೆಮ್ಮೆಯಿಂದ ಬೀಗುತ್ತಿದ್ದಾರೆ' ಎಂದು ಪ್ರಧಾನಿ ಹೇಳಿದರು.

'ವಿಜಯ ಶಂಖನಾದ' ರ‍್ಯಾಲಿ: ಛತ್ತೀಸಗಢದ ರಾಯಗಡ ಜಿಲ್ಲೆಯ ಕೊಂಡಾತರಾಯಿ ಗ್ರಾಮದಲ್ಲಿ ಗುರುವಾರ ನಡೆದ 'ವಿಜಯ ಶಂಖನಾದ' ರ‍್ಯಾಲಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, 'ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಸನಾತನ ಧರ್ಮ, ಭಾರತ ಹಾಗೂ ಸಾವಿರಾರು ವರ್ಷಗಳ ನಮ್ಮ ಸಂಸ್ಕೃತಿಯನ್ನು ನಾಶ ಮಾಡಲು ಹುನ್ನಾರ ನಡೆಸುತ್ತಿದೆ' ಎಂದರು. ಮುಖ್ಯಮಂತ್ರಿ ಭೂಪೇಶ್ ಬಘೇಲ್ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಟೀಕಿಸಿದ ಅವರು, 'ಈ ಸರ್ಕಾರ ಭ್ರಷ್ಟಾಚಾರದಲ್ಲಿ ಮುಂದಿದ್ದರೆ, ಬಡವರ ಕಲ್ಯಾಣದಲ್ಲಿ ಹಿಂದಿದೆ' ಎಂದರು.

ಕೇಜ್ರಿವಾಲ್ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್ ವಿಶ್ವವಿದ್ಯಾಲಯದ ಮಾನನಷ್ಟ ಪ್ರಕರಣಕ್ಕೆ ಸಂಬಂಧಿಸಿ ಕೋರ್ಟ್ ಮುಂದೆ ಖುದ್ದು ಹಾಜರಾಗುವಂತೆ ಜಾರಿಗೊಳಿಸಿದ್ದ ಸಮನ್ಸ್ ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಎಎಪಿ ಸಂಸದ ಸಂಜಯ್ ಸಿಂಗ್ ಸಲ್ಲಿಸಿದ್ದ ಪರಿಷ್ಕೃತ ಅರ್ಜಿಯನ್ನು ಅಹಮದಾಬಾದ್‌ನ ಸೆಷನ್ಸ್ ನ್ಯಾಯಾಲಯವು ಬುಧವಾರ ವಜಾಗೊಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ಪ್ರಮಾಣ ಪತ್ರದ ವಿಚಾರಕ್ಕೆ ಸಂಬಂಧಿಸಿದಂತೆ ಈ ಇಬ್ಬರು ನಾಯಕರು ನವದೆಹಲಿಯಲ್ಲಿ ಸುದ್ದಿಗೋಷ್ಠಿ ನಡೆಸಿ, ಗುಜರಾತ್ ವಿ.ವಿ ಬಗ್ಗೆ ವ್ಯಂಗ್ಯ ಹಾಗೂ ಅವಹೇಳನಕಾರಿಯಾದ ಹೇಳಿಕೆ ನೀಡಿದ್ದರು.

ವಿ.ವಿಯ ರಿಜಿಸ್ಟ್ರಾರ್ ಡಾ.ಪಿಯೂಷ್ ಎಂ. ಪಟೇಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಎಎಪಿ ನಾಯಕರ ಹೇಳಿಕೆಯಿಂದ ವಿಶ್ವವಿದ್ಯಾಲಯದ ಘನತೆಗೆ ಚ್ಯುತಿ ಉಂಟಾಗಿದೆ ಎಂದು ದೂರಿದ್ದರು. ಇಬ್ಬರಿಗೂ ಮ್ಯಾಜಿಸ್ಟ್ರೀಯಲ್ ನ್ಯಾಯಾಲಯವು ಸಮನ್ಸ್ ಜಾರಿಗೊಳಿಸಿತ್ತು. ಇದನ್ನು ಪ್ರಶ್ನಿಸಿ ಸೆಷನ್ಸ್ ನ್ಯಾಯಾಲಯದ ಮೆಟ್ಟಿಲೇರಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಜೆ.ಎಂ. ಬ್ರಹ್ಮಭಟ್, ಅವರು, 'ಪ್ರಕರಣದ ವಸ್ತುಸ್ಥಿತಿ ಹಾಗೂ ಕೋರ್ಟ್‌ಗೆ ವಿ.ವಿ ಸಲ್ಲಿಸಿರುವ ದಾಖಲೆ ಪರಾಮರ್ಶಿಸಿಯೇ ಸಮನ್ಸ್ ಜಾರಿಗೊಳಿಸಿದ್ದಾರೆ. ಅರ್ಜಿಯು ವಾಸ್ತವಿಕ ಅಂಶಗಳಿಗೆ ಅನುಗುಣವಾಗಿಲ್ಲ' ಎಂದರು.

ವಿಶ್ವವಿದ್ಯಾಲಯವು ರಾಜ್ಯ ಸರ್ಕಾರದ ಅಂಗಸಂಸ್ಥೆಯಾಗಿದೆ. ಗುಜರಾತ್ ವಿ.ವಿ ಕಾಯ್ದೆಯಡಿ ಸ್ಥಾಪಿತವಾಗಿದೆ. ತನ್ನ ರಾಜ್ಯದ ಪ್ರಜೆಗಳ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುವ ಅಧಿಕಾರ ರಿಜಿಸ್ಟ್ರಾರ್‌ಗೆ ಇಲ್ಲ ಎಂದು ಕೇಜ್ರಿವಾಲ್ ಪರ ವಕೀಲರು ವಾದಿಸಿದ್ದರು.

ಒಗ್ಗೂಡಿಸುವ ಹಿಂದಿ: ಶಾ

ಒಂದನೇ ಪುಟದಿಂದ...

ಯಾವುದೇ ದೇಶದ ಮೂಲ ಮತ್ತು ಸೃಜನಶೀಲ ಅಭಿವ್ಯಕ್ತಿಯು ಅದರ ಸ್ವಂತ ಭಾಷೆಯ ಮೂಲಕ ಮಾತ್ರ ಸಾಧ್ಯ. ಎಲ್ಲ ಭಾರತೀಯ ಭಾಷೆಗಳು ಮತ್ತು ಉಪಭಾಷೆಗಳು ನಮ್ಮ ಸಾಂಸ್ಕೃತಿಕ ಪರಂಪರೆಯಾಗಿವೆ. ಅವುಗಳನ್ನು ನಾವು ನಮ್ಮೊಂದಿಗೆ ಮುಂದುವರಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ದೇಶದಲ್ಲಿ ಅಧಿಕೃತ ಭಾಷೆ ವಿಚಾರದಲ್ಲಿ ಆಗಿರುವ ಕೆಲಸವನ್ನು ನಿಯಮಿತವಾಗಿ ಪರಿಶೀಲಿಸಲು ಅಧಿಕೃತ ಭಾಷಾ ಸಂಸದೀಯ ಸಮಿತಿಯನ್ನು ರಚಿಸಲಾಗಿದೆ. ದೇಶದಾದ್ಯಂತ ಸರ್ಕಾರಿ ಕೆಲಸಗಳಲ್ಲಿ ಹಿಂದಿ ಬಳಕೆಯಲ್ಲಿ ಆಗಿರುವ ಪ್ರಗತಿ ಪರಿಶೀಲಿಸುವ ಮತ್ತು ಅದರ ವರದಿ ಸಿದ್ಧಪಡಿಸಿ ರಾಷ್ಟ್ರಪತಿಯವರಿಗೆ ಸಲ್ಲಿಸುವ ಜವಾಬ್ದಾರಿಯನ್ನು ಸಮಿತಿಗೆ ನೀಡಲಾಗಿದೆ. ಈ ವರದಿಯ 12ನೇ ಸಂಪುಟವನ್ನು ರಾಷ್ಟ್ರಪತಿ ಅವರಿಗೆ ಸಲ್ಲಿಸಲಾಗಿದೆ ಎಂದು ಅವರು ಹೇಳಿದರು.

'ಶಾ ಹೇಳಿಕೆ ಅಸಂಬದ್ಧ'

ಚೆನ್ನೈ (ಪಿಟಿಐ): 'ಹಿಂದಿ ಭಾಷೆಯು ಭಾರತದ ಭಾಷಾ ವೈವಿಧ್ಯವನ್ನು ಒಂದುಗೂಡಿಸಲಿದೆ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಅಸಂಬದ್ಧವಾದುದು' ಎಂದು ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಟೀಕಿಸಿದ್ದಾರೆ.

'ಹಿಂದಿಯನ್ನು ಕೇವಲ 4–5 ರಾಜ್ಯಗಳಲ್ಲಿ ಮಾತನಾಡಲಾಗುತ್ತದೆ. ಹಿಂದಿ ಜನರನ್ನು ಒಗ್ಗೂಡಿಸುತ್ತದೆ, ಪ್ರಾದೇಶಿಕ ಭಾಷೆಗಳಿಗೆ ಶಕ್ತಿ ತುಂಬಲಿದೆ ಎಂದು ಹೇಳುವ ಮೂಲಕ ಶಾ ಅವರು ಎಂದಿನಂತೆ ಹಿಂದಿ ಭಾಷಾ ಪ್ರೇಮ ಮೆರೆದಿದ್ದಾರೆ' ಎಂದು ಸ್ಟಾಲಿನ್ ವ್ಯಂಗ್ಯವಾಡಿದ್ದಾರೆ.

ಎಕ್ಸ್ ವೇದಿಕೆಯಲ್ಲಿ ಸಂದೇಶ ಪೋಸ್ಟ್ ಮಾಡಿರುವ ಅವರು, 'ತಮಿಳುನಾಡಿನಲ್ಲಿ ತಮಿಳು, ಕೇರಳದಲ್ಲಿ ಮಲಯಾಳ ಬಳಕೆಯಲ್ಲಿರುವ ಭಾಷೆ. ಹಿಂದಿ ಈ ಎರಡು ರಾಜ್ಯಗಳನ್ನು ಹೇಗೆ ಒಗ್ಗೂಡಿಸಲಿದೆ' ಎಂದು ಪ್ರಶ್ನಿಸಿದ್ದಾರೆ.

ಸ್ವಾತಂತ್ರ್ಯ ಚಳವಳಿಗೂ ಕೊಡುಗೆ

ಸ್ವಾತಂತ್ರ್ಯ ಚಳವಳಿಯ ಕಷ್ಟದ ದಿನಗಳಲ್ಲಿ ದೇಶವನ್ನು ಒಗ್ಗೂಡಿಸುವಲ್ಲಿ ಹಿಂದಿ ಭಾಷೆ ಅಭೂತಪೂರ್ವ ಪಾತ್ರ ವಹಿಸಿದೆ. ಇದು ಅನೇಕ ಭಾಷೆಗಳು ಮತ್ತು ಉಪಭಾಷೆಗಳಾಗಿ ವಿಭಜನೆಗೊಂಡಿದ್ದ ದೇಶದಲ್ಲಿ ಏಕತೆಯ ಭಾವನೆಯನ್ನು ಹುಟ್ಟುಹಾಕಿದೆ. ಸಂವಹನ ಭಾಷೆಯಾಗಿ ಹಿಂದಿ, ದೇಶದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಪೂರ್ವದಿಂದ ಪಶ್ಚಿಮಕ್ಕೆ ಮತ್ತು ಉತ್ತರದಿಂದ ದಕ್ಷಿಣಕ್ಕೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸ್ವರಾಜ್ಯ ಮತ್ತು ಸ್ವಭಾಷಾ ಸಾಧಿಸುವ ಆಂದೋಲನಗಳು ದೇಶದಲ್ಲಿ ಏಕಕಾಲದಲ್ಲಿ ನಡೆಯುತ್ತಿವೆ ಎಂದು ಅಮಿತ್ ಶಾ ವಿಶ್ಲೇಷಿಸಿದರು.

ಜ್ಞಾನವಾಪಿ: ಪುರಾವೆ ದಾಖಲಿಸಲು ಆದೇಶ

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿಯ ಸಮೀಕ್ಷೆ ವೇಳೆ ಪತ್ತೆಯಾದ ಪುರಾವೆಗಳನ್ನು ಕಾಪಾಡುವಂತೆ, ದಾಖಲಿಸುವಂತೆ ಮತ್ತು ಅದನ್ನು ಪಟ್ಟಿಮಾಡಿ ಸಲ್ಲಿಸುವಂತೆ ಭಾರತೀಯ ಪುರಾತತ್ವ ಇಲಾಖೆಗೆ (ಎಎಸ್‌ಐ) ವಾರಾಣಸಿ ಜಿಲ್ಲಾ ನ್ಯಾಯಾಲಯವು ಬುಧವಾರ ಆದೇಶ ಹೊರಡಿಸಿದೆ.

ನ್ಯಾಯಾಧೀಶ ಎ.ಕೆ. ವಿಶ್ವೇಶ್ ಅವರು ಈ ಆದೇಶ ಹೊರಡಿಸಿ ದ್ದಾರೆ. ಆದೇಶದ ಪ್ರತಿಯನ್ನು ಸರ್ಕಾರ ಪರ ವಕೀಲರು, ಹಿಂದೂ ಮತ್ತು ಮುಸ್ಲಿಂ ಅರ್ಜಿದಾರರ ಪರ ವಕೀಲರಿಗೆ ಮರುದಿನ ನೀಡಲಾಯಿತು ಎಂದು ಹಿಂದೂ ಅರ್ಜಿದಾರರ ಪರ ವಕೀಲ ಮದನ್ ಮೋಹನ್ ಯಾದವ್ ತಿಳಿಸಿದ್ದಾರೆ.

ಸಾಕ್ಷ್ಯನಾಶದ ಅಪಾಯವಿರುವ ಕಾರಣ ಎಎಸ್‌ಐ ಸಮೀಕ್ಷೆ ನಡೆಸುವ ವೇಳೆ ಮುಸ್ಲಿಮರಿಗೆ ಜ್ಞಾನವಾಪಿ ಮಸೀದಿ ಒಳಗೆ ಪ್ರವೇಶವನ್ನು ನಿರ್ಬಂಧಿಸಲು ಕೋರಿ ರಾಖಿ ಸಿಂಗ್ ಅರ್ಜಿ ಸಲ್ಲಿಸಿದ್ದರು.

ಎಲ್ಲಾ ವಕೀಲರ ಸಮ್ಮುಖದಲ್ಲಿ ಸೆಪ್ಟೆಂಬರ್ 8ರಂದು ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯವು, ಸಮೀಕ್ಷೆ ನಡೆಸಿ ಅರ್ಜಿ ಸಲ್ಲಿಸಲು ನಾಲ್ಕು ವಾರಗಳ ಹೆಚ್ಚುವರಿ ಕಾಲಾವಕಾಶವನ್ನು ಎಎಸ್‌ಐಗೆ ನೀಡಿತ್ತು.

ಪುಣೆ ವಿಶೇಷ ನ್ಯಾಯಾಲಯಕ್ಕೆ ವಾಸ್ತವಿಕ ಲಿಖಿತ ಹೇಳಿಕೆ ಸಲ್ಲಿಸಿದ ಪ್ರಾಸಿಕ್ಯೂಷನ್

ದಾಭೋಲ್ಕರ್ ಹತ್ಯೆ: ವಿಚಾರಣೆ ಪೂರ್ಣ

ನರೇಂದ್ರ ದಾಭೋಲ್ಕರ್

ಪುಣೆ (ಪಿಟಿಐ): ವಿಚಾರವಾದಿ ನರೇಂದ್ರ ದಾಭೋಲ್ಕರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಸಾಕ್ಷ್ಯಾಧಾರಗಳ ವಿಚಾರಣೆ ಅಂತಿಮಗೊಳಿಸಿರುವುದಾಗಿ ಪ್ರಾಸಿಕ್ಯೂಷನ್ ವಿಶೇಷ ನ್ಯಾಯಾಲಯಕ್ಕೆ ತಿಳಿಸಿದೆ.

ಅಂತಿಮ ವರದಿಯನ್ನು ಪ್ರಾಸಿಕ್ಯೂಷನ್ ಸಲ್ಲಿಸುವ ಬಗ್ಗೆ ಪ್ರತಿವಾದಿಗಳಿಗೆ ಹೇಳಿಕೆ ಸಲ್ಲಿಸಲು ಸೂಚಿಸಿದೆ ಎಂದು ವಿಶೇಷ ಸರ್ಕಾರಿ ಅಭಿಯೋಜಕ ಪ್ರಕಾಶ್ ಸೂರ್ಯವಂಶಿ ಗುರುವಾರ ಹೇಳಿದರು.

ವಿಶೇಷ ನ್ಯಾಯಾಧೀಶ ಪಿ.ಪಿ. ಜಾಧವ್ ಪ್ರಾಸಿಕ್ಯೂಷನ್ ಕಾರ್ಯವಿಧಾನದ ಭಾಗವಾಗಿ ಬುಧವಾರ ವಾಸ್ತವಾಂಶದ ಲಿಖಿತ ಹೇಳಿಕೆ ಸಲ್ಲಿಸಿದೆ ಎಂದು ಸೂರ್ಯವಂಶಿ ಹೇಳಿದರು.

2013ರ ಆಗಸ್ಟ್ 20ರಂದು ಪುಣೆಯಲ್ಲಿ ದಾಭೋಲ್ಕರ್ ಅವರನ್ನು ಗುಂಡಿಟ್ಟು ಕೊಂದಿದ್ದರು.

ಸಿಬಿಐ, ವೀರೇಂದ್ರ ಸಿಂಹ ತಾವಡೆ, ಸಚಿನ್ ಅಂದುರೆ, ಶರದ್ ಕಲಾಸ್ಕರ್, ಸಂಜೀವ್ ಪುನಾಳೇಕರ್, ವಿಕ್ರಮ್ ಭಾವೆ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿತ್ತು.

'ಮನೀಶ್ ನಾಗೋರಿ, ವಿಕಾಸ್ ಖಾಂಡೇಲ್ವಾಲ್, ಅಮೋಲ್ ಕಾಳೆ, ರಾಜೇಶ್ ಬಂಗೇರಾ ಮತ್ತು ಅಮಿತ್ ದೇಗ್ವೇಕರ್ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೆ ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಸಿಲ್ಲ. ನಾಗೋರಿ ಮತ್ತು ಖಾಂಡೇಲ್ವಾಲ್ ಅವರನ್ನು ಯಾರೂ ಗುರುತಿಸಲಿಲ್ಲ. ಈ ಐವರಿಗೂ ಜಾಮೀನು ಸಿಕ್ಕಿದೆ. ಇದನ್ನು ಅಂತಿಮ ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಸೂರ್ಯವಂಶಿ ಹೇಳಿದರು.

ದಾಭೋಲ್ಕರ್ ಹತ್ಯೆಗೆ ಸಂಬಂಧಿಸಿ ಶಸ್ತ್ರಾಸ್ತ್ರ ಮಾರಾಟಗಾರರಾದ ನಾಗೋರಿ ಮತ್ತು ಖಾಂಡೇಲ್ವಾಲ್ ಅವರನ್ನು 2013ರ ನವೆಂಬರ್‌ನಲ್ಲಿ ಪುಣೆ ಪೊಲೀಸರು ಬಂಧಿಸಿದ್ದರೆ, 2018ರಲ್ಲಿ ಕಾಳೆ, ಬಂಗೇರಾ ಮತ್ತು ದೇಗ್ವೇಕರ್ ಅವರನ್ನು ಸಿಬಿಐ ಬಂಧಿಸಿತ್ತು. ಆದರೆ, 90 ದಿನಗಳ ಅವಧಿಯಲ್ಲಿ ಸಿಬಿಐ ಅವರ ವಿರುದ್ಧ ಚಾರ್ಜ್ ಶೀಟ್ ಸಲ್ಲಿಸಲು ವಿಫಲವಾದ ಹಿನ್ನೆಲೆಯಲ್ಲಿ ಐವರಿಗೂ ಜಾಮೀನು ಸಿಕ್ಕಿದೆ.

ಮಾಲೆಗಾಂವ್ ಸ್ಫೋಟ: ಸಾಕ್ಷಿಗಳ ಹೇಳಿಕೆ ದಾಖಲು ಪ್ರಕ್ರಿಯೆ ಪೂರ್ಣ

ಮುಂಬೈ (ಪಿಟಿಐ): 2008ರಲ್ಲಿ ನಡೆದಿದ್ದ ಮಾಲೆಗಾಂವ್ ಸ್ಫೋಟ ಪ್ರಕರಣದ ಸಾಕ್ಷಿಗಳ ಹೇಳಿಕೆಯನ್ನು ದಾಖಲಿಸುವುದನ್ನು ಎನ್‌ಐಎ ವಿಶೇಷ ಕೋರ್ಟ್ ಗುರುವಾರ ಪೂರ್ಣಗೊಳಿಸಿದೆ. ಇನ್ನು ಆರೋಪಿಗಳ ಹೇಳಿಕೆಯನ್ನು ದಾಖಲಿಸಬೇಕಾಗಿದೆ.

ಈ ಪ್ರಕರಣದಲ್ಲಿ ಭಾರತೀಯ ದಂಡ ಸಂಹಿತೆ ಮತ್ತು ಭಯೋತ್ಪಾದನಾ ನಿಗ್ರಹ ತಡೆ ಕಾಯ್ದೆ ಯುಎಪಿಎ ಅನ್ವಯ ಬಿಜೆಪಿ ಸಂಸದೆ ಪ್ರಜ್ಞಾ ಠಾಕೂರ್ ಸೇರಿದಂತೆ ಏಳು ಮಂದಿ ಆರೋಪಿಗಳಾಗಿದ್ದಾರೆ.

ಎನ್‌ಐಎ ಪ್ರತಿನಿಧಿಸಿದ್ದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅವಿನಾಶ್ ರಸಲ್, ಅನುಶ್ರೀ ರಸಲ್ ಅವರು ವಿಶೇಷ ನ್ಯಾಯಾಧೀಶ ಎ.ಕೆ.ಲಹೋಟಿ ಅವರ ಎದುರು, 'ಸಾಕ್ಷಿಗಳ ಹೇಳಿಕೆ ದಾಖಲಿಸುವ ಕಾರ್ಯ ಮುಗಿದಿದೆ. ಹೆಚ್ಚಿನ ಸಾಕ್ಷಿಗಳ ವಿಚಾರಣೆ ಬೇಕಿಲ್ಲ' ಎಂದು ಹೇಳಿಕೆ ದಾಖಲಿಸಿದರು.

ಕಳೆದ ಐದು ವರ್ಷಗಳಲ್ಲಿ ಒಟ್ಟು 323 ಮಂದಿ ಸಾಕ್ಷಿಗಳ ವಿಚಾರಣೆ ನಡೆದಿದೆ. ಇನ್ನು ಕೋರ್ಟ್, ಸಿಆರ್‌ಪಿಸಿ ಕಾಯ್ದೆ ಸೆಕ್ಷನ್ 313ರ ಅನ್ವಯ, ಆರೋಪಿಗಳ ಹೇಳಿಕೆಯನ್ನು ದಾಖಲಿಸಲಿದೆ. ಸೆ. 25ರಂದು ಕೋರ್ಟ್‌ನ ಎದುರು ಹಾಜರಿರುವಂತೆ ಆರೋಪಿಗಳಿಗೆ ಸೂಚನೆ ನೀಡಿದೆ.

ಈ ಮಧ್ಯೆ, ಸಾಕ್ಷಿಗಳ ಮರು ವಿಚಾರಣೆ ಕುರಿತಂತೆ ಆರೋಪಿ ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಪುರೋಹಿತ್ ಅವರು ಸಲ್ಲಿಸಿದ್ದ ಮನವಿಯನ್ನು ಕೋರ್ಟ್ ತಿರಸ್ಕರಿಸಿತು. 'ಅನಿಶ್ಚಿತ, ಹಾಜರುಪಡಿಸದ ದಾಖಲೆ ಆಧರಿಸಿ ಸಾಕ್ಷಿಗಳ ಮರುವಿಚಾರಣೆ ಸೂಕ್ತವಲ್ಲ' ಎಂದು ಕೋರ್ಟ್ ಹೇಳಿತು.

ಸ್ಫೋಟಕ ಅಳವಡಿಸಿದ್ದ ಬೈಕ್ ಮಾಲೆಗಾಂವ್‌ನ ಮಸೀದಿ ಬಳಿ ಸೆ.29, 2008ರಂದು ಸ್ಫೋಟವಾಗಿತ್ತು. 6 ಮಂದಿ ಸತ್ತಿದ್ದು, 100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಮಹಾರಾಷ್ಟ್ರದ ಎಟಿಎಸ್ ಮೊದಲು ತನಿಖೆ ನಡೆಸಿದ್ದು, ಬಳಿಕ ಎನ್‌ಐಎಗೆ ತನಿಖೆ ಹಸ್ತಾಂತರಿಸಲಾಗಿತ್ತು.

ಉಜ್ವಲ ಯೋಜನೆ: ₹1,650 ಕೋಟಿ ಬಿಡುಗಡೆಗೆ ಕೇಂದ್ರ ಸರ್ಕಾರ ಒಪ್ಪಿಗೆ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಉಜ್ವಲ ಯೋಜನೆಯ (ಪಿಎಂಯುವೈ) ಅಡಿಯಲ್ಲಿ 75 ಲಕ್ಷ ಎಲ್‌ಪಿಜಿ ಸಂಪರ್ಕ ಒದಗಿಸುವ ಸಲುವಾಗಿ ತೈಲ ಮಾರುಕಟ್ಟೆ ಕಂಪನಿಗಳಿಗೆ ₹1,650 ಕೋಟಿ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಯೋಜನೆಯ ಪ್ರಸ್ತುತ ವಿಧಾನಗಳ ಪ್ರಕಾರವೇ, ಮೊದಲ ರೀಫಿಲ್ ಮತ್ತು ಸ್ಟೌವ್ ಅನ್ನು ಸಹ ಉಜ್ವಲ ಫಲಾನುಭವಿಗಳಿಗೆ ಉಚಿತವಾಗಿ ನೀಡಲಾಗುವುದು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ಸಂಪುಟ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

75 ಲಕ್ಷ ಹೆಚ್ಚುವರಿ ಎಲ್‌ಪಿಜಿ ಸಂಪರ್ಕ ನೀಡುವುದರಿಂದ ಪಿಎಂಯುವೈ ಯೋಜನೆಯ ಫಲಾನುಭವಿಗಳ ಸಂಖ್ಯೆ 10.35 ಕೋಟಿಗೆ ತಲುಪಲಿದೆ ಎಂದು ವಿವರಿಸಿದ್ದಾರೆ.

ಬಡತನ ರೇಖೆಗಿಂತ ಕೆಳಗೆ ಇರುವ (ಬಿಪಿಎಲ್) ಕುಟುಂಬಗಳ ಮಹಿಳೆಯರಿಗೆ ಎಲ್‌ಪಿಜಿ ಸಂಪರ್ಕ ನೀಡುವ ಪಿಎಂಯುವೈ ಯೋಜನೆಗೆ 2016 ಮೇ ತಿಂಗಳಲ್ಲಿ ಮೋದಿ ಅವರು ಚಾಲನೆ ನೀಡಿದ್ದರು.

ಕೆಲ ಅಪರಾಧಿಗಳಿಗೆ ವಿಶೇಷ ಸವಲತ್ತು ಸಿಗಲು ಹೇಗೆ ಸಾಧ್ಯ: 'ಸುಪ್ರೀಂ' ಪ್ರಶ್ನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದ ಅಪರಾಧಿಗಳು ಶಿಕ್ಷೆ ಅವಧಿಪೂರ್ಣಗೊಳ್ಳುವ ಮುನ್ನವೇ ಬಿಡುಗಡೆಗೆ ಅರ್ಹರಾಗಿದ್ದು ಹೇಗೆ? ಅಲ್ಲದೇ, ಕೆಲ ಅಪರಾಧಿಗಳಿಗೆ 1000–1500 ದಿನಗಳ ಕಾಲ ಪೆರೋಲ್ ನೀಡಲಾಗಿತ್ತು ಎಂಬುದು ಅಚ್ಚರಿ ಮೂಡಿಸುತ್ತದೆ ಎಂದು ಸುಪ್ರೀಂಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನಾ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ಅಪರಾಧಿಯೊಬ್ಬರ ಪರ ಹಾಜರಿದ್ದ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರ,'ಎಸಗಿದ ಅಪರಾಧ ಘೋರವಾಗಿತ್ತು ಎಂಬ ಏಕೈಕ ಕಾರಣಕ್ಕಾಗಿ ಅವಧಿಪೂರ್ವ ಬಿಡುಗಡೆ ಪ್ರಯೋಜನದಿಂದ ಅಪರಾಧಿಗಳು ವಂಚಿತರಾಗುವಂತೆ ಮಾಡಲಾಗದು' ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಆದರೆ, ಈ ಪ್ರಕರಣದ ಅಪರಾಧಿಗಳನ್ನು ಅವಧಿಪೂರ್ವ ಬಿಡುಗಡೆ ಮಾಡಲಾಗಿದೆ. ಈ ವಿಚಾರದಲ್ಲಿ ಅಪರಾಧಿಗಳಿಗೆ ವಿಶೇಷ ಸವಲತ್ತು ನೀಡಲಾಗಿತ್ತೇ ಎಂಬುದನ್ನು ಪರಿಶೀಲಿಸಬೇಕಿದೆ ಎಂದು ನ್ಯಾಯಪೀಠ ಹೇಳಿದೆ.

'ಅಪರಾಧಿಗಳಿಗೆ ಹೆಚ್ಚು ದಿನಗಳ ಕಾಲ ಪೆರೋಲ್ ನೀಡಲಾಗಿತ್ತು. ಕೆಲ ಅಪರಾಧಿಗಳಿಗೆ ಇಷ್ಟೊಂದು ವಿಶೇಷ ಸವಲತ್ತು ಸಿಗಲು ಹೇಗೆ ಸಾಧ್ಯ? ಈ ಅಪರಾಧಿಗಳು ಶಿಕ್ಷೆ ಅವಧಿಪೂರ್ಣಗೊಳ್ಳುವ ಮುನ್ನವೇ ಬಿಡುಗಡೆಗೆ ಅರ್ಹರಾಗಿದ್ದರೇ' ಎಂದು ಪ್ರಶ್ನಿಸಿದ ನ್ಯಾಯಪೀಠ, ವಿಚಾರಣೆಯನ್ನು ಸೆ. 20ಕ್ಕೆ ಮುಂದೂಡಿತು.

ಕುಕ್ಕರ್‌ಬಾಂಬ್ ಸ್ಫೋಟಕ್ಕೆ ಸಹಕಾರ?

ಮೂರು ವರ್ಷದಿಂದ ತಲೆಮರೆಸಿಕೊಂಡಿದ್ದ ಅರಾಫತ್ ಅಲಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯೊಂದಿಗೆ ನಂಟು ಹೊಂದಿರುವ ಆರೋಪದ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಗುರುವಾರ ಬಂಧಿಸಿರುವ ಶಂಕಿತ ಉಗ್ರ ಅರಾಫತ್ ಅಲಿ ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟಕ್ಕೆ ಸಹಕಾರ ನೀಡಿರುವ ಕುರಿತು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಶಾರಿಕ್, ನಿಷೇಧಿತ 'ಅಲ್ ಹಿಂದ್ ಐಎಸ್' ಸಂಘಟನೆಯೊಂದಿಗೆ ಸಂಪರ್ಕಕ್ಕೆ ಸಂಬಂಧಿಸಿದಂತೆ ಎನ್‌ಐಎ ಹುಡುಕುತ್ತಿರುವ ಅಬ್ದುಲ್ ಮತೀನ್ ಅಹಮದ್ ತಾಹಾ ಹಾಗೂ ಅರಾಫತ್ ಅಲಿ ಮೂವರೂ ತೀರ್ಥಹಳ್ಳಿಯವರು.

ಅರಾಫತ್ ಅಲಿ ತೀರ್ಥಹಳ್ಳಿಯ ಬಾಳೆಬೈಲು ಸಮೀಪದ ಜಟ್‌ಪಟ್ ನಿವಾಸಿ. ಆತನ ತಂದೆ ಮೋನು ತೀರ್ಥಹಳ್ಳಿಯ ಬಾಳೆಬೈಲಿನಲ್ಲಿ ಬೀಡಾ ಅಂಗಡಿ ಇಟ್ಟುಕೊಂಡಿದ್ದಾರೆ. ಅಬ್ದುಲ್ ಮತೀನ್ ತೀರ್ಥಹಳ್ಳಿಯ ಮೀನು ಮಾರುಕಟ್ಟೆ ರಸ್ತೆಯ ನಿವಾಸಿ. ಶಾರಿಕ್ ಅಲ್ಲಿನ ಸೊಪ್ಪುಗುಡ್ಡೆಯವನು.

ಬಾಂಬ್ ತಯಾರಿಕೆ ಸೇರಿದಂತೆ ರಾಜ್ಯದ ಮಲೆನಾಡು, ಕರಾವಳಿ ಭಾಗದಲ್ಲಿನ ಐಎಸ್ ಸಂಘಟನೆಯ ಉಗ್ರ ಚಟುವಟಿಕೆಗೆ ಅರಾಫತ್ ಅಲಿ ಹಾಗೂ ಅಬ್ದುಲ್ ಮತೀನ್ ವಿದೇಶದಿಂದಲೇ ಕ್ರಿಪ್ಟೊ ಕರೆನ್ಸಿ ಮೂಲಕ ಹಣ ಕಳುಹಿಸುತ್ತಿದ್ದರು. ಇಬ್ಬರ ಸೂಚನೆಯಂತೆ ಶಾರಿಕ್ ಇಲ್ಲಿ ಕೆಲಸ ಮಾಡುತ್ತಿದ್ದ. ಆರೋಪಿಗಳು ಪರಸ್ಪರ ಸಂಪರ್ಕಕ್ಕೆ ಟೆಲಿಗ್ರಾಂ, ಇನ್‌ಸ್ಟಾಗ್ರಾಂ, ವೈರ್, ಎಲಿಮೆಂಟ್, ವಿಕ್ಕರ್ ಮಾಧ್ಯಮಗಳ ಬಳಸುತ್ತಿದ್ದರು ಎಂದು ಮೂಲಗಳು ತಿಳಿಸಿವೆ. ಅಬ್ದುಲ್ ಮತೀನ್ ಸುಳಿವು ನೀಡಿದವರಿಗೆ ₹ 3 ಲಕ್ಷ ಬಹುಮಾನ ನೀಡುವುದಾಗಿ ಎನ್‌ಐಎ ಈಗಾಗಲೇ ಘೋಷಿಸಿದೆ.

ಶಿವಮೊಗ್ಗ ಬಳಿ ಸ್ಫೋಟಕ್ಕೂ ನಂಟು?: ಐಎಸ್ ಜೊತೆ ನಂಟು ಹೊಂದಿದ್ದ ಆರೋಪದ ಮೇಲೆ 2022ರ ಸೆಪ್ಟೆಂಬರ್ 20ರಂದು ಶಿವಮೊಗ್ಗ ಗ್ರಾಮೀಣ ಠಾಣೆ ಪೊಲೀಸರು ಇಲ್ಲಿನ ಸಿದ್ದೇಶ್ವರ ನಗರ ನಿವಾಸಿ ಸಯ್ಯದ್ ಯಾಸೀನ್ ಅಲಿಯಾಸ್ ಬೈಲು ಹಾಗೂ ಮಂಗಳೂರಿನ ಮಾಝ್ ಮುನೀರ್ ಅಹಮದ್‌ನನ್ನು ಬಂಧಿಸಿದ್ದರು. ಆರೋಪಿಗಳನ್ನು ವಿಚಾರಣೆಗೊಳಪಡಿಸಿದಾಗ ಶಾರಿಕ್ ನೇತೃತ್ವದಲ್ಲಿ ಬಾಂಬ್ ಸಿದ್ಧಪಡಿಸಿ ಶಿವಮೊಗ್ಗ ಸಮೀಪದ ಗುರುಪುರದ ಬಳಿಯ ತುಂಗಾ ನದಿ ತೀರದಲ್ಲಿ ಅದನ್ನು ಪರೀಕ್ಷಾರ್ಥ ಸ್ಫೋಟಿಸಿದ್ದು ಗೊತ್ತಾಗಿತ್ತು. ಇದಕ್ಕೂ ಅರಾಫತ್ ಅಲಿ, ಅಬ್ದುಲ್ ಮತೀನ್ ಕ್ರಿಪ್ಟೋ ಕರೆನ್ಸಿ ಮೂಲಕ ಹಣಕಾಸಿನ ನೆರವು ನೀಡಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳುತ್ತಾರೆ. ಮಂಗಳೂರಿನಲ್ಲಿ ಆಟೊದಲ್ಲಿ ಕುಕ್ಕರ್ ಬಾಂಬ್ ಸಾಗಿಸುವಾಗ ಅದು ಸ್ಫೋಟ ಗೊಂಡಿದ್ದರಿಂದ ಶಾರಿಕ್ ಗಾಯಗೊಂಡು ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಈಗ ಅರಾಫತ್ ಅಲಿ ಎನ್‌ಐಎ ಬಲೆಗೆ ಬಿದ್ದಿದ್ದಾನೆ.

ಆರೋಪಿ ಅಲಿ ಬಂಧಿಸಿದ ಎನ್‌ಐಎ

ನವದೆಹಲಿ(ಪಿಟಿಐ): ಐಎಸ್ ಜತೆ ನಂಟು ಹೊಂದಿದ್ದ, ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದ ಆರೋಪಿ ಅರಾಫತ್ ಅಲಿ ಎಂಬಾತನನ್ನು ಗುರುವಾರ ಬಂಧಿಸಲಾಗಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಹೇಳಿದೆ.

ಅಲಿ, ಕರ್ನಾಟಕದ ಶಿವಮೊಗ್ಗ ನಿವಾಸಿ. ಕೆನ್ಯಾದಿಂದ ಬಂದು, ಇಲ್ಲಿನ ವಿಮಾನನಿಲ್ದಾಣದಲ್ಲಿ ಬಂದಿಳಿದ ತಕ್ಷಣ ಆತನನ್ನು ಬಂಧಿಸಲಾಯಿತು ಎಂದು ಎನ್‌ಐಎ ಅಧಿಕಾರಿಗಳು ಹೇಳಿದ್ದಾರೆ.

ಐಎಸ್ ಪ್ರಚಾರ ಕಾರ್ಯದಲ್ಲಿ ತೊಡಗಿದ್ದ ಹಾಗೂ ಭಯೋತ್ಪದನಾ ಕೃತ್ಯಗಳನ್ನು ಎಸಗಲು ಸಂಚು ರೂಪಿಸಿದ್ದ ಆರೋಪ ಕೇಳಿ ಬಂದ ಮೇಲೆ, 2020ರಲ್ಲಿ ಅಲಿ ತಲೆ ಮರೆಸಿಕೊಂಡಿದ್ದ. ವಿದೇಶದಲ್ಲಿಯೇ ಇದ್ದುಕೊಂಡು, ಐಎಸ್‌ನ ಭಾರತ ವಿರೋಧಿ ಕಾರ್ಯಸೂಚಿಯನ್ನು ಕಾರ್ಯಗತಗೊಳಿಸುವಲ್ಲಿ ನಿರತನಾಗಿದ್ದ' ಎಂದು ಎನ್‌ಐಎ ವಕ್ತಾರ ತಿಳಿಸಿದ್ದಾರೆ.

ವಿಶೇಷ ಅಧಿವೇಶನ: ಸಂಸದರಿಗೆ ವಿಪ್ ಜಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಇದೇ ಸೋಮವಾರದಿಂದ ಐದು ದಿನಗಳ ಕಾಲ ನಡೆಯಲಿರುವ ಸಂಸತ್‌ನ ವಿಶೇಷ ಅಧಿವೇಶನದಲ್ಲಿ ತಪ್ಪದೇ ಹಾಜರಿರುವಂತೆ ಬಿಜೆಪಿ ಹಾಗೂ ಕಾಂಗ್ರೆಸ್ ತಮ್ಮ ಸಂಸದರಿಗೆ ಗುರುವಾರ ವಿಪ್ ಜಾರಿಮಾಡಿವೆ.

ಅಧಿವೇಶನದ ತಾತ್ಕಾಲಿಕ ಕಾರ್ಯಸೂಚಿಯನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಬೆನ್ನಲ್ಲೇ, ಎರಡೂ ಪಕ್ಷಗಳು ಲೋಕಸಭೆ ಮತ್ತು ರಾಜ್ಯಸಭೆಯ ತಮ್ಮ ಸದಸ್ಯರಿಗೆ ವಿಪ್ ನೀಡಿವೆ.

'ಸಂಸತ್‌ನ 75 ವರ್ಷಗಳ ಪಯಣ' ಕುರಿತು ಸೆ.18ರಂದು ಸಂಸತ್‌ನ ಉಭಯ ಸದನಗಳಲ್ಲಿ ಚರ್ಚೆ ನಡೆಯಲಿದ್ದು, ಪಕ್ಷದ ಎಲ್ಲ ಸಂಸದರು ಹಾಜರಿರಬೇಕು' ಎಂದು ಬಿಜೆಪಿ ಸೂಚಿಸಿದೆ.

'ಸರ್ಕಾರವು ಯಾವುದೇ ಸೂಚನೆಯಿಲ್ಲದೇ ಪ್ರಮುಖ ಕಾರ್ಯಸೂಚಿಯನ್ನು ಅಧಿವೇಶನ ವೇಳೆ ಕೈಗೆತ್ತಿಕೊಳ್ಳಲಿದೆ ಎಂಬುದು ಪಕ್ಷದ ನಂಬಿಕೆ. ಹೀಗಾಗಿ, ರಾಜ್ಯಸಭೆಯ ಎಲ್ಲ ಸದಸ್ಯರು ಐದು ದಿನಗಳ ಕಾಲ ಬೆಳಿಗ್ಗೆ 11ರಿಂದ ಕಲಾಪವನ್ನು ಮುಂದೂಡುವವರೆಗೆ ಹಾಜರಿರಬೇಕು ಎಂಬುದಾಗಿ ವಿಪ್‌ನಲ್ಲಿ ತಿಳಿಸಲಾಗಿದೆ' ಎಂದು ಕಾಂಗ್ರೆಸ್ ಸಂಸದರೊಬ್ಬರು ಹೇಳಿದ್ದಾರೆ.

ಪಿಡಿಪಿ ಜೊತೆ ನ್ಯಾಷನಲ್ ಕಾನ್ಫರೆನ್ಸ್ ಮೈತ್ರಿ ಅನುಮಾನ?

ಕಾಶ್ಮೀರ: 'ಇಂಡಿಯಾ' ಉಳಿವು ಅಳಿವಿನ ಆಟ

ಪ್ರಜಾವಾಣಿ ವಾರ್ತೆ

ಶ್ರೀನಗರ: ನವದೆಹಲಿಯಲ್ಲಿ ನಡೆದ 'ಇಂಡಿಯಾ'ದ ಮೊದಲ ಸಮನ್ವಯ ಸಮಿತಿ ಸಭೆಯು ಜಮ್ಮು ಮತ್ತು ಕಾಶ್ಮೀರದಲ್ಲಿ ಮೈತ್ರಿಕೂಟದ ಜೀವಂತಿಕೆ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಹಾಗೂ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಒಟ್ಟಾಗಿ ಅಖಾಡಕ್ಕೆ ಇಳಿಯುವ ಬಗ್ಗೆ ಅನುಮಾನಗಳು ಮೂಡಿವೆ.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರ ನಿವಾಸದಲ್ಲಿ ಬುಧವಾರ 14 ಸದಸ್ಯರ ಸಮನ್ವಯ ಸಮಿತಿಯ ಸಭೆ ನಡೆದಿತ್ತು.

ಸಭೆಯ ಬಳಿಕ ಮಾತನಾಡಿದ ನ್ಯಾಷನಲ್ ಕಾನ್ಫರೆನ್ಸ್ ನಾಯಕ ಒಮರ್ ಅಬ್ದುಲ್ಲಾ, 'ಇಂಡಿಯಾ' ಸದಸ್ಯರು ಈಗಾಗಲೇ ಹೊಂದಿರುವ ಸ್ಥಾನಗಳ ಬಗ್ಗೆ ಚರ್ಚಿಸಿಲ್ಲ. ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಹೊಂದಿರುವ ಸ್ಥಾನಗಳಿಗೆ ಸಂಬಂಧಿಸಿದಂತೆ ಲಕ್ಷ್ಯವಹಿಸಬೇಕಿದೆ ಎಂದಿದ್ದರು.

ಇದು ಕಣಿವೆ ರಾಜ್ಯದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಯಾವುದೇ ಪಕ್ಷದ ಜೊತೆಗೆ ಮೈತ್ರಿ ಮಾಡಿಕೊಳ್ಳಲು ಸಿದ್ಧವಿಲ್ಲ ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗಿದೆ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ಮೈತ್ರಿಗೆ ಏಕೆ ಸಿದ್ಧವಿಲ್ಲ?: 2019ರ ಲೋಕಸಭಾ ಚುನಾವಣೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಕಾಶ್ಮೀರದ ಮೂರು ಕ್ಷೇತ್ರಗಳಲ್ಲಿಯೂ ಜಯಗಳಿಸಿತ್ತು. ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯುವ ಎಲ್ಲಾ ಚುನಾವಣೆಗಳನ್ನು ತಾನು ಏಕಾಂಗಿಯಾಗಿ ಎದುರಿಸಬೇಕು. ಒಂದು ವೇಳೆ ಸೀಟು ಹಂಚಿಕೆ ಮಾಡಿಕೊಂಡರೆ ನಮ್ಮ ನಿರೀಕ್ಷೆಗೆ ಪೆಟ್ಟು ಬೀಳಲಿದೆ ಎಂಬುದು ಆ ಪಕ್ಷದ ನಾಯಕರ ಲೆಕ್ಕಾಚಾರವಾಗಿದೆ. ಒಮರ್ ಹೇಳಿಕೆಯು ಇದನ್ನು ಮತ್ತಷ್ಟು ಪುಷ್ಟೀಕರಿಸಿದೆ ಎನ್ನುತ್ತಾರೆ ವಿಶ್ಲೇಷಕರು.

ಗುಪ್ಕರ್ ಘೋಷಣೆಯ ಕಥೆಯೇನು?

2019ರಲ್ಲಿ ಕೇಂದ್ರ ಸರ್ಕಾರವು ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದಿತ್ತು. ಆಗ ಕಣಿವೆ ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳ ನಾಯಕರು ಶ್ರೀನಗರದ ಗುಪ್ಕರ್ ರಸ್ತೆಯಲ್ಲಿ ಇರುವ ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರ 'ಗುಪ್ಕರ್' ನಿವಾಸದಲ್ಲಿ ಸಭೆ ಸೇರಿದ್ದರು. ಕೇಂದ್ರದ ನಿರ್ಧಾರ ವಿರೋಧಿಸಿ ಈ ಸಭೆಯಲ್ಲಿ ಜಂಟಿ ನಿರ್ಣಯಕ್ಕೆ ಸಹಿ ಹಾಕಿದ್ದಾರೆ (ಪೀಪಲ್ಸ್ ಅಲೆಯನ್ಸ್ ಫಾರ್ ಗುಪ್ಕರ್ ಡಿಕ್ಲರೇಷನ್ (ಪಿಎಜಿಡಿ).

ಜನರ ಹಿತಾಸಕ್ತಿ ಕಾಪಾಡುವುದೇ 'ಗುಪ್ಕರ್ ಘೋಷಣೆ'ಯ ಪ್ರಮುಖ ಧ್ಯೇಯವಾಗಿದೆ. ಈ ಎರಡೂ ಪಕ್ಷಗಳು ಕೂಡ ಸಹಿ ಹಾಕಿವೆ. ಆದಾಗ್ಯೂ ಎರಡು ಪಕ್ಷಗಳಲ್ಲಿ ಅಂತರ್ಗತವಾಗಿರುವ ವಿರೋಧಾಭಾಸಗಳು ಹಲವು ಭಾರಿ ಬಹಿರಂಗವಾಗಿರುವುದು ಗುಟ್ಟಾಗಿ ಉಳಿದಿಲ್ಲ.

ಗುಪ್ಕರ್ ಕೂಟದಲ್ಲಿರುವ ಪಕ್ಷಗಳ ಜೊತೆಗೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಕೇಂದ್ರಾಡಳಿತ ಪ್ರದೇಶದ ಎಲ್ಲಾ 90 ವಿಧಾನಸಭಾ ಕ್ಷೇತ್ರಗಳಲ್ಲಿಯೂ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ನ್ಯಾಷನಲ್ ಕಾನ್ಫರೆನ್ಸ್ ಕಳೆದ ವರ್ಷ ಘೋಷಿಸಿತ್ತು.

'ಬಿಜೆಪಿ ವಿರುದ್ಧ ಹೋರಾಡುವ ಕಾರಣಕ್ಕಾಗಿ ಪಕ್ಷವು 'ಇಂಡಿಯಾ' ಮೈತ್ರಿಕೂಟದ ಜೊತೆ ಕೈಜೋಡಿಸಿದೆ. ಓಮರ್ ಅವರದ್ದು ವೈಯಕ್ತಿಕ ಹೇಳಿಕೆಯಾಗಿದೆ' ಎಂದು ಪಿಡಿಪಿ ವಕ್ತಾರ ಸುಹೇಲ್ ಬುಖಾರಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕಣಿವೆ ರಾಜ್ಯದ ಜನರ ಹಕ್ಕುಗಳು ಮತ್ತು ಘನತೆಯನ್ನು ಕಾಪಾಡುವುದೇ ಗುಪ್ಕರ್ ಘೋಷಣೆಯ ಮೂಲ ಆಶಯವಾಗಿದೆ. ಸೈದ್ಧಾಂತಿಕ ಕಾರಣಕ್ಕಾಗಿ ನಾವು ಪಿಎಜಿಡಿ ಜೊತೆಗೆ ಇದ್ದೇವೆ' ಎಂದು ಪ್ರತಿಕ್ರಿಯಿಸಿದರು.

ಕ್ರಿಕೆಟ್: ಬಾಂಗ್ಲಾದೇಶ ವಿರುದ್ಧ ಔಪಚಾರಿಕ ಹಣಾಹಣಿ ಇಂದು

ಭಾರತದ ಬೆಂಚ್ ಶಕ್ತಿ ಪರೀಕ್ಷೆ?

ಪ್ರಜಾವಾಣಿ ವಾರ್ತೆ

ಮೊಹಮ್ಮದ್ ಶಮಿ ಹಾಗೂ ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಕೊಲಂಬೊ: ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಈಗಾಗಲೇ ಫೈನಲ್ ಪ್ರವೇಶಿಸಿರುವ ಭಾರತವು ಶುಕ್ರವಾರ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ರೋಹಿತ್ ಶರ್ಮಾ ನಾಯಕತ್ವದ ತಂಡಕ್ಕೆ ಇದು ಔಪಚಾರಿಕ ಪಂದ್ಯವಾಗಿದೆ. ಅಂತೆಯೇ ಮೊದಲೆರಡೂ ಪಂದ್ಯಗಳಲ್ಲಿ ಸೋತಿರುವ ಬಾಂಗ್ಲಾದೇಶ, ಇದರಲ್ಲಿ ಗೆದ್ದರೂ ಫೈನಲ್ ಪ್ರವೇಶಿಸಲು ಸಾಧ್ಯವಿಲ್ಲ.

ಆದರೆ, ಮುಂಬರುವ ವಿಶ್ವಕಪ್ ಟೂರ್ನಿಗಾಗಿ ಏಷ್ಯಾ ಕಪ್ ಹಾಗೂ ಇದೇ ತಿಂಗಳು ನಡೆಯುವ ಆಸ್ಟ್ರೇಲಿಯಾ ಎದುರಿನ ಸರಣಿಗಳು ಭಾರತ ತಂಡಕ್ಕೆ ಪೂರ್ವ ಅಭ್ಯಾಸದ ವೇದಿಕೆಗಳಾಗಿವೆ. ಆದ್ದರಿಂದ ಬೆಂಚ್‌ನಲ್ಲಿದ್ದ ಆಟಗಾರರಿಗೆ ಬಾಂಗ್ಲಾ ಎದುರಿನ ಹಣಾಹಣಿಯಲ್ಲಿ ಕಣಕ್ಕಿಳಿಸುವ ಸಾಧ್ಯತೆ ಹೆಚ್ಚಿದೆ.

ನಾಯಕ ರೋಹಿತ್ ಶರ್ಮಾ, ಶುಭಮನ್ ಗಿಲ್ ಅವರು ಅರ್ಧಶತಕ ಬಾರಿಸಿದ್ದು, ಶತಕ ಗಳಿಸಿರುವ ವಿರಾಟ್ ಕೊಹ್ಲಿ ಮತ್ತು ಕೆ.ಎಲ್. ರಾಹುಲ್ ಉತ್ತಮ ಲಯದಲ್ಲಿದ್ದಾರೆ. ಇಶಾನ್ ಕಿಶನ್ ಹಾಗೂ ಹಾರ್ದಿಕ್ ಪಾಂಡ್ಯ ಕೂಡ ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ರಾಹುಲ್ ವಿಕೆಟ್‌ಕೀಪಿಂಗ್‌ನಲ್ಲಿಯೂ ತಕ್ಕಮಟ್ಟಿಗೆ ತಮ್ಮ ಸಾಮರ್ಥ್ಯವನ್ನು ತೋರಿಸಿಕೊಟ್ಟಿದ್ದಾರೆ.

ಬೌಲಿಂಗ್‌ನಲ್ಲಿ ಕುಲದೀಪ್ ಯಾದವ್ ಮತ್ತು ರವೀಂದ್ರ ಜಡೇಜ ಪರಿಣಾಮಕಾರಿಯಾಗಿದ್ದಾರೆ. ವೇಗಿ ಬೂಮ್ರಾ ಕೂಡ ಲೈನ್ ಮತ್ತು ಲೆಂಗ್ತ್ ಕಂಡುಕೊಂಡಿದ್ದಾರೆ. ರಾಹುಲ್ ಹಾಗೂ ಬೂಮ್ರಾ ಅವರು ಈ ಟೂರ್ನಿಗೆ ಬರುವ ಮುನ್ನ ಗಾಯದಿಂದಾಗಿ ಸುದೀರ್ಘ ಸಮಯ ಆಟದಿಂದ ದೂರವಿದ್ದರು. ಆದ್ದರಿಂದ ಅವರಿಗೆ ವಿಶ್ರಾಂತಿ ಕೊಡುವ ಸಾಧ್ಯತೆ ಹೆಚ್ಚಿದೆ.

ಹಾಗೊಮ್ಮೆ ಆದರೆ, ಗಾಯದಿಂದ ಚೇತರಿಸಿಕೊಂಡಿರುವ ಶ್ರೇಯಸ್ ಅಯ್ಯರ್ ಕಣಕ್ಕಿಳಿಯಬಹುದು. ಇಶಾನ್ ವಿಕೆಟ್‌ಕೀಪಿಂಗ್ ಹೊಣೆ ನಿಭಾಯಿಸಬಹುದು. ಈ ಟೂರ್ನಿಯಲ್ಲಿ ಬೂಮ್ರಾ ಒಟ್ಟು 12 ಓವರ್ ಹಾಗೂ ಮೊಹಮ್ಮದ್ ಸಿರಾಜ್ 19.2 ಓವರ್ ಬೌಲಿಂಗ್ ಮಾಡಿದ್ದಾರೆ. ಹಾರ್ದಿಕ್ ಕೂಡ 18 ಓವರ್‌ಗಳನ್ನು ಹಾಕಿದ್ದಾರೆ.

ಕಾರ್ಯಭಾರ ನಿರ್ವಹಣೆ ಸೂತ್ರದ ಅನುಗುಣವಾಗಿ ಸಿರಾಜ್ ಅವರಿಗೆ ವಿಶ್ರಾಂತಿ ನೀಡಿ ಮೊಹಮ್ಮದ್ ಶಮಿ ಅವರನ್ನು ಆಡಿಸಬಹುದು. ಏಕದಿನ ಕ್ರಿಕೆಟ್‌ನಲ್ಲಿ ಅಷ್ಟೇನೂ ಪರಿಣಾಮಕಾರಿಯಲ್ಲದ ಅಕ್ಷರ್ ಪಟೇಲ್ ಮತ್ತು ಬ್ಯಾಟಿಂಗ್‌ನಲ್ಲಿ ಪದೇ ಪದೇ ವೈಫಲ್ಯ ಅನುಭವಿಸಿರುವ ಸೂರ್ಯಕುಮಾರ್ ಯಾದವ್ ಅವರಿಗೆ ಮತ್ತೊಂದು ಅವಕಾಶ ಸಿಗಬಹುದು.

ಬಾಂಗ್ಲಾ ತಂಡವು ಮುಷ್ಫಿಕುರ್ ರಹೀಮ್ ಅವರಿಲ್ಲದೇ ಕಣಕ್ಕಿಳಿಯಬೇಕಿದೆ. ಅವರ ಬದಲಿಗೆ ಲಿಟನ್ ದಾಸ್ ವಿಕೆಟ್‌ಕೀಪಿಂಗ್ ನಿಭಾಯಿಸುವರು. ನಾಯಕ ಶಕೀಬ್ ಅಲ್ ಹಸನ್ ಅವರು ತಂಡಕ್ಕೆ ಮರಳಿದ್ದಾರೆ.

ಮಳೆ ಸಾಧ್ಯತೆ: ಶುಕ್ರವಾರ ಸಂಜೆ ಮತ್ತು ರಾತ್ರಿ ವೇಳೆಯಲ್ಲಿ ಜೋರಾದ ಮಳೆ ಸುರಿಯುವ ನಿರೀಕ್ಷೆ ಇದೆ. ಏಷ್ಯಾ ಕಪ್ ಟೂರ್ನಿಯ ಬಹುತೇಕ ಎಲ್ಲ ಪಂದ್ಯಗಳ ಸಂದರ್ಭದಲ್ಲಿಯೂ ಮಳೆ ಸುರಿದಿತ್ತು.

ಸೂಪರ್ ಫೋರ್ ಹಂತದ ಭಾರತ ಮತ್ತು ಪಾಕ್ ನಡುವಣ ಪಂದ್ಯಕ್ಕೂ ಮಳೆ ಅಡ್ಡಿಯಾಗಿತ್ತು. ಆದ್ದರಿಂದ ಆ ಪಂದ್ಯವನ್ನು ಮೀಸಲು ದಿನದಲ್ಲಿ ಮುಂದುವರಿಸಲಾಗಿತ್ತು. ಭಾರತ ಹಾಗೂ ಬಾಂಗ್ಲಾ ಪಂದ್ಯವೂ ಸೇರಿದಂತೆ ಉಳಿದ ಯಾವುದೇ ಪಂದ್ಯಕ್ಕೂ ಮೀಸಲು ದಿನ ನಿಗದಿಯಾಗಿಲ್ಲ. ಭಾನುವಾರ ನಡೆಯುವ ಫೈನಲ್ ಪಂದ್ಯಕ್ಕೆ ಮೀಸಲು ದಿನವಿದೆ.

ಪಂದ್ಯ ಆರಂಭ: ಮಧ್ಯಾಹ್ನ 3ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಏಷ್ಯಾ ಕಪ್ 2023

ವಿಶ್ವಕಪ್ ಟೂರ್ನಿಯ ಹೊಸ್ತಿಲಲ್ಲಿ ಭಾರತ ತಂಡದ ನಾಲ್ವರು ಪ್ರಮುಖ ವೇಗಿಗಳು ಫಿಟ್ ಆಗಿರುವುದು ಶುಭಸೂಚನೆ. ಇದರಿಂದ ಭಾರತ ತಂಡವು ಬಲಿಷ್ಠವಾಗಿದೆ.
ಪಾರಸ್ ಮಾಂಬ್ರೆ
ಭಾರತ ತಂಡದ ಬೌಲಿಂಗ್ ಕೋಚ್

ಸೂಪರ್ ಫೋರ್ ಹಂತದ ನಿರ್ಣಾಯಕ ಪಂದ್ಯದಲ್ಲಿ ಪಾಕಿಸ್ತಾನಕ್ಕೆ ಸೋಲು

ಫೈನಲ್‌ಗೆ ಲಗ್ಗೆ ಹಾಕಿದ ಲಂಕಾ ಪಡೆ

ಪ್ರಜಾವಾಣಿ ವಾರ್ತೆ

ಕುಶಾಲ್ ಮೆಂಡಿಸ್ –ಎಎಫ್‌ಪಿ ಚಿತ್ರ

ಕೊಲಂಬೊ (ಪಿಟಿಐ): ಕೊನೆಯ ಕ್ಷಣದಲ್ಲಿ ಆತಂಕ ಎದುರಿಸಿದರೂ ಶ್ರೀಲಂಕಾ ತಂಡ ಅಂತಿಮ ಎಸೆತದಲ್ಲಿ ಜಯ ಗಳಿಸಿತು. ಏಷ್ಯಾ ಕಪ್ ಕ್ರಿಕೆಟ್ ಸೂಪರ್ ಫೋರ್ ಹಂತದ ನಿರ್ಣಾಯಕ ಪಂದ್ಯದಲ್ಲಿ ಪಾಕಿಸ್ತಾನವನ್ನು 2 ವಿಕೆಟ್‌ಗಳಿಂದ ಸೋಲಿಸಿ, ಫೈನಲ್ ತಲುಪಿತು.

ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಶ್ರೀಲಂಕಾ ಮತ್ತು ಭಾರತ ತಂಡಗಳು ಮುಖಾಮುಖಿಯಾಗಲಿವೆ.

ಕುಶಾಲ್ ಮೆಂಡಿಸ್ (91;87ಎ, 4X8, 6X1), ಸದೀರ ಸಮರವಿಕ್ರಮ (48; 54, 4X4) ಅವರು ಮಧ್ಯಮ ಕ್ರಮಾಂಕದಲ್ಲಿ ಲಂಕಾ ಪಡೆಗೆ ಬಲ ಒದಗಿಸಿದರೂ ಕೊನೆಯ ಹಂತದಲ್ಲಿ ಆತಂಕ ಎದುರಿಸಿತು. ಈ ಹಂತದಲ್ಲಿ ಚರಿತ ಅಸಲಂಕಾ (ಔಟಾಗದೆ 49; 47ಎ, 4X3, 6X1) ದಿಟ್ಟ ಹೋರಾಟ ನಡೆಸಿದರು. ಕೊನೆಯ ಎರಡು ಎಸೆತದಲ್ಲಿ ಆರು ರನ್ ಬೇಕಿದ್ದಾಗ 4, 2 ರನ್ ಗಳಿಸಿ ಗೆಲುವಿನ ಗಡಿ ದಾಟಿಸಿದರು.

ಇನಿಂಗ್ಸ್‌ನಲ್ಲಿ ಎರಡು ಬಾರಿ ಮಳೆ ಸುರಿದು ಆಟ ಸ್ಥಗಿತವಾಗಿತ್ತು. ಆದ್ದರಿಂದ ಎಂಟು ಓವರ್‌ಗಳನ್ನು ಕಡಿತ ಮಾಡಲಾಯಿತು.

ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಪಾಕಿಸ್ತಾನ ತಂಡವು ಮೊಹಮ್ಮದ್ ರಿಜ್ವಾನ್ ಮತ್ತು ಅಬ್ದುಲ್ಲಾ ಶಫೀಕ್ ಅವರ ಅರ್ಧಶತಕಗಳ ಬಲದಿಂದ 42 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 252 ರನ್ ಗಳಿಸಿತು. ಈ ಸವಾಲಿನ ರನ್ ಬೆನ್ನು ಹತ್ತಿದ ಶ್ರೀಲಂಕಾ 42 ಓವರ್‌ಗಳಲ್ಲಿ 8 ವಿಕೆಟ್‌ಗೆ 252 ರನ್ ಗಳಿಸಿತು. ಆರಂಭಿಕ ಆಟಗಾರರಾದ ಪಥುಮ್ ನಿಸ್ಸಾಂಕ (29) ಮತ್ತು ಕುಶಾಲ್ ಪೆರೇರಾ (17) ಬೇಗ ಔಟಾದರೂ ಮೂರನೇ ವಿಕೆಟ್‌ಗೆ ಕುಶಾಲ್ ಮೆಂಡಿಸ್ ಮತ್ತು ಸದೀರ ಸಮರವಿಕ್ರಮ ಅವರು 100 ರನ್‌ಗಳ ಜೊತೆಯಾಟ ನೀಡಿ, ತಂಡಕ್ಕೆ ಆಸರೆಯಾದರು. ಇಫ್ತಿಕಾರ್ ಅಹಮದ್ 3, ಶಾಹೀನ್ ಶಾ ಆಫ್ರಿದಿ ಎರಡು ವಿಕೆಟ್ ಪಡೆದರು.

ಟಾಸ್ ಗೆದ್ದ ಪಾಕಿಸ್ತಾನ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಐದನೇ ಓವರ್‌ನಲ್ಲಿಯೇ ಅನುಭವಿ ಬ್ಯಾಟರ್ ಫಕರ್ ಜಮಾನ್ ವಿಕೆಟ್ ಉರುಳಿಸಿದ ಲಂಕಾ ಬೌಲರ್ ಪ್ರಮೋದ ಮಧುಶಾನ ಸಂಭ್ರಮಿಸಿದರು. ಇನ್ನೊಂದು ಬದಿಯಲ್ಲಿದ್ದ ಅಬ್ದುಲ್ಲಾ ಶಫೀಕ್ (52; 69ಎ, 4X3, 6X2) ಅವರು ನಾಯಕ ಬಾಬರ್ ಆಜಂ (29) ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 64 ರನ್ ಸೇರಿಸಿದರು.

16ನೇ ಓವರ್‌ನಲ್ಲಿ ಆಜಂ ವಿಕೆಟ್ ಗಳಿಸಿದ ಸ್ಪಿನ್ನರ್ ದುನಿತ್ ವೆಲ್ಲಾಳಗೆ ಜೊತೆಯಾಟವನ್ನು ಮುರಿದರು. ಆಗ ಕ್ರೀಸ್‌ಗೆ ಬಂದ ರಿಜ್ವಾನ್ (ಅಜೇಯ 86; 73ಎ, 4X6, 6X2) ಇನಿಂಗ್ಸ್‌ಗೆ ಬಲ ತುಂಬಿದರು. ತಂಡದ ಮೊತ್ತವು 100ರ ಗಡಿ ಮುಟ್ಟಿದಾಗ ಶಫೀಕ್ ವಿಕೆಟ್ ಪಥಿರಾಣ ಪಾಲಾಯಿತು. ಅಲ್ಪಮೊತ್ತಕ್ಕೆ ಕುಸಿಯುವ ಆತಂಕದಲ್ಲಿ ಪಾಕ್ ತಂಡಕ್ಕೆ ರಿಜ್ವಾನ್ ಆಸರೆಯಾದರು. ಅವರಿಗೆ ಇಫ್ತಿಕಾರ್ ಉತ್ತಮ ಜೊತೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 42 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 252 (ಅಬ್ದುಲ್ಲಾ ಶಫೀಕ್ 52, ಮೊಹಮ್ಮದ್ ರಿಜ್ವಾನ್ ಔಟಾಗದೆ 86, ಇಫ್ತಿ ಕಾರ್ ಅಹಮದ್ 47; ಪ್ರಮೋದ್ ಮಧುಶಾನ 58ಕ್ಕೆ2, ಮಥೀಷ ಪಥಿರಾಣ 65ಕ್ಕೆ3) ಶ್ರೀಲಂಕಾ 42 ಓವರ್‌ಗಳಲ್ಲಿ 8 ವಿಕೆಟ್‌ಗೆ 252 (ನಿಸ್ಸಾಂಕ 29, ಸದೀರ 48, ಕುಶಾಲ್ ಮೆಂಡಿಸ್ 91, ಚರಿತ ಅಸಲಂಕಾ ಔಟಾಗದೆ 49; ಇಫ್ತಿಕಾರ್ ಅಹಮದ್ 50ಕ್ಕೆ3,).

ಚೀನಾದಲ್ಲಿ ನಡೆಯುವ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ಈಜುಪಟುಗಳನ್ನು ಕರ್ನಾಟಕ ಈಜು ಸಂಸ್ಥೆ (ಕೆಎಸ್‌ಎ) ಹಾಗೂ ಭಾರತ ಈಜು ಫೆಡರೇಷನ್ (ಎಸ್‌ಎಫ್‌ಐ) ವತಿಯಿಂದ ಬೆಂಗಳೂರಿನ ಪಡುಕೋಣೆ ದ್ರಾವಿಡ್ ಸೆಂಟರ್ ಆಫ್ ಸ್ಪೋರ್ಟ್ಸ್ ಎಕ್ಸಲೆನ್ಸ್‌ನಲ್ಲಿ ಗೌರವಿಸಿ ಬೀಳ್ಕೊಡಲಾಯಿತು.ಎಸ್‌ಎಫ್‌ಐ ಕಾರ್ಯದರ್ಶಿ ಮೋನಲ್ ಚೋಕ್ಸಿ, ಕೆಎಸ್‌ಎ ಅಧ್ಯಕ್ಷ ಗೋಪಾಲ ಬಿ. ಹೊಸೂರು, ಕಾರ್ಯದರ್ಶಿ ಸತೀಶ್ ಕುಮಾರ್, ಕೋಚ್ ನಿಹಾರ್ ಅಮೀನ್, ಸೆಂಟರ್ ಆಫ್ ಸ್ಪೋರ್ಟ್ಸ್ ಎಕ್ಸಲೆನ್ಸ್ ಅಧ್ಯಕ್ಷ ವಿವೇಕ್ ಇದ್ದರು

ಇ ಸ್ಪೋರ್ಟ್ಸ್‌ನಲ್ಲಿ ಪದಕದ ನಿರೀಕ್ಷೆ

ಏಷ್ಯನ್ ಗೇಮ್ಸ್: ಮೊದಲ ಬಾರಿ ನಡೆಯುವ ಬ್ರೇಕ್‌ಡಾನ್ಸ್; ಭಾರತ ತಂಡವಿಲ್ಲ!

ಬ್ರೇಕ್ ಡಾನ್ಸ್ ಪ್ರಾತ್ಯಕ್ಷಿಕೆ –ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ಇದೇ ತಿಂಗಳು ಚೀನಾದಲ್ಲಿ ಆರಂಭವಾಗಲಿರುವ 19ನೇ ಏಷ್ಯನ್ ಕ್ರೀಡಾಕೂಟದಲ್ಲಿ ಬ್ರೇಕ್ ಡಾನ್ಸ್ ಮತ್ತು ಇ ಸ್ಪೋರ್ಟ್ಸ್ ಕ್ರೀಡೆಗಳು ಹೊಸದಾಗಿ ಸೇರ್ಪಡೆಗೊಳ್ಳಲಿವೆ.

ಹಾಂಗ್‌ಜೂನಲ್ಲಿ ನಡೆಯಲಿರುವ ಕೂಟದಲ್ಲಿ ಭಾರತದ 15 ಆಟಗಾರರಿರುವ ಇ ಸ್ಪೋರ್ಟ್ಸ್ ತಂಡವು ಕಣಕ್ಕಿಳಿಯಲಿದೆ. ಅದರಲ್ಲಿ ನಿಪುಣರಾಗಿರುವ ಚರಂಜ್ಯೋತ್ ಸಿಂಗ್, ಕ್ರಿಷ್ ಗುಪ್ತಾ ಮತ್ತು ಕೇತನ್ ಗೋಯಲ್ ಅವರು ಪ್ರಮುಖರಾಗಿದ್ದಾರೆ.

ಈ ಕ್ರೀಡೆಯಲ್ಲಿರುವ ಫಿಫಾ ಆನ್‌ಲೈನ್ 4 ವಿಭಾಗದಲ್ಲಿ ಭಾರತವು ಪದಕ ಜಯಿಸುವ ಸಾಧ್ಯತೆಗಳು ಹೆಚ್ಚಿವೆ. ಈ ಆಟದಲ್ಲಿ ಭಾರತವು ವಿಶ್ವ ರ‍್ಯಾಂಕಿಂಗ್‌ನಲ್ಲಿ 13ನೇ ಹಾಗೂ ಏಷ್ಯಾದಲ್ಲಿ ಮೂರನೇ ಸ್ಥಾನದಲ್ಲಿದೆ. ಸಿಂಗಪುರ ಹಾಗೂ ಸೌದಿ ಅರೇಬಿಯಾ ಕ್ರಮವಾಗಿ ಮೊದಲೆರಡು ಸ್ಥಾನಗಳಲ್ಲಿವೆ.

ಇ ಸ್ಪೋರ್ಟ್ಸ್‌ನಲ್ಲಿ ಏಳು ವಿಡಿಯೊ ಗೇಮ್‌ಗಳಿವೆ. ಅದರಲ್ಲಿ ಡೊಟಾ ಟು, ಫಿಫಾ ಆನ್‌ಲೈನ್ ಫೋರ್, ಲೀಗ್ ಆಫ್ ಲೆಜೆಂಡ್ಸ್, ಅರೆನಾ ಆಫ್ ವೆಲೋರ್, ಡ್ರೀಮ್ ತ್ರೀ ಕಿಂಗ್‌ಡಮ್ಸ್, ಪಬ್‌ಜಿ ಮೊಬೈಲ್ ಮತ್ತು ಸ್ಟ್ರೀಟ್ ಫೈಟರ್ ಫೈವ್ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯುತ್ತವೆ.

ಬ್ರೇಕ್‌ಡಾನ್ಸ್ ತಂಡಕ್ಕೆ ಅನುಮತಿ ಇಲ್ಲ: ಆದರೆ ಭಾರತದ ಬ್ರೇಕ್‌ಡಾನ್ಸ್ ತಂಡವು ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸುವ ಅರ್ಹತೆ ಗಳಿಸಿಲ್ಲ. ಆಯ್ಕೆ ಪ್ರಕ್ರಿಯೆ ಸಮಂಜಸವಾಗಿರದ ಕಾರಣ ನಾಲ್ವರು ಡಾನ್ಸರ್‌ಗಳು ಇದ್ದ ತಂಡಕ್ಕೆ ಭಾರತ ಸರ್ಕಾರದ ಕ್ರೀಡಾ ಸಚಿವಾಲಯವು ಅನುಮತಿ ನೀಡಿಲ್ಲ.

ಬ್ರೇಕ್ ಡಾನ್ಸ್ ಸ್ಪರ್ಧೆಯನ್ನು ಮುಂದಿನ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಸೇರ್ಪಡೆ ಮಾಡಲಾಗಿದೆ. ಪದಕ ವಿಭಾಗದ ಸ್ಪರ್ಧೆಯಾಗಿ ಇದು ಸೇರ್ಪಡೆಗೊಂಡಿದೆ. ಆದ್ದರಿಂದಲೇ ಈಗ ಏಷ್ಯನ್ ಗೇಮ್ಸ್‌ನಲ್ಲಿಯೂ ಬ್ರೇಕ್‌ಡಾನ್ಸ್ ಪದಾರ್ಪಣೆ ಮಾಡಲಿದೆ. ಇದೊಂದು ನೃತ್ಯ ಪ್ರಕಾರ, ಕ್ರೀಡೆಯಲ್ಲ ಎಂಬ ಟೀಕೆಗಳೂ ಕೇಳಿ ಬಂದಿದ್ದವು. ಆದರೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ)ಯು ಇದರಲ್ಲಿ ಆರ್ಟಿಸ್ಟಿಕ್ಸ್ ಜಿಮ್ನಾಸ್ಟಿಕ್ಸ್ ಅಂಶ ಗಳೂ ಇವೆ ಎಂದೂ ಪ್ರತಿಪಾದಿಸಿತ್ತು.

ಈ ಬಾರಿ ಚೆಸ್ ಹಾಗೂ ಕ್ರಿಕೆಟ್ ಕೂಡ ಕೂಟದಲ್ಲಿ ಮರುಪ್ರವೇಶ ಗಳಿಸಿವೆ. 2006ರ ದೋಹಾ ಏಷ್ಯನ್ ಗೇಮ್ಸ್‌ನಲ್ಲಿ ಚೆಸ್ ನಡೆದಿತ್ತು. ಅದರಲ್ಲಿ ಮಹಿಳೆಯರ ವೈಯಕ್ತಿಕ ರ‍್ಯಾಪಿಡ್ ವಿಭಾಗದಲ್ಲಿ ಭಾರತದ ಕೊನೇರು ಹಂಪಿ ಹಾಗೂ ಮಿಶ್ರ ತಂಡ ವಿಭಾಗದಲ್ಲಿ ಕೃಷ್ಣನ್ ಶಶಿಕಿರಣ್, ಪೆಂಟಾಲ ಹರಿಕೃಷ್ಣ ಮತ್ತು ಕೊನೇರು ಹಂಪಿ ಅವರಿದ್ದ ತಂಡವು ಚಿನ್ನದ ಪದಕ ಜಯಿಸಿತ್ತು. 2010ರಲ್ಲಿ ಗುವಾಂಗ್‌ಜೂನಲ್ಲಿ ನಡೆದಿದ ಏಷ್ಯನ್ ಗೇಮ್ಸ್‌ನಲ್ಲಿಯೂ ಭಾರತದ ಚೆಸ್ ಪಟುಗಳೂ ಎರಡು ಕಂಚು ಗಳಿಸಿದ್ದರು.

ಡಿ. ಗುಕೇಶ್, ವಿದಿತ್ ಗುಜರಾತಿ, ಅರ್ಜುನ್ ಇರಿಗೇಶಿ, ಪೆಂಟಾಲ ಹರಿಕೃಷ್ಣ, ರಮೇಶಬಾಬು ಪ್ರಜ್ಞಾನಂದ, ಕೊನೇರು ಹಂಪಿ, ಹಾರಿಕಾ ದ್ರೋಣವಲ್ಲಿ, ಆರ್. ವೈಶಾಲಿ, ವಂತಿಕಾ ಅಗರವಾಲ್, ಬಿ. ಸವಿತಾಶ್ರೀ ಈ ಸಲ ಕಣಕ್ಕಿಳಿಯುವರು. ಇತ್ತೀಚಿನ ವರ್ಷಗಳಲ್ಲಿ ಭಾರತದ ಚೆಸ್‌ಪಟುಗಳು ವಿಶ್ವಮಟ್ಟದಲ್ಲಿ ಶ್ರೇಷ್ಠ ಸಾಧನೆ ಮಾಡುತ್ತಿದ್ದು, ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆಲುವಿನ ನಿರೀಕ್ಷೆಗಳು ಗರಿಗೆದರಿವೆ.

ಕ್ರಿಕೆಟ್ ಕೂಡ 2010 ಹಾಗೂ 2014ರ ಕೂಟಗಳಲ್ಲಿ ಇತ್ತು. 2018ರ ಕೂಟದಲ್ಲಿ ಇರಲಿಲ್ಲ. ಇದೀಗ ಟಿ20 ಕ್ರಿಕೆಟ್ ಸೇರ್ಪಡೆಯಾಗಿದ್ದು ಋತುರಾಜ್ ಗಾಯಕವಾಡ ನಾಯಕತ್ವದ ಪುರುಷರ ತಂಡ ಹಾಗೂ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಮಹಿಳಾ ತಂಡಗಳು ಕಣಕ್ಕಿಳಿಯಲಿವೆ.

ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಗೆದ್ದುಕೊಂಡ ಯಂಗ್ ಓರಿಯನ್ಸ್ ತಂಡ. (ಮುಂದಿನ ಸಾಲು; ಎಡದಿಂದ) ಆ್ಯಶ್ಲೆ, ಪ್ರಥಮ್, ಅರ್ಜುನ್ ಯಾದವ್, ಜೊನಾಥನ್ (ನಿಂತವರು) ಅರ್ಹಾಮ್, ಗೌತಮ್, ಸುಮಂತ್, ವಿನೋದ್ (ಸಹಾಯಕ ಕೋಚ್), ಕಟ್ಟಾ ಜಗದೀಶ್ (ಮ್ಯಾನೇಜರ್), ಆ್ಯರನ್, ಗಗನ್ ಹಾಗೂ ಪ್ರತ್ಯಾನ್ಷ್ –ಪ್ರಜಾವಾಣಿ ಚಿತ್ರ

ಯಂಗ್ ಓರಿಯನ್ಸ್ ಚಾಂಪಿಯನ್

ಬೆಂಗಳೂರು: ಬ್ಯಾಂಕ್ ಆಫ್ ಬರೋಡ ತಂಡದ ಪ್ರಬಲ ಹೋರಾಟವನ್ನು ಬದಿಗೊತ್ತಿದ ಯಂಗ್ ಓರಿಯನ್ಸ್ ತಂಡದವರು ಪ್ರೊ.ಎನ್.ಸಿ.ಪರಪ್ಪ ಸ್ಮಾರಕ ಟ್ರೋಫಿಗಾಗಿ ನಡೆದ ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಫೈನಲ್‌ನಲ್ಲಿ ಯಂಗ್ ಓರಿಯನ್ಸ್ ತಂಡ 78–76 ಪಾಯಿಂಟ್ಸ್‌ಗಳಿಂದ ಗೆದ್ದಿತು.

ಜೆಎಸ್‌ಸಿಗೆ ಕಿರೀಟ: ವಿವೇಕ್ಸ್ ಎಸ್‌ಸಿ ತಂಡವನ್ನು 93–81 ರಿಂದ ಪರಾಭವಗೊಳಿಸಿದ ಜೆಎಸ್‌ಸಿ ತಂಡ 'ಬಿ' ಡಿವಿಷನ್ ಲೀಗ್ ಟೂರ್ನಿ ಗೆದ್ದುಕೊಂಡಿತು.

'ಸಿ' ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಬೆಂಗಳೂರು ವ್ಯಾಂಗಾರ್ಡ್ಸ್ ತಂಡ 98–86 ಪಾಯಿಂಟ್ಸ್‌ಗಳಿಂದ ವೈಎಂಎಂಎ ತಂಡವನ್ನು ಮಣಿಸಿತು.

ಇಂಡಿಪೆಂಡೆಂಟ್ಸ್ ತಂಡಕ್ಕೆ ಜಯ

ಬೆಂಗಳೂರು: ಎಸ್. ನೋವೆಲ್ (60ನೇ) ಗಳಿಸಿದ ಗೋಲಿನ ನೆರವಿನಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 1–0ಯಿಂದ ಯಂಗ್ ಚಾಲೆಂಜರ್ಸ್ ತಂಡವನ್ನು ಪರಾಭವಗೊಳಿಸಿತು.

ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 3–0ಯಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಮಣಿಸಿತು. ವಿ. ವಿಘ್ನೇಶ್, ಸೈಯ್ಯದ್ ಉಮೈರ್, ಆರಿಫ್ ಶೇಖ್ ತಲಾ ಒಂದು ಗೋಲು ಗಳಿಸಿದರು.

ಮೈಸೂರು ರೇಸ್

ಲಾಂಗ್ ಲೀಸ್ ಗೆಲ್ಲುವ ನಿರೀಕ್ಷೆ

ಎಫ್.ಕೆ.ಇರಾನಿ ಮೆಮೋರಿಯಲ್ ಮಿಲಿಯನ್ 2023 ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಲಾಂಗ್ ಲೀಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಲೀಡ್ ಸಿಂಗರ್ 9, ವಾರ್ ಸಾಂಗ್ 1, ರೂಮರ್ ಲೇಡಿ 4
2ನೇ ರೇಸ್: ವಾರ್ ಟ್ರಯಲ್ 2, ಎಲೈಟ್ ಏಜೆಂಟ್ 6, ಸದರ್ನ್ ಅರಿಸ್ಟೊಕ್ರಾಟ್ 5
3ನೇ ರೇಸ್: ಗ್ಯಾಲಕ್ಟಿಕಸ್ 3, ಸ್ಪಿರಿಟ್ ಆಫ್ ದಿ ರೋಸ್ 12, ಆರ್ಚ್‌ವೇ 1
4ನೇ ರೇಸ್: ಆಲ್ಡ್‌ಗೇಟ್ 7, ಮಿಷಿಗನ್ ಮೆಲೋಡಿ 4, ಎಟರ್ನಲ್ ಪ್ರಿನ್ಸೆಸ್ 11
5ನೇ ರೇಸ್: ಲಾಂಗ್ ಲೀಸ್ 1, ಲೆದರ್ ಬ್ಯಾಕ್ 2
6ನೇ ರೇಸ್: ಇಂಡಿಯನ್ ಗ್ಲೋರಿ 9, ಕಾಪರ್ ಸನ್‌ರೈಸ್ 12, ಕೋರ್ಟ್ ಜೆಸ್ಟರ್ 1
7ನೇ ರೇಸ್: ಸರ್ವೋತ್ತಮ್ 5, ನ್ಯಾಚುರಲ್ ಗೋಲ್ಡ್ 6, ವಿಜಯ ಸಾರಥಿ 7

ಉತ್ತಮ ಬೆಟ್: ಗ್ಯಾಲಕ್ಟಿಕಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	3,4,5	5,6,7

ಸಂಕ್ಷಿಪ್ತ ಸುದ್ದಿ

ಖುದ್ದು ಹಾಜರಿ: ಬಜರಂಗ್‌ಗೆ ವಿನಾಯಿತಿ

ನವದೆಹಲಿ (ಪಿಟಿಐ): ಕುಸ್ತಿಪಟು ಬಜರಂಗ್ ಪೂನಿಯಾ ಅವರಿಗೆ ಕ್ರಿಮಿನಲ್ ಮಾನಹಾನಿ ಪ್ರಕರಣದಲ್ಲಿ ಖುದ್ದು ಹಾಜರಾಗುವಿಕೆಯಿಂದ ದೆಹಲಿ ನ್ಯಾಯಾಲಯವೊಂದು ಗುರುವಾರ ವಿನಾಯಿತಿ ನೀಡಿ ಆದೇಶಿಸಿದೆ. ಬಜರಂಗ್ ವಿರುದ್ಧ ಕುಸ್ತಿ ಕೋಚ್ ನರೇಶ್ ದಹಿಯಾ ಅವರು ಮಾನಹಾನಿ ಪ್ರಕರಣ ಹೂಡಿದ್ದರು.

ಬಜರಂಗ್ ಅವರು ಈ ತಿಂಗಳ 23ರಂದು ಆರಂಭವಾಗುವ ಏಷ್ಯನ್ ಗೇಮ್ಸ್‌ಗೆ ಸಜ್ಜಾಗಲು ಕಿರ್ಗಿಸ್ತಾನದಲ್ಲಿ ಅಭ್ಯಾಸ ನಡೆಸುತ್ತಿರುವುದಾಗಿ ಅವರ ವಕೀಲರು ನ್ಯಾಯಾಲಯಕ್ಕೆ ಮಾಹಿತಿ ನೀಡಿದ ನಂತರ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಯಶದೀಪ್ ಚಾಹಲ್ ಅವರು ವಿನಾಯಿತಿ ನೀಡಿದರು.

ಬಜರಂಗ್ ಅವರಿಗೆ ಜ್ವರ ಇರುವುದಾಗಿ ಅವರ ವಕೀಲರು ತಿಳಿಸಿದ್ದರಿಂದ ಈ ಹಿಂದೆ, ಸೆ. 6ರಂದು ನ್ಯಾಯಾಧೀಶರು ವೈದ್ಯಕೀಯ ನೆಲೆಯಲ್ಲಿ ವೈಯಕ್ತಿಕವಾಗಿ ಹಾಜರಾಗುವುದರಿಂದ ದಿನದ ಮಟ್ಟಿಗೆ ವಿನಾಯಿತಿ ನೀಡಿದ್ದರು.

ಕ್ರಿಕೆಟ್: ಸಂಭಾವ್ಯ ತಂಡದಲ್ಲಿ ನಿಕಿ, ಭಾವಿಕಾ

ಬೆಂಗಳೂರು: ಬಿಸಿಸಿಐ 19 ವರ್ಷದೊಳಗಿನ ಮಹಿಳಾ ಏಕದಿನ ಕ್ರಿಕೆಟ್ ಟ್ರೋಫಿ 2023–24 ಟೂರ್ನಿಗೆ ಕರ್ನಾಟಕದ 26 ಸಂಭಾವ್ಯ ಆಟಗಾರ್ತಿಯರ ತಂಡವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಪ್ರಕಟಿಸಿದೆ.

ಸಂಭಾವ್ಯ ಆಟಗಾರ್ತಿಯರು: ನಿಕಿ ಪ್ರಸಾದ್, ಭಾವಿಕಾ ರೆಡ್ಡಿ, ಮಿಥಿಲಾ ವಿನೋದ್, ಬಿ.ಜಿ. ತೇಜಶ್ವಿನಿ, ಶ್ಲೋಕಾ ವೀರ ಹೈಂದವಿ (ವಿಕೆಟ್ ಕೀಪರ್), ರೀಮಾ ಫರೀದ್, ವಂದಿತಾ ಕೆ.ರಾವ್, ಅದಿತಿ ಬಕ್ಕಾ, ಶ್ರೇಯಾ ಚರಣ್ (ವಿಕೆಟ್ ಕೀಪರ್), ವೇದಾ ವರ್ಷಿಣಿ, ರಿಮ್ಜಿಮ್ ಶುಕ್ಲಾ, ರೀತು ಆರ್. ಗೌಡ, ಚಿನ್ಮಯಿ ಶಂಕರ್, ಅನ್ನಪೂರ್ಣಾ ಜಿ. ಭೋಸಲೆ, ಪ್ರಿಯಾ ಚರಣ್, ಕೆ.ಎಸ್. ಜಾನ್ವಿ, ಕೆ.ವಿ. ದಿಶಾ, ವೈಷ್ಣವಿ ಆಚಾರ್ಯ, ಆರ್. ಹರ್ಷಿತಾ, ಸ್ವಾತಿ ಭಾಟೆ, ಸಿ. ಲಾವಣ್ಯ, ಲಾವಣ್ಯ ಮುನಿರಾಜು, ಕೆ.ಜಿ. ಆಕ್ಷಿನ್ ರೂಹಿ, ಕೆ. ನಿಸರ್ಗಾ, ಚಿನ್ಮಯಿ ಶಿವಾನಂದ್, ಶ್ರೀ ನಿಧಿ ಪಿ. ರೈ. ಕರುಣಾ ಜೈನ್ (ಕೋಚ್).

ಏಷ್ಯನ್ ಜೂನಿಯರ್ ಚೆಸ್: ಮುನ್ನಡೆಯಲ್ಲಿ ನಾಲ್ವರು

ಜಮಷೆಡಪುರ: ಅಗ್ರ ಶ್ರೇಯಾಂಕದ ಆಟಗಾರ ರಷ್ಯಾದ ಅಲೆಕ್ಸಿ ಗ್ರೆಬ್ನೆವ್ ಅವರೊಂದಿಗೆ ಭಾರತದ ಮೂವರು– ಎಸ್. ರೋಹಿತ್ ಕೃಷ್ಣ, ಆಯುಷ್ ಶರ್ಮಾ ಮತ್ತು ಎಸ್.ಅಶ್ವಥ್ ಅವರು ಏಷ್ಯನ್ ಜೂನಿಯರ್ ಚೆಸ್ ಚಾಂಪಿಯನ್‌ಷಿಪ್‌ನ ಎಂಟನೇ ಸುತ್ತಿನ ನಂತರ ಲೀಡ್ ಹಂಚಿಕೊಂಡಿದ್ದಾರೆ. ಈ ನಾಲ್ವರೂ ತಲಾ ಆರು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಗುರುವಾರ ನಡೆದ ಎಂಟನೇ ಸುತ್ತಿನಲ್ಲಿ ಮೊದಲ ಮೂರು ಬೋರ್ಡ್‌ನ ಪಂದ್ಯಗಳು ಡ್ರಾ ಆದವು. ಮೂರನೇ ಶ್ರೇಯಾಂಕದ ರೋಹಿತ್ ಕೃಷ್ಣ ಮೊದಲ ಬೋರ್ಡ್‌ನಲ್ಲಿ ಅಲೆಕ್ಸಿ ಗ್ರೆಬ್ನೆವ್ ಜೊತೆ ಪಾಯಿಂಟ್ ಹಂಚಿಕೊಂಡರು. 13ನೇ ಶ್ರೇಯಾಂಕದ ಎಸ್. ಅಶ್ವಥ್, ಬಿಳಿಕಾಯಿಗಳಲ್ಲಿ ಆಡಿದ ಮನೀಶ್ ಕ್ರಿಸ್ಟಿಯಾನೊ (5.5) ಜೊತೆ, ಭಾರತದ ಸಂಬಿತ್ ಪಾಂಡಾ, ಸ್ವದೇಶದ ಎಲ್.ಶ್ರೀಹರಿ (5.5) ಜೊತೆಗೆ ಡ್ರಾ ಮಾಡಿಕೊಂಡರು.

ಕಪ್ಪು ಕಾಯಿಗಳಲ್ಲಿ ಆಡಿದ 11ನೇ ಶ್ರೇಯಾಂಕದ ಆಯುಷ್ ಶರ್ಮಾ ನಾಲ್ಕನೇ ಬೋರ್ಡ್‌ನಲ್ಲಿ ಇಂಡೊನೇಷ್ಯಾದ ಗಿಲ್ಬರ್ಟ್ ತಾರಿಗನ್ (4.5) ಅವರನ್ನು ಮಣಿಸಿದರು. ಆರನೇ ಶ್ರೇಯಾಂಕದ ಮೋಹನ್ ಕುಶಾಗ್ರ (4.5) ಅವರು, ಅಜಯ್ ಪರ್ವತರೆಡ್ಡಿ(5.5) ಅವರಿಗೆ ಮಣಿದರು.

ಶುಕ್ರವಾರ ನಡೆಯುವ 9ನೇ ಸುತ್ತಿನ ಪಂದ್ಯದಲ್ಲಿ ಆಯುಷ್, ರೋಹಿತ್ ಅವರನ್ನು, ಗ್ರೆಬ್ನೆವ್, ಅಲಿಕ್ಯ ಮುಖೋಪಾಧ್ಯಾಯ (5.5) ಅವರನ್ನು, ಎಸ್.ಅಶ್ವಥ್, ಸಂಬಿತ್ ಪಾಂಡಾ (5.5) ಅವರನ್ನು ಎದುರಿಸಲಿದ್ದಾರೆ. ಗ್ರೆಬ್ನೆವ್ ಬಿಟ್ಟರೆ ಮೊದಲ ಐದು ಬೋರ್ಡ್‌ಗಳಲ್ಲಿ ಆಡುತ್ತಿರುವ ಉಳಿದ ಆಟಗಾರರು ಭಾರತದವರೇ ಆಗಿದ್ದಾರೆ. ನಾಲ್ಕನೇ ಬೋರ್ಡ್‌ನಲ್ಲಿ ಅಜಯ್ ಪರ್ವತರೆಡ್ಡಿ, ಮನೀಶ್ ಕ್ರಿಸ್ಟಿಯಾನೊ ಅವರನ್ನು, ಐದನೇ ಬೋರ್ಡ್‌ನಲ್ಲಿ ಶ್ರೀಹರಿ ಎಲ್., ಮಯಂಕ್ ಚಕ್ರವರ್ತಿ (5.5) ಅವರನ್ನು ಎದುರಿಸಲಿದ್ದಾರೆ.

ಹಾಂಗ್‌ಕಾಂಗ್ ಓಪನ್: ಭಾರತದ ಸವಾಲು ಅಂತ್ಯ

ಕೊವ್ಲೂನ್ (ಹಾಂಗ್‌ಕಾಂಗ್), (ಪಿಟಿಐ): ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಕಣದಲ್ಲಿದ್ದ ಎರಡು ಜೋಡಿಗಳು ನಿರ್ಗಮಿಸುವುದರೊಂದಿಗೆ ಹಾಂಗ್‌ಕಾಂಗ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲಿಗೆ ತೆರೆಬಿದ್ದಿದೆ.

ಗುರುವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಟ್ರೀಸಾ ಜೋಳಿ– ಗಾಯತ್ರಿ ಗೋಪಿಚಂದ್ ಜೋಡಿ 8–21, 14–21 ರಿಂದ ಇಂಡೊನೇಷ್ಯಾದ ಅಪ್ರಿಯಾನಿ ರಹಾಯು– ಸಿತಿ ಫದಿಯಾ ಸಿಲ್ವಾ ರಣದಂತಿ ಕೈಯಲ್ಲಿ ಪರಾಭವಗೊಂಡಿತು. 36 ನಿಮಿಷ ನಡೆದ ಹಣಾಹಣಿಯಲ್ಲಿ ಏಳನೇ ಶ್ರೇಯಾಂಕದ ಆಟಗಾರ್ತಿಯರಿಗೆ ಸಾಟಿಯಾಗಲು ಟ್ರೀಸಾ– ಗಾಯತ್ರಿ ವಿಫಲರಾದರು.

ಭಾರತದ ಕೊನೆಯ ಭರವಸೆ ಎನಿಸಿದ್ದ ಅಶ್ವಿನಿ ಪೊನ್ನಪ್ಪ– ತನಿಶಾ ಕ್ರಾಸ್ಟೊ ಜೋಡಿಯು 18–21, 7–21 ರಿಂದ ಅಗ್ರಶ್ರೇಯಾಂಕದ ಜೋಡಿ ಜಪಾನ್‌ನ ಮಯು ಮತ್ಸುಮೊಟೊ– ವಕನ ನಗಹಾರ ಎದುರು ಸೋತಿತು.

ಕೌಂಟಿ: ಮಿಂಚಿದ ಜೈದೇವ್, ಜಯಂತ್

ಲಂಡನ್ (ಪಿಟಿಐ): ಭಾರತದ ವೇಗದ ಬೌಲರ್ ಜೈದೇವ್ ಉನದ್ಕತ್ ಮತ್ತು ಸ್ಪಿನ್ನರ್ ಜಯಂತ್ ಯಾದವ್ ಅವರು ಇಂಗ್ಲೆಂಡ್‌ನ ಕೌಂಟಿ ಕ್ರಿಕೆಟ್ ಪದಾರ್ಪಣೆಯನ್ನು ಸ್ಮರಣೀಯವಾಗಿಸಿಕೊಂಡರು.

ಸಸೆಕ್ಸ್ ಪರ ಆಡುತ್ತಿರುವ ಉನದ್ಕತ್ ಅವರು ಲೆಸ್ಟರ್‌ಶೈರ್ ವಿರುದ್ಧದ 2ನೇ ಡಿವಿಷನ್ ಪಂದ್ಯದಲ್ಲಿ ಒಟ್ಟಾರೆ 9 ವಿಕೆಟ್‌ಗಳನ್ನು ಪಡೆದು, ತಮ್ಮ ತಂಡ 15 ರನ್‌ಗಳ ಗೆಲುವು ಪಡೆಯಲು ನೆರವಾದರು. ಮೊದಲ ಇನಿಂಗ್ಸ್‌ನಲ್ಲಿ 23 ರನ್‌ಗಳಿಗೆ ಮೂರು ವಿಕೆಟ್ ಪಡೆದಿದ್ದ ಎಡಗೈ ವೇಗಿ, ಎರಡನೇ ಇನಿಂಗ್ಸ್‌ನಲ್ಲಿ 94 ರನ್‌ಗಳಿಗೆ ಆರು ವಿಕೆಟ್ ಗಳಿಸಿದರು.

ಮಿಡ್ಲ್‌ಸೆಕ್ಸ್ ಪರ ಮೊದಲ ಡಿವಿಷನ್ ಪಂದ್ಯವನ್ನಾಡುತ್ತಿರುವ ಯಾದವ್, ಲ್ಯಾಂಕಾಶೈರ್ ವಿರುದ್ಧದ ಪಂದ್ಯದಲ್ಲಿ 131 ರನ್‌ಗಳಿಗೆ ಐದು ವಿಕೆಟ್ ಗಳಿಸಿದರು. ಈ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.

ಲಖನೌದಲ್ಲಿ ರಣಬಿಸಿಲು: ಅಭ್ಯಾಸದ ವೇಳೆ ಬಸವಳಿದ ಆಟಗಾರರು

ಡೇವಿಸ್ ಕಪ್ ಪಂದ್ಯಗಳ ಸಮಯ ಬದಲು

ರೋಹನ್ ಬೋಪಣ್ಣ (ಎಡ) ಅವರು ಅಭ್ಯಾಸದ ವೇಳೆ ಭಾರತ ತಂಡದ ನಾಯಕ ರೋಹಿತ್ ರಾಜ್‌ಪಾಲ್ ಅವರೊಂದಿಗೆ –ಪಿಟಿಐ ಚಿತ್ರ

ಲಖನೌ (ಪಿಟಿಐ): ಭಾರತ ಮತ್ತು ಮೊರೊಕ್ಕೊ ತಂಡಗಳ ನಡುವಣ ಡೇವಿಸ್ ಕಪ್ ಟೆನಿಸ್ ಟೂರ್ನಿಯ ವಿಶ್ವ ಗುಂಪು–2ರ ಪಂದ್ಯಗಳ ಸಮಯವನ್ನು ಅತಿಯಾದ ತಾಪಮಾನದ ಕಾರಣ ಪರಿಷ್ಕರಿಸಲಾಗಿದೆ.

ಸೆ.16 ಮತ್ತು 17ರಂದು ನಡೆಯುವ ಪಂದ್ಯಕ್ಕಾಗಿ ಅಭ್ಯಾಸ ನಡೆಸುತ್ತಿರುವ ಭಾರತ ತಂಡದ ಆಟಗಾರರು ಗುರುವಾರ ಇಲ್ಲಿನ ಸುಡುಬಿಸಿಲಿಗೆ ಬಸವಳಿದರು.

ಶನಿವಾರದ ಪಂದ್ಯಗಳನ್ನು ಮಧ್ಯಾಹ್ನ 12ರ ಬದಲು 2 ಗಂಟೆಗೆ ಹಾಗೂ ಭಾನುವಾರದ ಪಂದ್ಯಗಳನ್ನು ಬೆಳಿಗ್ಗೆ 11ರ ಬದಲು ಮಧ್ಯಾಹ್ನ 1ಕ್ಕೆ ಆರಂಭಿಸಲು ನಿರ್ಧರಿಸಲಾಗಿದೆ.

ಅಭ್ಯಾಸದ ವೇಳೆ ವಿಪರೀತ ಬೆವರುತ್ತಿದ್ದ ರೋಹನ್ ಬೋಪಣ್ಣ, 'ತಾಲೀಮು ಅವಧಿಯಲ್ಲಿ ಈ ರೀತಿಯಲ್ಲಿ ಬೆವರುತ್ತಿದೆ ಎಂದಾದರೆ, ಏನೋ ಗಂಭೀರ ಸಮಸ್ಯೆ ಇದೆ ಎಂದರ್ಥ' ಎಂದು ಹೇಳಿದ್ದಾರೆ. ಯೂಕಿ ಭಾಂಬ್ರಿ ಮತ್ತು ಸಾಕೇತ್ ಮೈನೇನಿ ಕೂಡಾ ಸೆಕೆಯ ಪರಿಸ್ಥಿತಿಗೆ ಹೊಂದಿಕೊಳ್ಳಲು ಹರಸಾಹಸಪಟ್ಟರು.

ತಾಪಮಾನ 33 ಡಿಗ್ರಿ ಸೆಲ್ಸಿಯಸ್ ಇದೆಯಾದರೂ, ಅದು 43 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ ಎಂದು ಭಾಸವಾಗುತ್ತಿದೆ. ಕೆಲ ದಿನಗಳ ಹಿಂದೆ ಇಲ್ಲಿ ಮಳೆ ಸುರಿದದ್ದು ಇಂತಹ ಪರಿಸ್ಥಿತಿಗೆ ಕಾರಣ. ಅಂಕಣದಿಂದ ಏಳುವ ಬಿಸಿಯೂ ಆಟಗಾರರಿಗೆ ಇನ್ನಷ್ಟು ಸವಾಲಾಗಿ ಪರಿಣಮಿಸಿದೆ.

'ಇಂತಹ ಸೆಕೆಯ ಪರಿಸ್ಥಿತಿಯಲ್ಲಿ ಆಡುವಾಗ ಆಟಗಾರನ ದೇಹದಿಂದ ಪ್ರತಿ ಗಂಟೆಗೆ 2 ರಿಂದ 3 ಲೀ.ನಷ್ಟು ನೀರು ಬೆವರಿನ ರೂಪದಲ್ಲಿ ಹೊರಹೋಗುತ್ತದೆ. ಅಷ್ಟೇ ಪ್ರಮಾಣದ ನೀರು ಕುಡಿಯದಿದ್ದರೆ, 30 ನಿಮಿಷಗಳ ಒಳಗಾಗಿ ದೈಹಿಕ ಸಾಮರ್ಥ್ಯ ಕುಗ್ಗುತ್ತದೆ. ಅಂತಿಮವಾಗಿ ಮಾಂಸಖಂಡದ ಸೆಳೆತಕ್ಕೆ ಒಳಗಾಗುವರು' ಎಂದು ಭಾರತ ತಂಡದ ಫಿಸಿಯೊ ಯಶ್ ಪಾಂಡೆ ಎಚ್ಚರಿಸಿದ್ದಾರೆ.

'ಪಂದ್ಯ ಆರಂಭದ ಸಮಯವನ್ನು ಬದಲಾವಣೆ ಮಾಡಿರುವುದು ದಿನದ ಎರಡನೇ ಸಿಂಗಲ್ಸ್ ಪಂದ್ಯ ಆಡುವ ಆಟಗಾರರಿಗೆ ನೆರವಾಗಲಿದೆ. ಏಕೆಂದರೆ ಮಧ್ಯಾಹ್ನ 2ಕ್ಕೆ ಆರಂಭವಾಗಬೇಕಿದ್ದ ಪಂದ್ಯ ಸಂಜೆ 4ಕ್ಕೆ ಶುರುವಾಗಲಿದೆ. ಇಲ್ಲಿನ ಪರಿಸ್ಥಿತಿ ಉಭಯ ತಂಡಗಳಿಗೂ ಸವಾಲಾಗಿ ಪರಿಣಮಿಸಲಿದೆ. ಆಟಗಾರರ ಫಿಟ್‌ನೆಸ್ ಕೂಡಾ ಫಲಿತಾಂಶದ ಮೇಲೆ ನಿರ್ಣಾಯಕ ಪರಿಣಾಮ ಬೀರುವ ಸಾಧ್ಯತೆಯಿದೆ' ಎಂದು ಭಾರತ ತಂಡದ ಕೋಚ್ ಜೀಶಾನ್ ಅಲಿ ಹೇಳಿದ್ದಾರೆ.